ಪ್ರಕಟನೆಯ ೫೦ನೆಯ ವರ್ಷ

ಸಂಕ್ರಮಣ

ಮಾರ್ಚ - ಏಪ್ರಿಲ್ ೨೦೧೫

ಸಂಪಾದಕ: ಚಂದ್ರಶೇಖರ ಪಾಟೀಲ

೪೨೦

ಕುವೆಂಪು ನಾಟಕಗಳು : ಹಿಂದೀ ಅನುವಾದ

ಬಸವ ಸಿನಿಮಾ ಬುದ್ಧ ಪ್ರತಿಮಾ

ಟಿ. ಜಿ. ರಾಘವರ ಕತೆ : ೯/೧೧

ಇಂದಿರಾ ಲಂಕೇಶರ
'ಹುಳಿಮಾವು ಮತ್ತು ನಾನು'

ಕಣ್ಮರೆಯಾದ ಕವಿ : ಶಂಕರ ಕಟಗಿ

ಚಂಪಾಕಾಲಂ
ಈ ನಾನೆಂಬ ನನ್ನ ಕತೆ

ಸಂಕ್ರಮಣ ಪ್ರಕಾಶನ, ಬೆಂಗಳೂರು

ಸಂಕ್ರಮಣ

ಸಾಹಿತ್ಯ ಸಂಕಲನ

ಸಂಪುಟ : ೫೦ ಸಂಚಿಕೆ : ೦೨

ಮಾರ್ಚ - ಏಪ್ರಿಲ್ ೨೦೧೫

ಸಂಪಾದಕ

ಚಂದ್ರಶೇಖರ ಪಾಟೀಲ (ಚಂಪಾ)

ಸಹಾಯ

ನೀಲಾ ಪಾಟೀಲ

ಮೀನಾ ಪಾಟೀಲ

ವಾರ್ಷಿಕ ಚಂದಾ : ರೂ. ೨೦೦

ಐದು ವರ್ಷಕ್ಕೆ : ರೂ. ೯೦೦

ಆಜೀವ ಚಂದಾ : ರೂ. ೩,೦೦೦

ಮಹಾ ಪೋಷಕತ್ವ : ರೂ. ೫,೦೦೦

ಸಂಕ್ರಮಣ ಪ್ರಕಾಶನ

ಎರಡನೆ ಮೇನ್, ಜ್ಯೋತಿ ಲೇಔಟ್

ಯೆಲಚೇನಹಳ್ಳಿ, ಜೆ. ಪಿ. ನಗರ ಅಂಚೆ

ಬೆಂಗಳೂರು ೫೬೦ ೦೭೮

ಫೋನು: ೦೮೦-೨೬೩೨ ೩೩ ೪೪

ಮೊಬೈಲ್: ೯೪೪೯೦-೬೯೩೪೪

ಸಂಕ್ರಮಣ ಪ್ರಕಾಶನ : ಬ್ಯಾಂಕ್ ಖಾತೆ

ಕರೆಂಟ್ ಅಕೌಂಟ್

ಸಂಖ್ಯೆ : ೫೪೦೨೧೭೨-೫೫೭೪೯

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು (SBM)

ಬಸವನಗುಡಿ ಶಾಖೆ, ಬೆಂಗಳೂರು - ೦೪.

IFSC No. SBMY 00 40014

ಯಾವ ಹೆಚ್ಚಿನ ವೆಚ್ಚವೂ ಇಲ್ಲದೆ ಈ ಖಾತೆಗೆ ನೀವು ಚಂದಾ ಸಂದಾಯ ಮಾಡಬಹುದು. ನಿಮ್ಮ ಬ್ಯಾಂಕ್ ಮ್ಯಾನೇಜರರ ಸಲಹೆ ಪಡೆಯಿರಿ.

ಹೀಗೆ ಮಾಡಿದ ನಂತರ ನೀವು ನಮಗೆ ಒಂದು ಪತ್ರ ಬರೆಯಬೇಕು.

ಲಿಪಿ ಜೋಡಣೆ ಹಾಗೂ ಮುದ್ರಣ

ನೇತ್ರಾ ಪ್ರಿಂಟರ್ಸ್

ಬೆಂಗಳೂರು-೫೬೦ ೦೧೮

ಈ ಸಂಚಿಕೆಯಲ್ಲಿ

ಈ ನಾನೆಂಬ ನನ್ನ ಕತೆ
ಚಂದ್ರಶೇಖರ ಪಾಟೀಲ ೦೧

ಕುವೆಂಪು ನಾಟಕಗಳು : ಹಿಂದೀ ಅನುವಾದ
ಸಿದ್ದಲಿಂಗ ಪಟ್ಟಣಶೆಟ್ಟಿ ೧೯

ಬಸವ ಸಿನಿಮಾ ಬುದ್ಧ ಪ್ರತಿಮಾ
ಕುಪ್ಪಳ್ಳಿ ಎಂ. ಬೈರಪ್ಪ ೩೭

ಟಿ.ಜಿ.ರಾಘವ ಅವರ ಕತೆ
'ಒಂಭತ್ತು / ಹನ್ನೊಂದು'
ಬಿ. ಟಿ. ದೇಸಾಯಿ ೪೭

ಇಂದಿರಾ ಲಂಕೇಶ್ ಅವರ
'ಹುಳಿಮಾವು ಮತ್ತು ನಾನು'
ಎಚ್. ಶಶಿಕಲಾ ೬೩

ಕಣ್ಮರೆಯಾದ ಕವಿ : ಶಂಕರ ಕಟಗಿ
ರಾಜಶೇಖರ ಮಠಪತಿ (ರಾಗಂ) ೬೯

೨೦೧೪ರ ಪ್ರಕಟಣೆಗಳು ೭೬

ಕಾವ್ಯ

ವಿಷ್ಣು ನಾಯ್ಕ ೧೩
ಪ್ರಕಾಶ ಗ. ಖಾಡೆ ೧೮
ಜೆ. ಎಸ್. ಆಮೂರ ೩೬
ವಾಸುದೇವ ಶೆಟ್ಟಿ ೬೨
ದೊಡ್ಡಣ್ಣ ಬಜಂತ್ರಿ ೭೩
ಮುತ್ತು ರಾಜು ೭೪
ಕರುಣಾಕರ ಎನ್. ಶೆಟ್ಟಿ ೭೫

ಈ ನಾನೆಂಬ ನನ್ನ ಕತೆ*

• ಚಂದ್ರಶೇಖರ ಪಾಟೀಲ

"ನೀವು ಯಾಕೆ ನಿಮ್ಮ ಆತ್ಮಚರಿತ್ರೆ ಬರೆಯಬಾರದು?" - ಇತ್ತೀಚಿನ ಹತ್ತು ಹದಿನೈದು ವರ್ಷಗಳಲ್ಲಿ ನಾನು ಅನೇಕ ಬಾಯಿಗಳಿಂದ ಉದುರುವ ಈ ಪ್ರಶ್ನೆಯನ್ನು ಕೇಳುತ್ತಲೇ ಬಂದಿರುವೆ. ತಕ್ಷಣ ನನ್ನ ಉತ್ತರಗಳು ಸ್ವಲ್ಪ ಉಡಾಫೆಯವೇ. "ಯಾಕ್ರೀ ನನಗ ಅಷ್ಟು ವಯಸ್ಸಾತೇನು?" - ಎಂಬ ಹುಸಿ ಮುನಿಸು. "ಆತ್ಮ ಎಂದರೇನು? ಅದರ ಅರ್ಥವೇ ನನಗಿನ್ನೂ ಆಗಿಲ್ಲ. ನಿಮಗಾಗಿದೆಯೇ?" - ಎಂಬ ಸ್ವಲ್ಪ ಸೀರಿಯಸ್ಸಾದ ಮರುಪ್ರಶ್ನೆ. "ಚರಿತ್ರೆ.. ಅಂದರೆ? ಹಿಸ್ಟರಿಯೋ ಕ್ಯಾರಕ್ಟರೋ" - ಎಂಬ ಸಣ್ಣ ತಕರಾರು... ಹೀಗೆ.

ಇತ್ತೀಚಿನ ಒಂದು ವರ್ಷ ನಮ್ಮ ಚೈತ್ರನನ್ನು - (ಚೈತ್ರ - ನಮ್ಮ ಮಿನ್ನಿಯ ಮಗ; ಮಿನ್ನಿ - ನನ್ನ ಮಗಳು ಮೀನಾ.) - ಕಾಲೇಜಿಗೆ ಎಡ್ಮಿಶನ್ ಮಾಡಿಸಲು ಹೋಗಿದ್ದೆ. ಪರಿಚಯದ ಪ್ರಿನ್ಸಿಪಾಲರು ಅದೇ ಪ್ರಶ್ನೆ ಕೇಳಿದರು. ನಾನು ನಕ್ಕೆ - ಯಥಾ ಪ್ರಕಾರ. ಅವರು ಗಂಭೀರವಾಗಿಯೇ ಕನ್ನಡದ ಖ್ಯಾತನಾಮರನ್ನು ಹೆಸರಿಸಿ, "ನೋಡಿ ಸಾರ್, ಅವರ ಎಲ್ಲಾ ಕೃತಿ ನಮಗೆ ಗೊತ್ತು, ಅವರ ಬಗ್ಗೆಯೇ ನಮಗೆ ಗೊತ್ತಿಲ್ಲ. ಸಕಾಲಕ್ಕೆ ಆಟೋಬಯಾಗ್ರಫಿ ಬರೆಯದೇ ಹೋಗಿಬಿಟ್ಟರು!" ಅಂದಾಗ ನನಗೆ ಸ್ವಲ್ಪ ಆತಂಕ. ನಾನು ಪ್ರತಿ ವರ್ಷದ ಸುರುವಾತಿನಲ್ಲಿ ಹೊಸ ಡೈರಿ ಸುರುಮಾಡುತ್ತೇನೆ. ಗೋಡೆಯ ಮೇಲೆ ಕ್ಯಾಲೆಂಡರ್ ಬದಲಾಗುತ್ತದೆ. ಮೊಬೈಲಿಗೆ ಹೊಸ ವರ್ಷದ ಶುಭಾಶಯ ಬರುತ್ತವೆ. ಹಿಂದಿನ ಡಿಸೆಂಬರ್ ಮೂವತ್ತೊಂದರ ರಾತ್ರಿ ಹನ್ನೆರಡಕ್ಕೆ ಸರಿಯಾಗಿ ನಮ್ಮ ಬಡಾವಣೆಯ ಹುಡುಗರು ಪಟಾಕ್ಷಿ ಹಾರಿಸುತ್ತಾರೆ. ಈ ನಿರಂತರ ಜಂಗಮದ ಜಂಜಾಟದಲ್ಲಿ ನಾನೊಬ್ಬ ಸ್ಥಾವರನೆಂದೇ ನನಗನ್ನಿಸಿದೆ. ನನಗೂ ವಯಸ್ಸಾಗುತ್ತಿದೆ ಎಂಬ ಭಾವ ಸುತ್ತಲೂ ಸುಳಿಯದ ಹಾಗೆ ಅಪ್ರಜ್ಞಾಪೂರ್ವಕವಾಗಿ ಯಾವುದೋ ಒಂದು ಕೋಟೆ ಕಟ್ಟಿಕೊಂಡಿರಬಹುದೇನೋ ನಾನು.... ಆದರೆ ಎಲ್ಲರಿಗೂ ಆದಂತೆ ನನಗೂ ವಯಸ್ಸಾಗುತ್ತಿದೆ; ನನ್ನ ಓರಗೆಯವರಿಗೂ.

ವಿರಾಮದ ವೇಳೆಯಲ್ಲಿ ಚಿತ್ತ ನಾಳೆ ನಾಡದಿನ ಸಾಧ್ಯತೆ-ಸಂಭಾವ್ಯತೆಗಳ ಕಡೆ ಹರಿಯುತ್ತಿದ್ದರೂ ಆ ಹರಿವು ತಾನೇ ನಿಂತು ಯಾಕೋ ನಿನ್ನೆ - ಮೊನ್ನೆ - ಆಚೆ ಮೊನ್ನೆಗಳ ಕಡೆ ಯು-ಟರ್ನ್ ತೆಗೆದುಕೊಳ್ಳುತ್ತದೆ. ಪ್ರತಿ ಬೆಳಗಿನ ಆ ಅರೆನಿದ್ದೆ ಅರೆಎಚ್ಚರದ ಕ್ಷಣಗಳಂತೂ ನನ್ನ ಜೀವಿತದ ಯಾವ ಯಾವುದೋ ಕಾಲಘಟ್ಟಗಳಿಂದ ಪುದು ಪುದು ಅಂತ ಎದ್ದೆದ್ದು ಬರುವ ನೆನಪುಗಳ ಹುಲಗೂರು ಸಂತೆ. ಆ ಸಂತೆಯ ಗದ್ದಲದಲ್ಲಿ ಅರೆಗಣ್ಣು ಮುಚ್ಚಿ ಏಕತಾರಿ ಮಿಡಿಯುತ್ತ

---

* ಈ ವರ್ಷಾಂತ್ಯದಲ್ಲಿ ಇದೇ ಶೀರ್ಷಿಕೆ ಹೊತ್ತು ಹೊರಬರಲಿರುವ ಪುಸ್ತಕದ ನಾಂದಿ-ಪ್ರಕರಣವಿದು. -ಚಂಪಾ

ಏನೇನೋ ಗುಣಗುಣಿಸುತ್ತ, ತೆರೆಗಳ ಮೇಲೆ ತೆಪ್ಪ ತೇಲುವಂತೆ ಬರುತ್ತಿರುವ ಈ 'ನಾನು' ಎಂಬ ಶರೀಘನನ್ನು ನನ್ನ ಈ ಕ್ಷಣದ ವರ್ತಮಾನಕ್ಕೆ ಎಳಕೊಂಡು ಬರುವುದೇ ದೊಡ್ಡ ಪಣಗಲ.

ಹೌದು. ಈ ಶರೀಘನ ಗೋಣಗಿಗೆ ಒಂದು ನಾದ ಬೇಕು, ಲಯ ಬೇಕು, ಗತಿ ಬೇಕು. ಅದು ಬರಬರುತ್ತ ಒಂದು ಹಾಡಾಗಬೇಕು. ಅರ್ಥಾತ್ ಅದಕ್ಕೊಂದು ಕ್ರಮ ಬೇಕು. ಶಾಲೆಯ ಮೈದಾನದಲ್ಲಿ ಮನಬಂದಂತೆ ಹಾರಾಡುತ್ತಿರುವ ಹುಡುಗರನ್ನು ಒಂದು ಸಾಲಿನಲ್ಲಿ ನಿಲ್ಲಿಸಿ ಸೀಟಿ ಹೊಡೆದು ನಡೆ ಮುಂದೆ ನಡೆ ಮುಂದೆ ಎಂದು ಸೂಚನೆ ಕೊಡಬೇಕು. ಇದು ಸಾಧ್ಯವಾಗಬೇಕಾದರೆ ನಾನು - (ಸೀಟಿ ಹೊಡೆಯುವ ಮನುಷ್ಯ) - ಒಂದು ಕಾಲಬಿಂದುವಿನಲ್ಲಿ, ತಾತ್ಕಾಲಿಕವಾದರೂ, ನಿಲ್ಲಬೇಕು. ನಿಂತು, ನಡೆದು ಬಂದ ದಾರಿಯ ಕಡೆ ಕಣ್ಣು ಹೊರಳಿಸಬೇಕು. ಈ ದಾರಿಯ ಉದ್ದ ನನಗೂ ಗೊತ್ತಿಲ್ಲ. ಈ ದಾರಿ ಒಮ್ಮೊಮ್ಮೆ ರಾಜ ಮಾರ್ಗ; ಹಲವು ಸಲ ಅಡ್ಡ ಹಾದಿ; ಕೆಲವೊಮ್ಮೆ ಅಂತೂ ಮುಗಿಲಂಚಿಗೆ ಸುಳಿವ ಕೊಳ್ಳಿ ದೆವ್ವದ ಹಾಗೆ ಕಣ್ಣಿಗೆ ಕಂಡರೂ ಮತ್ತೆ ಮಟಾಮಾಯ. ಇದು ಒಂದು ನಮೂನೆಯ ಹಿಂಬರಕಿ ಪ್ರಯಾಣ - ಭೂತಾನ್ವೇಷಣೆ. ದೆವ್ವ-ಭೂತ-ಪಿಶಾಚಿಗಳಿಗೆ ಪಾದಗಳು ತಿರುಗು ಮುರುಗು ಆಗಿರುತ್ತವಂತೆ!

ನಾನು ಹಾಯುವಾಗ
ಎದೆ ತೆರೆದಂತೆ
ಅಗಲವಾಗುವ ದಾರಿ
ನಾ ಹೋದ ಮೇಲೆ
ಮತ್ತೆ ಮುದುಡಿಕೊಂಡು
ಉದ್ದೋಕ
ಮಲಗುತ್ತದೆ

ಇದು ೧೯೬೭ರಲ್ಲಿ ನಾ ಬರೆದ ಕವಿತೆ. ಇಂಥ ಹಾದಿಯ ಗುಂಟ ಹಿಂಪಯಣ ಮಾಡಲು ಅನುವಾಗುವಂತೆ ಒಂದು ಕಾಲ ಬಿಂದುವನ್ನು ಕಲ್ಪಿಸಿಕೊಳ್ಳಲು ಈಗ ಸಾಧ್ಯವೇ? .. ಇದು ನನ್ನ ಸದ್ಯದ ತಲೆನೋವು.

'ಸಾಧ್ಯ' - ಅನ್ನಿಸುತ್ತದೆ. ಮನಸ್ಸಿದ್ದಲ್ಲಿ ಮಾರ್ಗ ಎನ್ನುತ್ತಾರಲ್ಲ - ಹಾಗೆ. ಮನಸ್ಸಿಗೆ ಯಾವುದು ಸಾಧ್ಯವಿಲ್ಲ? ಕಣ್ಣು ತೆರೆದುಕೊಂಡಿದ್ದರೂ ಅದರ ಕಣ್ಣು ತಪ್ಪಿಸಿ ಈ ಮನಸ್ಸೆಂಬ ಮರ್ಕಟ ಯಾವ್ಯಾವುದೋ ಅಡವಿಗೆ ನುಗ್ಗಿ ಸಿಕ್ಕ ಸಿಕ್ಕ ಗಿಡಗಳ ಟೊಂಗೆ ಟೊಂಗೆಗಳನ್ನು ಜೀಕ ಬಹುದು. 'ಇಲ್ಲೆ ಇರು' - ಅಂತ ಈ ಕ್ಷಣವನ್ನು ಇಲ್ಲಿಯೇ ಗೂಟಕ್ಕೆ ಬಡಿದು, ಎಲ್ಲಿಯೋ ಹೋಗಿ ಮಲ್ಲಿಗೆಯನ್ನು ತರಬಹುದು... ಸರಿ, ಅಂಥ ಕೆಲಸಕ್ಕೆ ಕೈ ಹಚ್ಚೋಣ ಅಂತ ನಿರ್ಧರಿಸಿರುವೆ.

*

ಜೂನ್ ಹದಿನೆಂಟು. ಎಷ್ಟೋ ವರ್ಷಗಳ ಹಿಂದೆ ಈ ದಿನಾಂಕದಂದು ನಾನು ಹುಟ್ಟಿದೆನಂತೆ. ಕ್ರಿಶ್ಚಿಯನ್ ಕ್ಯಾಲೆಂಡರಿನ ಪ್ರಕಾರ; ಆರನೇ ತಿಂಗಳು, ಹದಿನೆಂಟನೇ ದಿನ. ಇಸ್ವಿ? ... ಅದೇನೂ ಮುಖ್ಯವಲ್ಲ. ವಿಚಿತ್ರ ನೋಡಿರಿ. ಆ ಇಸ್ವಿ ಈಗಾಗಲೇ ಬಂದು ಹೋಗಿದೆ. ಅದು ಮತ್ತೆಂದೂ ಬರುವಂತಿಲ್ಲ. ಆದರೆ ದಿನ ಮತ್ತು ತಿಂಗಳು ಮತ್ತೆ ಮತ್ತೆ ಬರುತ್ತವೆ. ಗಿಡ ಮರ ಮತ್ತೆ ಮತ್ತೆ ಹೂವು ಮುಡಿಯುವಂತೆ; ಮನುಷ್ಯನಾದಿಯಾಗಿ ಸಕಲ ಪ್ರಾಣಿ-ಪಕ್ಷಿ-ಕೀಟಗಳು ಮತ್ತೆ ಮತ್ತೆ ಬಸಿರು ಧರಿಸುವಂತೆ. ಆದರೆ ಪಾಪ, ಈ ಇಸ್ವಿಗೆ ಮಾತ್ರ ಮರುಜನ್ಮದ ಭಾಗ್ಯವಿಲ್ಲ; ಅದು ಸತ್ತು, ಭೂತವಾಗಿ, ಅಂತರಪಿಶಾಚಿಯಾಗಿ ಅಲ್ಲಿಲ್ಲೊ ಅಲೆಯುತ್ತಿರಬಹುದು. ಆದರೆ ಒಂದು ಮಾತ್ರ ಖರೆ: ಆ ಇಸ್ವಿ ಈ ನಾನೆಂಬ ನನ್ನ ಜೀವಿತದ ನಿಶ್ಚಿತ ಕಾಲಬಿಂದು. ಅಲ್ಲಿಂದ ಈಚೆಯದೇ ನನ್ನ ಇತಿಹಾಸ, ನನ್ನ ಚರಿತ್ರೆ, ನನ್ನ ಕತೆ. ನನ್ನ ಜೀವಿತದ ಸದ್ಯದ ಬಿಂದುವಿನಿಂದ ಆ ಬಿಂದುವಿನ ಕಡೆಗೆ ನನ್ನ ಚಲನೆ.

ಕಣ್ಣ ತುಂಬ ಅಮೇರಿಕಾ ಎಂಬ ಕನಸಿನ ಬಿಂಬ ತುಂಬಿಕೊಂಡು ಕಡಲಿಗಿಳಿದ ಕೋಲಂಬಸ್‌ನ ಹಾಯಿದೋಣಿ ಹಾದಿ ತಪ್ಪಿ ಇಂಡಿಯಾಕ್ಕೆ ಬಂದಿತಂತೆ. ಇದು ಅವನ ಇತಿಹಾಸ. ಈ ಕಡಲು, ಈ ಹಡಗು / ದೋಣಿ / ನಾವೆ... ನನ್ನನ್ನು ಮೊದಲಿನಿಂದಲೂ ಕಾಡುತ್ತಿರುವ ಒಂದು ಪ್ರತೀಕ (ಮೆಟಫರ್). ನನ್ನ ಮೊದಲ ಸಂಕಲನ - 'ಬಾನುಲಿ'. ಅದರ ಮೊದಲ ಕವನ - 'ಹೊಂಗನಸ ಹಡಗು'. ಬರೆದದ್ದು ೧೯೫೭ರಲ್ಲಿ. ನಾನು ಹಾವೇರಿ ಹೈಸ್ಕೂಲಿನಿಂದ ಎಸ್. ಎಸ್. ಸಿ ಪಾಸಾಗಿ ಧಾರವಾಡದ ಕರ್ನಾಟಕ ಕಾಲೇಜಿಗೆ ಬಂದಿದ್ದೆ.

ಎನ್ನೆದೆಯ ಬಂದರದಿ ಹೊಂಗನಸ ಹೊಸ ಹಡಗು
ಲಂಗರನು ಹಾಕಿ ತಾ ನಿಂತಿರುತಿರೆ
ನೀಲ ಕ್ಷಿತಿಜದ ಆಚೆ ಹೊಳೆವ ನನಸಿನ ಲೋಕ
ಬಾ ಬಾರೆ, ಬಾ ಎಂದು ಬಲು ಕರೆದಿರೆ...

ಇದು ಕವನದ ಪ್ರಾರಂಭ. (ಮುಂದೆ ಕೇವಲ ಎಂಟೇ ಸಾಲುಗಳಲ್ಲಿ ಆ ಹಡಗಿಗೆ ಬಾಂಬು ಬಿದ್ದು ಅದು ಒಡೆದು ಹೋಗಿತ್ತು! ಆ ಹದಿಹರೆಯದ ದಿನಗಳಲ್ಲಿ ಕವನಗಳು ಹುಟ್ಟಿ, ಬೆಳೆದು, ಸಾಯುವ ಸ್ಟೈಲೇ ಅದ್ಭುತವಾಗಿತ್ತು.)

ಮುಂದೆ ನಾಲ್ಕೇ ವರ್ಷಗಳಲ್ಲಿ (೧೯೬೧) - ಆ 'ಹೊಂಗನಸ ಹಡಗು' ನನ್ನ ಬದುಕಿನಲ್ಲಿ, ಭೂತವಾಗಿ ಬಂದು ಸೇಡು ತೀರಿಸಿಕೊಂಡಿತ್ತು. ಅದೀಗ ರೂಪಾಂತರ ಹೊಂದಿದ್ದು 'ಮುರುಕು ಡೋಣಿ' ಯಾಗಿ.

ಏಕಾಕಿ

ಆದಿ ಎಲ್ಲಿಯೋ ಅಂತ್ಯ ಎಲ್ಲಿಯೋ
ಒಂದೂ ಅರಿಯದೆಯೆ,
ಅಂತೂ ಇಂತೂ ಮುರುಕು ಡೋಣಿಯಲಿ
ಪಯಣಕೆ ಹೊರಟಿರುವೆ.

ಜೊತೆಯ ನಾವಿಕರು ನಡು ನೀರಿನಲೇ
ಕೈಯ ಬಿಟ್ಟುಬಿಡಲು,
ಬರಿ ಮೈ - ಗಾಳಿಯನಪ್ಪಿ ನಿಂತಿರುವೆ
ಬೆದರಿಸಿಹುದು ಕಡಲು.

ಮೇಳಗಾನದಾ ತುಣುಕು ನರಳುತಿದೆ:
ಲೇ ಲಾಲಿ ಲೇಸೋ.....
ಬಾನ ಬೀದಿಯಲಿ ಕಡಲು ಹಕ್ಕಿಗಳು
ಸುಳಿದು ಹೋದವೇಸೋ

ಜನುಮಕೆ ಹೊಂದಿಯೆ ಬಂದ ಜೀವಗಳು
ಮರೆವಿನ ಮಂಜಿನಲಿ
ಅಡಗಿವೆ. ಆಸೆಗಳೆಲ್ಲಾ ಮಡಗಿವೆ
ಕ್ಷಿತಿಜದ ಶೂನ್ಯದಲಿ.

ಬರಡು ಮೈ ತಳೆದ ಕೊರಡು ಕನಸುಗಳು
ತೆರೆಯಲಿ ತೇಲುತಿವೆ.
ಬಣ್ಣ ನಗೆ ಹೊತ್ತ ಬುರುಗು ಗುಳ್ಳೆಗಳು
ಪಟ್ಟನೆ ಒಡೆಯುತಿವೆ.

ತೆರೆಯ ಧಡಿಕೆಯಲಿ ಡೋಣಿ ಕುಪ್ಪಳಿಸಿ
ರುದ್ರಗೀತೆ ಹಾಡೆ
ಕುದಿಯುತಿರುವೆನೋ ಎದೆಯ ಹಾಲಿನಲಿ
ಕಡಲಿನುಪ್ಪು ಕೂಡೆ.

'Alone, alone, all all alone
Alone on a wide wide sea',
ಹಾಳ್ ಹಾಳ್ ಸುರಿದಿದೆ ಬಾನ್
ಅನಂತ ಮೌನದಲಿ.

*

ಈ ಕವನ ಬೆಟಗೇರಿ ಕೃಷ್ಣ ಶರ್ಮ (ಆನಂದ ಕಂದ) ಸಂಪಾದಕತ್ವದ 'ಜಯಂತಿ' ಮಾಸಿಕದಲ್ಲಿ ಪ್ರಕಟವಾಗಿತ್ತು.

ಆ ದಿನಗಳಲ್ಲಿ ಆ ರಾತ್ರಿಗಳಲ್ಲಿ ನಾನು ಅಕ್ಷರಶಃ ಏಕಾಂಗಿಯಾಗಿದ್ದೆ - *alone, alone, all all alone*.

ಆ ದೃಶ್ಯ ನಾನು ಮರೆತಿಲ್ಲ. ಮರೆಯುಂತೆಯೂ ಇಲ್ಲ. ನನ್ನ ಬದುಕಿನುದ್ದಕ್ಕೂ ಅಟ್ಟಿಸಿಕೊಂಡು ಬಂದಿರುವ ದೃಶ್ಯವದು. ಸಿಹಿಯೋ... ಕಹಿಯೋ... ನೆನಪುಗಳಿಗೆ ರೂಪವೆಲ್ಲಿ? ಬಣ್ಣವೆಲ್ಲಿ? ಗಂಧವೆಲ್ಲಿ?

*

ಯುನಿವರ್ಸಿಟಿಯ ಆ ವಿಶಾಲವಾದ ಲೈಬ್ರರಿ. ನಡುವಿನ ಯಾವುದೋ ಟೇಬಲ್ ನನ್ನದು. ಆ ತುದಿಯ ಮತ್ತೊಂದು ಟೇಬಲ್ಲಿಗೆ ಮೊಣ ಕೈ ಊರಿ, ಕುರ್ಚಿಯಲ್ಲಿ ನಸು ಬಾಗಿ ಕುಂತ ಆ ಮೈ. ನನ್ನ ನೋಟವೆಲ್ಲ ಆ ಬೆನ್ನ ಮೇಲೆ. ಹತ್ತೋ ಹದಿನೈದೋ ಮಿನಿಟು. ಓದುತ್ತಿದ್ದ ಪುಸ್ತಕವನ್ನು ಹಾಗೇ ಬೋರಲಾಗಿ ಟೇಬಲ್ ಮೇಲಿಟ್ಟು, ಎದ್ದು ನಿಂತು, ಬಟ್ಟೆ ಸಾವರಿಸಿ ಕೊಂಡು, ಹವುರಗೆ ಹೊರಳಿ ನಿಂತಾಗ... ನನಗೆದುರಾದದ್ದು ಆ ಕಣ್ಣು! ಏನಿತ್ತು ಆ ಕಣ್ಣಲ್ಲಿ? ಕಡಲಿತ್ತು. ಡೋಣಿ ಇತ್ತು. ಲೇ ಲಾಲಿ ಲೇಸೋ... ಗಾಳಿ ಸವಾರಿ ಮಾಡಿ ನನ್ನೆಡೆಗೆ ಬೀಸುತ್ತಿತ್ತು... 'ನೀ ಹಿಂಗ ನೋಡಬ್ಯಾಡ ನನ್ನ' - ನನ್ನ ಮೈತುಂಬ ಗುಂಯ್‌ಗುಡುತ್ತಿತ್ತು. ...ನಂತರ ಆ ಆಕೃತಿ ನಿಧಾನವಾಗಿ ಹೊರನಡೆದು ಕರಗಿ ಹೋಯಿತು.

ಕುತೂಹಲದಿಂದ ಆ ಟೇಬಲ್ಲಿಗೆ ಧಾವಿಸಿ 'ಯಾವ ಪುಸ್ತಕ'? ಅಂತ ನೋಡಿದೆ. ಅದು ಪುಸ್ತಕವಾಗಿರಲಿಲ್ಲ. ಅದು ಆ 'ಜಯಂತಿ'ಯಾಗಿತ್ತು. ನನ್ನ ಕವನದ ಕಪ್ಪು ಅಕ್ಷರಗಳು ಅವಳ ಕಣ್ಣಿನ ಬೆಳಕು ಹೀರಿಕೊಂಡು ಜಗಮಗ ಮಿಂಚುತ್ತಿದ್ದವು.... ಲೇ ಲಾಲಿ ಲೇಸೋ..... all all alone.

*

ಸಾರಿ. ಗಾಡಿ ಎಲ್ಲೆಲ್ಲೋ ಹೋಗುತ್ತಿದೆ. .... ಮೊದಲೇ ಹೇಳಬೇಕು ನಾನು. 'ಆತ್ಮ ಚರಿತ್ರೆ' ಗಿಂತ, 'ಆತ್ಮ ಕತೆ' ನನಗೆ ಪಸಂದಾದ ಶಬ್ದ. 'ಆತ್ಮ'ವನ್ನು ಕೈ ಬಿಟ್ಟು, 'ಸ್ವಂತ ಕತೆ' ಎಂದರಂತೂ ಬಂಗಾರ. 'ಚರಿತ್ರೆ', 'ಇತಿಹಾಸ' ಬರೆಯುವುದೆಂದರೆ ಅದು ಜವಾಬ್ದಾರಿಯ ಕೆಲಸ. ಬೇರೆಯವರದಾಗಿರಲಿ, ನಮ್ಮದೇ ಆಗಿರಲಿ - ಈ ಶಬ್ದಗಳೇ ನಮ್ಮ ಕೈ ಕಟ್ಟಿ ಹಾಕುತ್ತವೆ; ಮೈಗೆ ಹೊರೆಯಾಗುತ್ತವೆ. ಯಾವುದನ್ನು ಕುರಿತು ಬರೆಯುತ್ತೇವೆಯೋ ಆ ವಸ್ತುವಿನಿಂದ ಸ್ವಲ್ಪವಾದರೂ 'ದೂರ' ಕಾಯ್ದುಕೊಳ್ಳಬೇಕು. ಇದಕ್ಕೆ ಸಾಮಾನ್ಯವಾಗಿ ವಸ್ತುನಿಷ್ಠೆ (objectivity) ಅನ್ನುತ್ತಾರೆ. ಇದರ ಅರ್ಥದ ಬಗ್ಗೆ ನನಗೆ ಇನ್ನೂ ಅನುಮಾನಗಳಿವೆ. ಚರಿತ್ರೆ / ಇತಿಹಾಸಕಾರನಿಗೆ ಒಂದು ತರ್ಕಬದ್ಧವಾದ ನಿರೂಪಣಾ ಕ್ರಮ ಬೇಕು; ಎಲ್ಲಿ

ಬೇಕೆಂದರಲ್ಲಿ ಮನಸುಖರಾಯನ ಹಾಗೆ, ಅಥವಾ ದೇವರ ಗೂಳಿಯ ಹಾಗೆ, ಕಂಡ ಕಂಡ ಕಡೆ ನುಗ್ಗುವಂತಿಲ್ಲ. ಅರಿಸ್ಟಾಟಲ್ ಹೇಳುವಂತೆ ಆದಿ - ಮಧ್ಯ - ಅಂತ್ಯ ಬೇಕು. ಯಾವುದೋ ಒಂದು ಗುರಿ. ಆ ದಿಕ್ಕಿನತ್ತ ನಿರಂತರ ನಡೆ. ಮಾರ್ಗಮಧ್ಯದಲ್ಲಿ ಸಿಗ್ನಲ್ಲುಗಳು, ಕಿಲೋಮೀಟರ್ ಕಲ್ಲು, ಮೈಲುಗಲ್ಲುಗಳು. ಕೊನೆಯಲ್ಲಿ ಓದುಗರು ನಂಬಲಿ ಬಿಡಲಿ, ತನ್ನ ಸಮಾಧಾನಕ್ಕಾದರೂ ಒಂದು ಇತ್ಯರ್ಥ, ಒಂದು ನಿರ್ಣಯ.

ಇಷ್ಟೆಲ್ಲಾ ಗೋಟಾಳಿ ಯಾರಿಗೆ ಬೇಕು ಮಾರಾಯರೆ? ಯಾಕೆ ಬೇಕು? ನನ್ನ ಚರಿತ್ರೆ ಎಂಬುದು ಮುಂದೆ ಯಾವುದೇ ಕಾಲಕ್ಕೆ ಶಾಲೆ - ಕಾಲೇಜುಗಳಲ್ಲಿ ಪಠ್ಯವಾಗಬೇಕಿಲ್ಲ. ಯಾರೋ ನನ್ನ ಹೆಸರಿನಲ್ಲಿ ಪ್ರತಿಷ್ಠಾನ (ಟ್ರಸ್ಟ್) ಮಾಡಿಕೊಂಡು ಸಾರ್ವಜನಿಕರಿಂದ ವಂತಿಗೆಯನ್ನೋ ಸರಕಾರದಿಂದ ಸಹಾಯಧನವನ್ನೋ ಪಡೆದು ತಮ್ಮ ಉಪಜೀವನಕ್ಕೊಂದು ಹಾದಿ ಮಾಡಿಕೊಳ್ಳಬೇಕಾಗಿಲ್ಲ.

*

ಯಾರೋ ಅವರಿವರು ಸೂಚನೆ ಕೊಟ್ಟಿದ್ದರಿಂದ 'ಇರಲಿ ನೋಡೋಣ' ಅಂತ ನನ್ನ ಬದುಕಿನ ಸಂದೂಕಗಳ ಮುಚ್ಚಳ ತೆರೆಯಲು ಮುಂದಾಗಿದ್ದೇನೆ. 'ತೆರೆ' - ಶಬ್ದ ನೋಡಿರಿ. ಪೆಟ್ಟಿಗೆ ತೆರೆ : ಬಾಗಿಲು ತೆರೆ : ಓಪನ್ ಮಾಡು ಎಂಬ ಅರ್ಥ. ರಂಗ ಪ್ರಯೋಗದಲ್ಲಿ ಬಳಸುವ ತೆರೆ : ಕರ್ಟನ್. ಕೆರೆ - ಸರೋವರ - ಸಮುದ್ರ ತೆರೆ : ವೇವ್ಸ್. (ಲಂಕೇಶರ 'ತೆರೆಗಳು' ನಾಟಕದಲ್ಲಿ ಈ ಎಲ್ಲ ಸೂಕ್ಷ್ಮಗಳಿವೆ). ಹಿಂದಿಯಲ್ಲಿ 'ತೆರೆ'ಗೆ 'ಲಹರ್' ಅನ್ನುತ್ತಾರೆ. ಆದರಿಂದ 'ಲಹರಿ'. ಈ 'ಲಹರಿ' ಗೋ ಅನೇಕ ಅರ್ಥಗಳು : ವಿಚಾರ ಲಹರಿ, ಭಾವ ಲಹರಿ, ಕಾವ್ಯ ಲಹರಿ. ತುರ್ತು ಪರಿಸ್ಥಿತಿಯಲ್ಲಿ ಇಂದಿರಮ್ಮನ ಕೃಪೆಯಿಂದ ಜೇಲು ಕಂಡು ಹೊರಬಂದ ಮೇಲೆ ನಾನು ಬರೆದ '೨೬ ದಿನ ೨೫ ರಾತ್ರಿ' ಎಂಬ ಕೃತಿಯನ್ನು ನಾನು 'ಅನುಭವ ಲಹರಿ' ಎಂದೇ ಕರೆದಿದ್ದೆ. 'ಚರಿತ್ರೆ' ಗಿಲ್ಲದ ಸ್ವಚ್ಛಂದತೆ, ಲವಲವಿಕೆ 'ಲಹರಿ' ಗಿದೆ. ಇನ್ನು ಕನ್ನಡದ 'ಕತೆ' ಯ ಕತೆ ರೋಮಾಂಚಕ. ಸಂಸ್ಕೃತ 'ಕಥಾ' ದ ತದ್ಭವವಾಗಿದ್ದರೂ ನಮ್ಮ 'ಕತೆ' - (ಆಡು ಮಾತಿನಲ್ಲಿ 'ಕತಿ') - ಗಾಳಿಯಂತೆ ಸರ್ವಾಂತರ್ಯಾಮಿ: ಅವನ ಕತೀ ಮುಗಿತು; ಓ ... ಒಳಗಿನ ಕತಿ ಗೊತ್ತಿಲ್ಲೇನು ನಿಮಗ? ನಿನ್ನ ಕತಿ ಇರಲಿ, ಖರೇ ಹೇಳು; ಆಕಿ ಕತಿ ಎಲ್ಲಿಗೆ ಬಂತು? ಕತಿ ಕತಿ ಕಬ್ಬಣ... ಒಂದೇ ಎರಡೇ? ಬಹುಶಃ ನನ್ನ ಅನುಭವದ ಲಹರಿಗಳಿಗೆ 'ಕತೆ' ಎಂಬುದೇ ತಕ್ಕ ಪದವೇನೋ! ನೋಡೋಣ.

ಕತೆ ಅಂದೊಡನೆ ಅಲ್ಲೊಂದು ಸನ್ನಿವೇಶ (context) ನಿರ್ಮಾಣವಾಗುತ್ತದೆ. ಹೇಳಲಿಕ್ಕೆ ಒಬ್ಬರು ಬೇಕೇ ಬೇಕು; ಕೇಳಲಿಕ್ಕೆ ಕನಿಷ್ಟ ಒಂದು ಜೋಡಿ ಕಿವಿಯಾದರೂ ಅಗತ್ಯ. 'ಕೇಳು ಜನಮೇಜಯ' - ಎಂಬುದನ್ನು ಕೇಳಲಿಕ್ಕಾದರೂ ಒಬ್ಬ ಬೇಕು.

ಆದ್ದರಿಂದ - ಹೇಳುತ್ತೇನೆ, ಕೇಳುವಂಥವನಾಗು!

*

ಪ್ರಿಯ ಓದುಗ, ನನಗೂ ಗೊತ್ತು, ನಿನಗೂ ಗೊತ್ತು. ನಾನು -ನೀನು ಎದುರು ಬದುರು ಕುಂತವರಲ್ಲ. ರಂಗಮಂಚದ ಮೇಲಿನ ನಟರಲ್ಲ; ರಂಗ ಮಂದಿರದ ಪ್ರೇಕ್ಷಕರಲ್ಲ. ಸಭಾಗೃಹದ ಭಾಷಣಕಾರ - ಶ್ರೋತೃಗಳಲ್ಲ ನಾವು. ಹೀಗಾಗಿ 'ಹೇಳು' - 'ಕೇಳು' ಎಂಬ ಶಬ್ದಗಳೇ ಅಸಂಬದ್ಧ. ನನ್ನ ಶಬ್ದ ಅಕ್ಷರವಾಗಿದೆ, ಹಾಳೆಯ ಮೇಲೆ ಮೂಡಿದೆ. ಅದರ ಬಿಂಬ ನಿನ್ನ ಕಣ್ಣೆದುರಿಗಿದೆ. 'ಭಾಷೆ' ಎಂಬುದನ್ನು ನಾವಿಬ್ಬರೂ ಬಲ್ಲವರು. ನನ್ನ ಅಕ್ಷರದ ಹಿಂದೆ ನನ್ನ ಗಂಟಲಿನ ದನಿ ಇದೆ; ನಿನ್ನ ಕಣ್ಣ ಗೊಂಬೆಯ ಹಿಂದೆ ನಿನ್ನ ಕಿವಿ ಇದೆ. ಆದ್ದರಿಂದ ನಾನು ಹೇಳುವವ; ನೀನು ಕೇಳುವವ.

ಈ ನಮೂನೆಯ ಒಂದು ಒಪ್ಪಂದಕ್ಕೆ ನನ್ನ ನಿನ್ನ ಅಧಿಕೃತ ಸೀಲು - ಸಹಿ ಬೀಳುವ ಮೊದಲು ನನ್ನ ತರ್ಫೆ ಕೆಲವು ಮಾತು ಹೇಳಿಬಿಡುವುದು ಚೆಲೋ: ಆ ಮೇಲೆ ಕಿರಿಕಿರಿ, ತಕರಾರು ಇರಬಾರದು, ಅಲ್ಲವೆ? ನಾನು 'ಚರಿತ್ರೆ' ಕೈ ಬಿಟ್ಟು 'ಕತೆ' ಆರಿಸಿಕೊಂಡಿದ್ದರ ಹಿಂದೆ ಏನಾದರೂ ಹುನ್ನಾರ ಇರಬಹುದೇ - ಎಂಬ ಸಂಶಯ ಆತಂಕ ಭಯ ನಿನಗೆ ಇದ್ದರೆ, ಅದು ಸಹಜವೇ. ಯಾಕೆಂದರೆ ಈ ದಿನಗಳಲ್ಲಿ ಯಾರೂ ಯಾರನ್ನೂ ನಂಬುವಂತಿಲ್ಲ. ಅದರಲ್ಲೂ ಅಕ್ಷರ ಲೋಕದ 'ಸಾಹಿತಿ' ಗಳೆಂಬ ಆಸಾಮಿಗಳು ಹೇಳುವುದು ನಿಜವೋ ಸುಳ್ಳೋ ಎಂದು ತೀರ್ಮಾನಿಸುವ ಖಟ್ಲೆ ಶತಶತಮಾನಗಳಿಂದ ಈ ಜಗತ್ತಿನ ಅನೇಕ ಕೋರ್ಟುಗಳಲ್ಲಿ ಇನ್ನೂ ಕೊಳೆಯುತ್ತ ಬಿದ್ದಿದೆ. ಅದು ನನ್ನ - ನಿನ್ನ ಜೀವಮಾನದಲ್ಲಿ ಬಗೆಹರಿಯುವ ಲಕ್ಷಣಗಳೂ ಇಲ್ಲ. ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವುದು ಬೇಡ. ಇದು - ಒಂದು.

ಇನ್ನೊಂದು : ತನ್ನ ಸ್ವಂತ ಕತೆ ಹೇಳಲು ಹೊರಟವರಿಗೆ ಒಂದು ಕಾಲಮಿತಿ ಇದೆ. ತಾನು ಜನ್ಮ ತಾಳಿದ ದಿನದಿಂದ ಮಾತ್ರ ಅದು ಸುರುವಾಗಬೇಕು. ಅವನ ಅಪ್ಪ, ಅಜ್ಜ, ಮುತ್ತಜ್ಜರ ಕಾಲದ ವರೆಗೆ ಅವನು ಕೈಚಾಚಬಹುದು. ಅದಕ್ಕೂ ಆಚೆ ಅನವಶ್ಯಕವಾಗಿ ಇತಿಹಾಸ, ಪುರಾಣ, ಐತಿಹ್ಯ ಅಂತ ಅತಿಕ್ರಮಣ ಮಾಡಬೇಕಿಲ್ಲ. ಅಕಸ್ಮಾತ್ ಮಾಡಿದರೆ ಅದನ್ನು ನಿನ್ನ ಕಿವಿಯಿಂದ ಕೇಳದಿರುವ ಅಥವಾ ನಿರ್ಲಕ್ಷಿಸುವ ಹಕ್ಕು ನಿನಗಿದೆ. ಮುಖ್ಯವಾಗಿ, ನಾನು ನನ್ನ ಬಾಲ್ಯದಿಂದ ಇವತ್ತಿನ ವರೆಗೆ ಕಂಡದ್ದನ್ನು, ಉಂಡದ್ದನ್ನು 'ಅನುಭವ'ಗಳನ್ನಾಗಿ ಹರಳು ಗಟ್ಟಿಸಿಕೊಂಡು, ಆ ಅನುಭವ -ಸರಣಿಯ ನನ್ನ ಆವೃತ್ತಿಯನ್ನು ನಿನ್ನೆದುರು ಸಾದರ ಪಡಿಸಬೇಕು. ಇಲ್ಲಿ ನನ್ನ ಆವೃತ್ತಿ ಎಂಬುದು ಮುಖ್ಯ.

ಚರಿತ್ರೆ / ಇತಿಹಾಸಕಾರನ 'ಜವಾಬ್ದಾರಿ'ಯ ಬಗ್ಗೆ ಚರ್ಚಿಸಿದ್ದೇವೆ. 'ಕತೆ' ಹೇಳುವವನಿಗೆ ಅಂಥದೇನೂ ಹರಕತ್ತಿಲ್ಲ. ತನ್ನ ಸಕಲ ಅನುಭವಗಳನ್ನು ಅವನು, ಸಾಕ್ರೇಟಿಸನ ಹೆಂಡತಿ ಅವನ ತಲೆಮೇಲೆ ನೀರು ಸುರಿದಂತೆ, ನಿನ್ನ ಮೇಲೆ ಸುರಿಯಬೇಕಿಲ್ಲ. ಏನು ಹೊರಗೆ ಬಿಡಬೇಕು, ಏನು ಒಳಗೆ ಹಿಡಕೊಳ್ಳಬೇಕು - ಎಂಬ 'ಆಯ್ಕೆ'ಯ ಹಕ್ಕು ಮತ್ತು ಸ್ವಾತಂತ್ರ್ಯ ಅವನಿಗಿದೆ. ಇಲ್ಲಿ ಅವನಿಗೆ 'ಪ್ರಾಮಾಣಿಕತೆ'ಯ ಮೌಲ್ಯಕ್ಕಿಂತ ಔಚಿತ್ಯ ಮುಖ್ಯವಾಗುತ್ತದೆ. ಸಮಕಾಲೀನ ಬದುಕಿನ ಅನಾವರಣ ಪ್ರಕ್ರಿಯೆಯಲ್ಲಿ ಒಂದು ರಿಸ್ಕ್ - ಫ್ಯಾಕ್ಟರ್ ಅನ್ನುತ್ತಾರಲ್ಲ, ಅದು ಇದೆ. ಒಂದೆರಡು ಅಡ್ಡ ಪ್ರಸಂಗ ನಾನು ಹೇಳಬೇಕು.

ನಾನು ಸ್ವಲ್ಪ ಅಡ್ಡ ಮನುಷ್ಯ ಎಂದೇ ನನ್ನ ಕುಖ್ಯಾತಿ. ರಾಜಮಾರ್ಗದಲ್ಲಿ ಹೈವೇ (ಹೆದ್ದಾರಿ) ಗಳಲ್ಲಿ ಬಹಳ ಹೊತ್ತು ಪ್ರಯಾಣ ಮಾಡುವುದೆಂದರೆ ನನಗೆ ಬೋರು, ಬೇಜಾರು.

*

ಹೀಗೆ ಬೆಂಗಳೂರಿನಂಥ ದೊಡ್ಡ ಶಹರ. ಅಲ್ಲಿ ಶ್ರೀಮಂತರು, ಸುಸಂಸ್ಕೃತರು, ಹೈ - ಸೊಸೈಟಿ ಜನ ತಮ್ಮ ವಿರಾಮ ಕಳೆಯುವುದು ಕ್ಲಬ್ಬುಗಳಲ್ಲಿ. ಕಾಲೇಜು ಹುಡುಗರು ಪಬ್ ಎಂದೂ, ಕೆಳ ಮಧ್ಯಮ ವರ್ಗದವರು ಪಡಖಾನೆ ಎಂದೂ, ಮೇಲ್ ಮಧ್ಯಮ ವರ್ಗದವರು ಬಾರ್ ಎಂದೂ ಕರೆಯುವ ಜಾಗಗಳಿಗೆ ಶ್ರೀಮಂತರು, ಸುಸಂಸ್ಕೃತರು 'ಕ್ಲಬ್' ಎನ್ನುತ್ತಾರೆ... ಅಲ್ಲಿ ನಡೆದ ಪ್ರಸಂಗವಿದು.

ಇಂಥ ವರ್ಗದ ಅನೇಕರೊಂದಿಗೆ ಆತ್ಮೀಯ ಒಡನಾಟ ಹೊಂದಿದ ಜನಪ್ರಿಯ ಮಹಿಳೆಯೊಬ್ಬರು ಒಬ್ಬಿಬ್ಬರಿಗೆ ಫೋನು ಮಾಡಿ, "ನಾನು ನನ್ನ ಆತ್ಮ ಚರಿತ್ರೆ ಬರೆಯ ಬೇಕೆಂದಿರುವೆ" ಎಂದಿದ್ದಾರಂತೆ. ಅದನ್ನು ಹಗುರವಾಗಿ ಉಲ್ಲೇಖಿಸಿದ ಗೆಳೆಯರೊಬ್ಬರು, "ಹಂಗಾದ್ರೆ ಮುಗಿದೇ ಹೋಯಿತು. ರಾಜಧಾನಿಯಲ್ಲಿ ಮರುದಿನ ಅನೇಕ ಹೆಣಗಳು ತೇಲೋದು ಗ್ಯಾರಂಟಿ!" ಎಂದು ಜ್ಯೋತಿಷ್ಯ ಹೇಳಿದರು. ನಾವೆಲ್ಲ ನಕ್ಕೆವು. ನಾನು ಮೆಲ್ಲಗೆ, "ರಾಜಧಾನಿಯ ಹೊರಗೆ, ರಾಜ್ಯ ಮಟ್ಟದಲ್ಲೂ ಇಂಥ ಘಟನೆ ಸಂಭವಿಸಬಹುದು!!" ಅಂದೆ..ಮತ್ತೆ ಎಲ್ಲರೂ ಹೋ ಅಂತ ನಕ್ಕರು.

ಇದು ಒಂದು ನಮೂನೆ ರಿಸ್ಕು. (ನಾನೇನೋ ಸಂಬಂಧಪಟ್ಟವರಿಗೆ ಫೋನು ಮಾಡಿ, ಇದು ನಿಜವೇ ಅಂತ ಕೇಳಿದಾಗ " ಹಾಗೇನು ಇಲ್ಲವಲ್ಲ! ಇನ್ನೂ ಬರೆಯಲು ಪ್ರಾರಂಭಿಸಿಲ್ಲ" ಎಂಬ ಆ ಕಡೆಯ ಮಧುರ ವಾಣಿಯನ್ನು ಕೇಳಿ ಸಮಾಧಾನ ಪಡೆದೆ. ಆ ಮಾತು ಬೇರೆ.)

*

ಇನ್ನೊಂದು ಪ್ರಸಂಗ ನಮ್ಮ ಸಮಕಾಲೀನ ಪುರಾತನರೊಬ್ಬರಿಗೆ ಸಂಬಂಧಿಸಿದ್ದು. ಅವರು ತಮ್ಮ ಜೀವಿತದ ಅವಧಿಯಲ್ಲಿ ಆ ಸ್ಥಾನ ಈ ಸ್ಥಾನ ಅಂತ ಎಲ್ಲ ಸ್ಥಾನಗಳನ್ನು ಅಲಂಕರಿಸಿ ಈಗ ಆಳುವ ಪ್ರಭುಗಳ ಆಸ್ಥಾನ ಗುರುವಾಗಿ ಲಭ್ಯವಿರುವ ಸಕಲ ಪದವಿ ಪುರಸ್ಕಾರಗಳನ್ನು ಪಡಕೊಂಡೋ ಹೊಡಕೊಂಡೋ ತೆಪ್ಪಗೆ ಧ್ಯಾನ ಮಗ್ನರಾಗಿರುವುದು ಬಿಟ್ಟು ತಮ್ಮ 'ಆತ್ಮ ಚರಿತ್ರೆ' ಬರೆಯಲು ಉದ್ಯುಕ್ತರಾದರು. ಅದನ್ನು ಬರೆಯುವಾಗ, ತಮ್ಮ ತೀರ ತೀರ ವೈಯಕ್ತಿಕ ವ್ಯವಹಾರಕ್ಕೆ ಸಂಬಂಧಿಸಿದ 'ಸಂಬಂಧ'ವೊಂದನ್ನು ಪ್ರಸ್ತಾಪಿಸುವ ಹವಣಿಕೆಯಲ್ಲಿದ್ದಾಗ ಆತ್ಮೀಯರೊಬ್ಬರು 'ಬೇಡಿ ಸಾರ್, ಅದರಿಂದ ಒಬ್ಬರಿಗಾದರೂ ಆಘಾತವಾಗುತ್ತದೆ' ಎಂಬ ಸಲಹೆ ನೀಡಿದರಂತೆ. ಅದನ್ನು ತಿರಸ್ಕರಿಸಿದ ಮಹಾನುಭಾವರು. (ಅವರ ಮಾತಿನಲ್ಲೇ) "ನನಗೆ ಪ್ರಾಮಾಣಿಕತೆ, ಪಾರದರ್ಶಕತೆ ಮುಖ್ಯ. ಆ ಪ್ರಸಂಗ ಸೇರಿಸಿಯೇ ತೀರುತ್ತೇನೆ" ಅಂತ ಎರಡು ಕ್ರಿಯಾಪದ ಬಳಸಿದರು : ಒಂದನೆಯದು ಈಡೇರಿದೆ; ಇನ್ನೊಂದು ಭರವಸೆಯಾಗಿಯೇ ಉಳಿದಿದೆ.

*

ಆತ್ಮ ಚರಿತ್ರಕಾರರಿಗೆ ಇಂಥ ಎಡಚಟ್ಟು ಪ್ರಸಂಗಗಳು ಮಾಮೂಲಿ. ನನ್ನ ಸೀನಿಯರುಗಳಾದ ಕೆಲವರು - (ಅನಂತಮೂರ್ತಿ, ಲಂಕೇಶ್, ಗಿರೀಶ ಕಾರ್ನಾಡ, ಸಿ. ಎನ್. ಆರ್ ಮುಂತಾದವರು) - ಈಗಾಗಲೇ ತಮ್ಮ ಶಿಲಾ ಶಾಸನಗಳನ್ನು ತಾವೇ ಬರೆದು ಮುಗಿಸಿದ್ದಾರೆ. ಅವರೆಲ್ಲ ಬಗೆ ಬಗೆಯ ಶೈಲಿಗಳಲ್ಲಿ ಇಂಥ 'ಸಂಬಂಧ'ಗಳನ್ನು ನಿಭಾಯಿಸಿ ಪಾರಾಗಿದ್ದಾರೆ. ಇಡೀ ಬದುಕೇ ಒಂದು ಬಿಜಿನೆಸ್ ಮ್ಯಾನೇಜ್‌ಮೆಂಟ್ ಎಂದು ತಿಳಿದವ ನಾನು. ಬರೀ ದಂಡೆಯ ಮೇಲೆ ಸುತ್ತಾಡುವವರು ಬಹಳ ಮಂದಿ. ಆದರೆ ಹೊಳೆಗೆ ಬಿದ್ದವರು ಮಾತ್ರ ಏನೇನೋ ಗುದಮುರಿಗಿ ಹಾಕುತ್ತ, ತೇಲುತ್ತ, ಮುಳುಗುತ್ತ, ಎಲ್ಲವನ್ನೂ ತೂಗಿಸಿಕೊಂಡು ಹೋಗುವುದು ಅನಿವಾರ್ಯ. ಹೀಗೆ ಬುದ್ಧಿ 'ಛೆಟ್ಟಿ' ಯಾಗಬೇಕಾದರೂ ಅನೇಕ ಅವಘಡಗಳನ್ನು ಪಾರಾಗಿಯೇ ಬರಬೇಕು.

*

ಈ ಆತ್ಮ - ಗೀತ್ಮ ಇತ್ಯಾದಿ ಶಬ್ದಗಳ ಬಗ್ಗೆ ನನ್ನಲ್ಲಿ ಇದಮಿತ್ಥಂ ಎಂಬ ಅರ್ಥವಿಲ್ಲ. ನೂರಾರು ಮಂದಿ ಬರೆದ ಸಾವಿರಾರು ವಿಚಾರ ಓದಿರುವೆ. ನಮ್ಮ ಎಲ್ಲ ಸರ್ವನಾಮಗಳ ಮೂಲ ಬಿಂದುವೇ 'ನಾನು'. ೧೯೬೮ರಲ್ಲಿಯೇ - (ಆಗ ನನಗೆ ಮೂವತ್ತು) - ಬರೆದ ಕವನವಿದು.

ನಾನು ಮತ್ತು 'ನಾನು'

ಇದು ಬ್ರಹ್ಮ ಗಂಟೇ ಇರಬೇಕು.
ಎಷ್ಟು ತಿಣಕ್ಯಾಡಿದೆ ಎಷ್ಟು ಕೊಸರ್ಯಾಡಿದೆ
ಮತ್ತೂ ಸರಗಂಟು ಕಗ್ಗಂಟೆ.
ಕುಣಿಕೆ ಬಿಗಿತ.

ಬಿಟ್ಟಿರಲೆ? ಊಂಹೂ
ಮಂದಿ ಕೆಡಿಸಿಗಿಡಸ್ಯಾರೆಂಬ ಸಂಶಯ
ಪಿಶಾಚಿ ನಾನು.
ಕಟ್ಟಿಕೊಳ್ಳಲೆ? - ಅದೂ ಒಂದು ಇಲ್ಲದ ಪಿಟ್ಟೆ
ಅಂತ ಅಡವಿಯ ನೆನೆವ ಸನ್ಯಾಸಿ ನಾನು.

ಇದು ಕುತ್ತಿಗೆಯ ಬಿಗಿಯಿತೋ
ಉಸುಲು ಕಟ್ಟಿದ ಹಾಗೆ.
ಸಡಿಲಾಗಿ ಉಚ್ಚಿತೋ, ಎಲ್ಲ
ಕಳಕೊಂಡ ಹಾಗೆ.

ಒಮ್ಮೊಮ್ಮೆ ಈ ಇದರ ಜೋಡಿ ನಾನು

ಕ್ಷುದ್ರ, ಸ್ವಾರ್ಥಿ, ಹೇಡಿ, ಷಂಡ.

ಮತ್ತೊಮ್ಮೆ :
ನಮ್ಮ ಲೀಲಾಜಾಲದಲ್ಲಿ
ಇಡೀ ಜಗತ್ತನ್ನೇ ಹುಟ್ಟಿಸಿದ,
ಮತ್ತೊಂದ ಹುಟ್ಟಿಸಬಲ್ಲ,
ಅರ್ಧನಾರೀಶ್ವರರು
ನಾವು.

ಸ್ವಲ್ಪ 'ತಾತ್ವಿಕ' ಎನ್ನ ಬಹುದಾದ ನೆಲೆ ಇಲ್ಲಿದ್ದರೂ, ಇಲ್ಲಿ ಬರುವ ಪೂರ್ಣ ವಿರಾಮ ನನ್ನ ಜಾಯಮಾನವಲ್ಲ. ಬಸವಣ್ಣನ ವಚನಗಳ ಹಾಗೆ ನನ್ನ ಸ್ಟಾಕಿನಲ್ಲಿರುವುದು ಬರೀ ಪ್ರಶ್ನಾರ್ಥಕ ಮತ್ತು ಉದ್ಗಾರವಾಚಕ ಚಿಹ್ನೆಗಳು.

*

ನನ್ನ ಬದುಕಿನ ಮೊತ್ತಮೊದಲ ದಾಖಿಲೆ ಅಂದರೆ : ನಾನು ಹನ್ನೊಂದು ತಿಂಗಳದ ಮಗುವಾಗಿದ್ದಾಗ ತೆಗೆಯಲಾದ ಒಂದು ಫೋಟೋ. ನಮ್ಮ ಅವ್ವ ಅದನ್ನು - (ನನ್ನ ಬಾಲ್ಯದ ಅಂಗಿ, ಕುಲಾಯಿ, ಕಾಲಕಡಗಗಳೊಂದಿಗೆ) - ಒಂದು ಟ್ರಂಕಿನಲ್ಲಿ ಜೋಪಾನವಾಗಿ ಇಟ್ಟು ಕೊಂಡಿದ್ದಳು. ಆ ಫೋಟೋ ಈಗ ನೋಡಿದಾಗ ನನ್ನ ಮೊಮ್ಮಗನದೇನೋ ಅನಿಸುತ್ತದೆ.

ಮುಂದೆ ಇನ್ನೊಂದು ಫೋಟೋ, ನಾನು ಬಿ. ಎ. ಮುಗಿಸಿದಾಗ ತೆಗೆಸಿದ್ದು. - (ಆಗ ನನಗೆ ಇಪ್ಪತ್ತೊಂದು) - ಕೋಟು ಟೈ ಸಮೇತ. ಇವೆರಡು ಎದುರಿಗಿಟ್ಟುಕೊಂಡು ಒಮ್ಮೆ ಅದನ್ನು ಒಮ್ಮೆ ಇದನ್ನು ನೋಡುತ್ತ ಹೆಣೆದ ಇನ್ನೊಂದು ಕವನವಿದು. (೧೯೬೨)

ಈ ನಾನು

ಈ ನನ್ನ ಸೌಮ್ಯ ಮುಖ -
ನನ್ನೊಂದಿಗೆ ಬೆಳೆದ ಮುಖ -
ಗುಡುಗುಸಿಡಿಲುಮಿಂಚು ಕುಣಿದು ಕುಪ್ಪಳಿಸುತ ಹೋದ ಮೇಲೆ
ಬಾನರಂಗ ಮುಚ್ಚಿ ಬಿಟ್ಟ
ಯಾವ ಬೂದಿ ಪರದೆಯೋ!

ಈ ನನ್ನ ಕಣ್ಣ ಬೆಳಕು -
ಒಡಲಿನಿಂದ ನುಸುಳಿ ಬಂದು
ಪರಡಿದಿರುಳ ಹಣೆಯ ಮೇಲೆ, ಯಾವ ಲೋಕದಿಂದ ಜಿಗಿದು
ಬಂದು, ಬಿಳಿಯ ಚಿಕ್ಕ ಚುಕ್ಕಿ -
ಯಾದ ಯಾವ ಚಿಕ್ಕೆಯೋ!

ಮುಖದ ತುಂಬ ಟೊಂಗೆ
ಹರಡುತಿರುವ ನನ್ನ ನಗೆ -
ನೆಲದ ಮಡಿಲಿಗೆಷ್ಟು ಬೇರು ಕಳಿಸಿ, ಎಷ್ಟು ರಸವ, ವಿಷವ
ಹೀರಿ, ಮೇಲೆ ತೂರುತಿರುವ
ಯಾವ ಬಗೆಯ ವೃಕ್ಷವೋ!

ಉಂಗುರುಂಗುರಾಗಿ ಬೆಳೆದು
ನಿಂತ ನನ್ನ ಈ ಕೂದಲು-
ಯಾವ ಸ್ವಪ್ನ ಚಕ್ರವಲ್ಲಿ ಗಿರಕಿ ಹೊಡೆವ, ಹೊಡೆಯುತಿರುವ,
ಹೊಡೆದು ತೆಪ್ಪಗಾದ ಭಾವ
ನೆಗಳ ವ್ಯಂಗ್ಯ ಚಿತ್ರವೋ!

ನನಗೆ ನಾನು ಪಿಸುಗುಟ್ಟುತ
ಹೇಳುತಿರುವ ಈ ಹಾಡು
ಇದ್ದುದೆಲ್ಲ ಹಾಳು ಮಾಡಿ ಮಳೆಯು ಮರಳಿ ಹೋದ ಮೇಲೆ
ಗುಳುಗುಳಿಸುತ ಹರಿವ ಯಾವ
ಬೀದಿ ನೀರ ನಾದವೋ!

ಈ ನಾನು - ನಾನು ನಾನು
ಎಂದು ಎದೆಯ ಸೆಟೆಸಿ ಅಲೆವ
ಈ ನಾನು - ಯಾವ ಬೆಳಕೊ ! ಯಾವ ಬೆಳಕು ಯಾರ ಮೇಲೆ
ಬಿದ್ದು ಉದಿಸಿದಂಥ ನೆರಳೊ!
ಯಾವ ನೆರಳ ನೆರಳೋ!

*

ನನ್ನ ಈ ವರೆಗಿನ ಬದುಕಿನ ಅಡ್ಡ ತಿಡ್ಡ ಹಾದಿಯಲ್ಲಿ ಇಂಥ ಏಕಾಂತದ ದಿಬ್ಬಗಳು, ನಡುಗಡ್ಡೆಗಳು ಬಹಳ. ಆದರೆ ದಿಬ್ಬಗಳಿರುವುದು ಬಟಾಬಯಲಿನಲ್ಲಿ ಮಾತ್ರ: ನಡುಗಡ್ಡೆಗಳಿರುವುದು ಸಮುದ್ರಗಳ ಮಧ್ಯೆ ಮಾತ್ರ.

ನಮ್ಮೂರಿನ ಕೆರೆಯ ದಂಡೆಯ ನೆನಪು ನನಗೆ. ಆ ಕೆರೆಯಲ್ಲಿ ಈಗ ನೀರಿಲ್ಲ. ಬರಿ ಕಂಟಿ ತುಂಬಿವೆ. ಆಕಾರವೂ ಕಿರಿದಾಗಿದೆ. ಅದಕ್ಕೆ ವ್ಯಕ್ತಿತ್ವವೇ ಇಲ್ಲವೇನೋ ಅನ್ನಿಸುತ್ತದೆ. ಆದರೆ ನಾನು ಎಲ್ಲಿಯೇ ಇರಲಿ ನನ್ನನ್ನು ಆಕಾಶದಂತೆ ಆವರಿಸಿರುವುದು ಈ ಕೆರೆ.

ಕಣ್ಣು ಮುಚ್ಚಿದಾಗ
ಕಣ್ಣೆದುರು

ನಮ್ಮೂರ ಕೆರೆಯಲ್ಲಿ
ತೆಪ್ಪಗಳು ತೇಲಿದಂತೆ
ನಮ್ಮೂರ ಬಾನಲ್ಲಿ
ಗಾಳಿಪಟ ಹಾರಾಡಿದಂತೆ

ಬಣ್ಣ ಬಣ್ಣದ ಪುಂಜಗಳು
ಹರಿದಾಡುತ್ತವೆ
ಅರೆ ಇದೇನು
ಕತ್ತಲೆಯಲ್ಲಿ ಬೆಳಕು
ಅಂದುಕೊಂಡು
ಕಣ್ಣು ತೆರೆದೆ

ನನ್ನ ಅಕ್ಷರ ಲೋಕದ ತುಂಬ, ಬರೀ ಬೆಳಕು, ಕತ್ತಲೆ, ನೆರಳು, ಪ್ರಾಣಿ, ಪಕ್ಷಿ, ಗಿಡ ಗಂಟಿ, ಹಳ್ಳ, ಹೊಳೆ, ಸಮುದ್ರ. ಇದೆಲ್ಲದರ ನಡುವೆ ಸಾವಿರಾರು ಮನುಷ್ಯರೂ ಇದ್ದಾರೆ, ಮನುಷ್ಯರು. ಅವರ ಪೈಕಿ ನಾನೂ ಒಬ್ಬ.

*

ಯಾರಾದರೂ ಅಪರಿಚಿತರು ಭೆಟ್ಟಿಯಾದಾಗ... ಅದೂ ಇದೂ ಮಾತು ಜಾಲೂ ಆದ ಮೇಲೆ ನಾನು ಕೇಳುವ ಮೊದಲ ಪ್ರಶ್ನೆ: 'ನಿಮ್ಮೂರು'? ಹೆಸರು, ಅಡ್ಡ ಹೆಸರು, ಕುಲ, ಜಾತಿ, ಗೋತ್ರ ಯಾವುದೂ ಅಲ್ಲ; 'ಯಾವೂರು ನಿಮ್ಮದು?'
ಅವರು ಹೇಳುತ್ತಾರೆ. ಆ ಮೇಲೆ ಉಳಿದ ಸಮಾಚಾರ.

*

ಹೌದು.. ಈ ನಾನೆಂಬ ನನ್ನ ಕತೆಯನ್ನು ನಮ್ಮೂರಿನಿಂದಲೇ ಸುರುಮಾಡಬೇಕು.

ನಮ್ಮೂರ ಹೆಸರೇನು ಎಂದು ಕೇಳುವಿರೇನು?
ಹೇಳಿಬಿಡುವುದು ಕೂಡ ಒಂದು ನೀತಿ.
ಆದರೂ ಆ ಹೆಸರು ಒದೆಯಲಾರೆನು ನಾನು
ಅಷ್ಟು ನಾಚಿಕೆ ನನಗೆ, ಅಷ್ಟು ಪ್ರೀತಿ.

ಮಲಬಾರೊ ಕಾಶ್ಮೀರೊ - ಎಲ್ಲವನ್ನೂ ಇಲ್ಲಿ
ತಂದಿಹನು ಆ ಸೃಷ್ಟಿ ಕರ್ತಾರನು
ನಾನು ಎಲ್ಲಿದ್ದರೂ ಎಂತಿದ್ದರೂ, ಆಹ,
ನೆನವುದೆನ್ನ ಮನಂ ನಮ್ಮೂರನು....

●

ಐದು ಕವನಗಳು

• ವಿಷ್ಣು ನಾಯ್ಕ

೧. ಅವ್ವ ಸಾಯುವುದಿಲ್ಲ

ಮಧ್ಯರಾತ್ರಿಯ ಸೀಳುತ್ತ ಸೀಳುತ್ತ
ಗಡ ಗಡ ನಿಶ್ಯಬ್ದ ಗೌಜುಗಳ ಮಧ್ಯೆ
ಓಡುತ್ತಿತ್ತು ಮಲಗಿದ್ದ ರೈಲು
ಹಾಕುತ್ತ ಬೀಭತ್ಸ ಸಿಳ್ಳು
ರಿಂಗುರಿಂಗಾಗಿ ಕಿವಿಗೊಂದು ಕರೆಬಂತು:
'ಅವ್ವ' ಸತ್ತಳು ಅಣ್ಣ, ಬರಬೇಕು ಬೇಗ.

ಅಂದೆ ನಾನು ಆ ಕರೆಗೆ
'ಅವ್ವ' ಸಾಯುವುದಿಲ್ಲ
ಅವ್ವ ಸಾಯಲಿಕ್ಕಲ್ಲ;

೨

ಊರು ಬಿಟ್ಟ ದಿನವೇ ನಾನು
ಲೋಕ ಬಿಟ್ಟಳು ಅವ್ವ, ಅಷ್ಟೆ
ಅದು ಸತ್ತಂತಲ್ಲ ಅವ್ವ ಸಾಯುವಳಲ್ಲ
ಇದ್ದಾಳವಳು, - ಇರುತ್ತಾಳೆ
ನನ್ನಲ್ಲಿ ನಿನ್ನಲ್ಲಿ ಎಲ್ಲರಲಿ
ಜೀವಂತವಾಗಿ ನಾವಿರುವವರೆಗೆ
ಈ ನೆಲ ಇರುವವರೆಗೆ

೩

ಅವ್ವ ಎಂಬುದು ಬರಿದೆ ಹೆಸರೇ?
ಅಲ್ಲವೋ ಎಂದೆಂದಿಗೂ, ಮಂಕೆ
'ಅವ್ವ' ಉಸಿರು ಹೊಲಗದ್ದೆ ಹಸಿರು
ನನಗೆ ನಿನಗೆ ಮನೆಗೆ
ಊರೊಟ್ಟಿನ ನೆನಪ ಖುಷಿಗೆ
ಹಗಲಾಗಿ ತಬ್ಬಲಿಕೆ.

೨. ಬೆವರ ವಾಸನೆ

ಲಕ್ಷ-ಕೋಟಿಯಂತಸ್ತುಗಳು
ಕಟ್ಟಿ ಸಿರಿ
ಯಜಮಾನಿಕೆಯ ಸ್ಮಾರಕಗಳ ಹೊತ್ತು
ಕೊಂಡ ಸೈಜುಗಳಲ್ಲುಗಳನೆತ್ತಿ
ಕೆತ್ತಿ ನಯಗೊಳಿಸಿದವರು 'ಶಿವಾ ಶಿವಾ'
ಎಂದೆತ್ತುತ್ತ ಬಗ್ಗಿದ
ಶತಮಾನಗಳ ಸೊಂಟವನ್ನು!

ಕಳಾಸಿಯಲೇ ದಾಖಲಿಸುತ್ತ ಕೈಚಳಕ
ಅಲ್ಲೂ ಇಲ್ಲೂ ಎಲ್ಲೆಲ್ಲೂ
ಸಮ ಸಮಾ ಸಮರ್ಪಿಸಿ,
'ಒಡೆಯಾ' ಎಂದವರು ತಂದು ಕೈ
ಬಾಯ್ಮುಂದೆ,
ಆ ಕಾಲದಿಂದ ಈ ಕಾಲದವರೆಗೂ
ಇದೇ ಇದೇ ಪಾಡು - ಪಾಡು!

ಹೊತ್ತಾರೆ ಎದ್ದವರು ಬರುತ್ತಾರೆ ಹೊತ್ತು
ಅದೂ ಇದೂ, ಇದೂ ಅದೂ ಹೊತ್ತು
ಮುಳುಗಿದ ಮೇಲೆ
ಧನ್ಯತೆಯ ತೂಗುಯ್ಯಾಲೆಯಲೇ ದಿನಂ
ಪ್ರತಿ-ಹಾಡುತ್ತ ಮೆಲ್ಲುಲಿಯಲಿ ಮಕ್ಕಳಿಗೆ
ತಂದ ಪುರಿಗಡಲೆಯನು ಇಕ್ಕುತ್ತ ಬಾಯಿಗೆ,
ಸುಖದಾಟ ಮತ್ತೆ ಮನೆಹಾಸಿಗೆ ಮಂಗಳ
ಗೌರಿಯೊಂದಿಗೆ

೨

ಈ ಮಂಗಳ ಗೌರಿಯೋ... ದಣಿವರಿಯದ
ಹೆರಿಗೆ ಯಂತ್ರ ಹಸಿಗೂಸನು ಹಾಕಿ
ಅವರಿವರ ಉಡಿಯಲಿ
ನಡೆಯುತ್ತಾಳೆ ಒಣ ಜಿಗ್ಗುಗೇರ ಹಕ್ಕಲ

ಸಾಕ್ರಿ ಬಡಿತ ಎನ್ನುತ್ತ ನುಚ್ಚಕ್ಕಿಗೆ ದಾರಿ
ಹುಡುಕುತ್ತ ಮಿಡಿ ಉಪ್ಪಿನಕಾಯಿ
ಕೊಟ್ಟರೆ ಗೆಯ್ಸಿದ ಅಮ್ಮನಿಗೆ ಸಾವಿರ ಹರಕೆ
ಹೊರುತ್ತ ಹೊತ್ತು ಬರುತ್ತಾಳೆ ಗಂಜಿ
ಯೊಲೆಯ ದಿನದ ದುಕ್ಕ ಕಳೆಯಿತು
'ಶಿವಾ ಶಿವಾ' - ಇದೂ ಒಂದು ಜೀವ, - ಜೀವನ ಅನ್ನತ್ತ!

೩. ಕರಾವಳಿಯ ಜುಲೈ ಮತ್ತು ನಾನು

ಖುಷಿಯದು ನನಗೆ ಹುಟ್ಟಿದ್ದಕ್ಕೆ - ಹಳೇ
ಪೈಕರ ಪೋರನಾಗಿ - ಅವರಿವರೆಂಬ ಈ
ಮೈಲಿಗೆ ಮಾಸದೊಳಗೆ

ನೆಲಕ್ರಾಂತಿಯ ದಿನಗಳಿವು - ಹಸಿರುಕ್ಕಿಸಿ ಇಂಚಿಂಚು
ಚಿಗುರೊಡೆಸಿದ 'ಮಾನಗಳು' ಬೋಳು ಮರಗಳನೆಲ್ಲ
ಮುಗಿಲ ಕೃಪೆ, - ಅರಳುತ್ತಿವೆ ಒಣ ಮುಖದ ಜೀವಕುಲ
ತುಂಬುವ ಸಂಭ್ರಮ ಖಾಲಿಕೊಡ ಹೊಳೆ ಹಳ್ಳನದಿ ಪಾತ್ರ.

ಬಿಡುವಿಲ್ಲ ಯಾರಿಗೂ, 'ನಾಳೆ' ಬೆಳೆಯುವ ತುರ್ತು
ಬಳಕೆಯಾಗುತ್ತವೆ ಧನ-ಧಾನ್ಯ- ಬೀಜ ಮೊಳಕೆಗೆ
ಬೆರೆತು ಬೆವರ ಹನಿ ಮಳೆಯೊಂದಿಗೆ, ಮಣ್ಣೆನಣ್ಣಿನ
ನೆಲಹದವಾಗುತ್ತದೆ ಹೊಸ ಸಂಕಲ್ಪ ಸೃಷ್ಟಿಗೆ

ಬಿಡುವಿಲ್ಲ ಯಾರಿಗೂ ಮೂಗಿಗೂ ಸಿಂಬಳರಾಶಿ
ಒದ್ದೆ ಮಂಡೆಯ ಫಲ ಕಫವಾಗಿ ತಾಯಿಂದ ಮಗು
ವಿಗೆ ಕೆಮ್ಮು - ಜ್ವರ 'ಗೀಂ ಗೀಂ' ಸೌಂಡ್ ಆಗೀಗ
ಮೀರಿದರೆ ಮನೆ ಮದ್ದು ಮತ್ತೆ ವೈದ್ಯರ ದೋಸ್ತಿ

ಬರುವುದೀಗಲೇ 'ಅಸಡಿ ಅಮಾಸೆ' - ಹಬ್ಬ, ಕೊಟ್ಟೆ
ರೊಟ್ಟಿಯ ತೇಗು ಮಳೆ ಜೋರು ಹೊರಕ್ಕೆ. ಅಂತೆ ಇದು
ಮೈಲಿಗೆ ತಿಂಗಳು! ಖುಷಿಯದು ನನಗೆ ಹುಟ್ಟಿದ್ದಕ್ಕೆ ಹಳೇ
ಪೈಕರ ಪೋರನಾಗಿ ಈ ಮೈಲಿಗೆ ಮಾಸದೊಳಗೆ

೪. ಅಸಂಗತ ವಾಂಛೆ

ಆ ಮರಕ್ಕೆ ಬಗ್ಗಿ ಬೀಜ ನೋಡುವ ವಾಂಛೆ
ಬೀಜಕ್ಕೋ ಭ್ರೂಣ-ಬೇರು-ಬೇರಿನೊಳಗಣ ತ್ರಾಣ
ಅಳೆದು ತಿಳಿಯುವ ಚಿಂತೆ.

ಆ ಬೀಜಕ್ಕೆ ಇಲ್ಲ ಈಗ ಅಂದಿನಧಿಕಾರ
ಗಟ್ಟಿತನ, ಮತ್ತೆ ಹುಟ್ಟಬಹುದೆಂಬ ಜಬರದಸ್ತಿ
ಕೂಡ, ಇದೆಯದಕೆ ಆದರೂ ತುದಿಯೇರಿ ಹೂ
ಬಿಟ್ಟ ಮರದ ಚಂದ ನೋಡುವ ತವಲು

ಈ ಆಸೆಗಳ ಚೌಕಬಂಧಿ ಸಿಕ್ಕುಗಳ ನಡುವೆ
ಬೇರಲ್ಲೇ ಚಿಗುರೊಡೆದ ಮರಿ
ಸಂತಾನಗಳಿಗೂ ಮೈತುಂಬ ಸ್ವತಂತ್ರ
ಅಸ್ತಿತ್ವದ ಹಂಬಲು

ಮೂಲದಲ್ಲಿ ಎಲ್ಲಿಂದಲೋ ಹಕ್ಕಿ
ತಂದ ಯಾರದೋ ಮರದ ಆ
ಹಣ್ಣಿಗೆ ಅದರೊಳಗಿನ ಬೀಜಕ್ಕೆ ಬೀಜ
ದೊಳಗಿನ ಭ್ರೂಣಕ್ಕೆ, ಭ್ರೂಣದಿಂದೊಗೆದ
ಬೇರಿಗೆ - ಸಾಕ್ಷಿಯಾಗ ಬಹುದಾದ ಆ
ಕಾಗೆ, ಕಪ್ಪು ಮೈ ಗರಿ ನಿಮಿರಿಸಿ ಕೂಗುತ್ತವೆ
ಕಾ ಕಾ ಕಾ ... ಎಂದು ಎಲ್ಲೋ ನೆಟ್ಟು ದಿಟ್ಟಿ!

ಹೀಗೊಂದು ಮರ ಬೀಜ ಭ್ರೂಣ ಬೇರು
ಅಸಂಗತ ಸವಾಲುಗಳ ಶಿರಸಾವಹಿಸಿವೆ
ಕಾಗೆ ಸಾಕ್ಷಿಗೆ ಕಾದು
ದಾಯಾದಿಗಳ ಧರ್ತಿಯಲಿ - ಧರಣಿ ಮಂಡಲದೊಳಗೆ

೫. ಅಳುತ್ತಿದ್ದ ಕವಿ

ಅಳುತಿದ್ದ ಕವಿ
ಮನಸು ಕಟ್ಟಿದವರಿಗಾಗಿ
ಇರುವೊಂದೇ ರೊಟ್ಟಿ
ಹಂಚಿ ಕೊಟ್ಟವರಿಗಾಗಿ

ಹಸಿದಾಗ ಹೊಟ್ಟೆ
ಹತ್ತಿ ಮರ ಒಡೆಯನ
ಬೊಂಡ ಕೆಳಗಿಳಿಸಿ
ತಿಂದ 'ತಪ್ಪು' ಗಳಿಗಾಗಿ

ಕಳೆದ ದುಡ್ಡಿನ ಸಂಚಿ
ಬಿಚ್ಚಿ ನೋಡದೆ ಬೆಚ್ಚಿ
ಅವರಿವರ ಹುಡುಕಾಡಿದ
'ಮಗು' ತನಕೆ ತಲೆಬಾಗಿ

ಆ ವಾದ ಈ ವಾದ
ವಾದವನೇ ಓದದ ಹಸಿವಿನ
ವಾದಕ್ಕೆ ಹುಚ್ಚೆದ್ದು ಮೆರ
ವಣಿಗೆ ಹೊರಟ ತುರ್ತಿಗೆ ಕರಗಿ
ಅಳುತ್ತಿದ್ದ ಕವಿ

ಆದರೆ
ಅಳಲಿಲ್ಲ ಯಾರೂ
ನಗುವವರೂ ಇರಲಿಲ್ಲ
ತುಸುಕೋಪ ತುಸು ಬೇಸರ
ಮತ್ತದೇ ಮಾತಿನ ಮಹಲು
ಬಿಸಿಲು ಬಯಲು - ಕೇಳುವರಾರು ?

●

ಏಳು ಕವನಗಳು

● ಪ್ರಕಾಶ ಗ. ಖಾಡೆ

೧. ಗಡಿಯಾರದ ಮುಳ್ಳುಗಳು
ಚುಚ್ಚುವುದಿಲ್ಲ;
ಸಮಯ ತಪ್ಪಿದವರ
ಮುಷ್ಟು ಬಿಡಿಸುತ್ತವೆ.

೨. ಎಂದೋ ಬರೆದ ಚಿತ್ರ
ಹರಿದು ಹಾಕಿದೆ;
ಚಿಂದಿ ಆಯುವ ಹುಡುಗರು
ಜೋಡಿಸಿಟ್ಟು ನೋಡಿದರು.

೩. ಅಡಿಗಡಿಗೆ ಇವೆ ಗುಡಿಗಳು
ಚರ್ಚ್ ಮಸೀದಿಗಳು;
ಅದರೂ ತುಂಬುತ್ತಿವೆ ಪತ್ರಿಕೆಗಳಲ್ಲಿ
ಅಪರಾಧದ ಪುಟಗಳು

೪. ಪಾಲು ಹಾಕಲು ಕುಳಿತಿದ್ದಾರೆ
ದುಡಿದು ತಂದ ಅಕ್ಕಡಿ;
ದುಡಿಯದಿದ್ದರೂ ಉಳ್ಳವರ ಕಡೆ
ವಾಲುತ್ತ ತಕ್ಕಡಿ

೫. ಕಾಯಕವೇ
ಕೈಲಾಸವಾದರೂ;
ದುಡಿತದ ಲೆಕ್ಕ
ಚುಕ್ತಾ ಆಗಬೇಕು

೬. ಅಗಳು
ಹುಡುಕಿಕೊಂಡ
ಬಂದ ಕಾಗೆ
ಬಳಗ ಕಟ್ಟಿಕೊಂಡಿತು

೭. ಎಲ್ಲಾ ದೇಶಗಳು
ಒಂದಾಗಿವೆ;
ನಕಾಶೆಗಳ
ಅಂಗಡಿಯಲ್ಲಿ.

●

ಕುವೆಂಪು ನಾಟಕಗಳು : ಹಿಂದೀ ಅನುವಾದ

• ಸಿದ್ಧಲಿಂಗಪಟ್ಟಣಶೆಟ್ಟಿ

೧

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕಾವ್ಯಾಧ್ಯಯನ ಪೀಠ ಮತ್ತು ಕುವೆಂಪು ಅಧ್ಯಯನ ಸಂಸ್ಥೆ ಸಮ್ಮಿಲಿತವಾಗಿ ೨೭-೨-೨೦೦೫ರಂದು ಪ್ರಕಟಿಸಿದ ಹಿಂದೀ ಕೃತಿಯ ಹೆಸರು "ಅಕ್ಷಯ್ ಪ್ರತಿಭಾ ಕೇ ಧನೀ ರಾಷ್ಟ್ರಕವಿ ಕುವೆಂಪು ಕೇ ಬಾರಹ್ ನಾಟಕ್". ಈ ಕೃತಿಯ ಪ್ರಧಾನ ಸಂಪಾದಕರು ಡಾ. ಆರ್. ರಾಮಕೃಷ್ಣ. ಸಂಪಾದಕರು ಡಾ. ಡಿ. ಕೆ. ರಾಜೇಂದ್ರ ಕುವೆಂಪು ಅವರ ಕನ್ನಡ ನಾಟಕಗಳನ್ನು ಹಿಂದಿಗೆ ಅನುವಾದ ಮಾಡಿಸಿ, ಸಮಸ್ತ ಭಾರತದ ವಿಶಾಲ ಓದುಗ ಸಮುದಾಯಕ್ಕೆ ಅವನ್ನು ಸಮರ್ಪಿಸುವ ಅತ್ಯಂತ ಸೂಕ್ತ ನಿರ್ಧಾರ ಕೈಗೊಂಡಿರುವ ಈ ಕೃತಿಯ ಸಂಪಾದಕರ ಉದ್ದೇಶ ಅಭಿನಂದನೀಯವಾದುದು. ಹಿಂದೀ ಅಥವಾ ಇಂಗ್ಲೀಷ್ ಭಾಷೆಗೆ ತರ್ಜುಮೆ ಮಾಡಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಇತರ ಜಗತ್ತಿಗೆ ಪರಿಚಯಿಸಬೇಕಾಗಿರುವುದು ಇಂದಿನ ತುರ್ತು ಕೂಡ ಆಗಿದೆ.

ಪ್ರಸ್ತುತ ಪುಸ್ತಕಕ್ಕೆ "ಅಕ್ಷಯ್ ಪ್ರತಿಭಾ ಕೇ ಧನೀ ರಾಷ್ಟ್ರಕವಿ ಕುವೆಂಪು ಕೇ ಬಾರಹ್ ನಾಟಕ್" ಎಂಬ ಅರ್ಥ ಪೂರ್ಣ ಶೀರ್ಷಿಕೆ ಕೊಡಲಾಗಿದೆ. ಕುವೆಂಪು ಬಗ್ಗೆ ಏನೇನೂ ತಿಳಿದಿರದ ಅಥವಾ ಅತ್ಯಂತ ಕಡಿಮೆ ತಿಳಿದಿರುವ ಹಿಂದೀ ಭಾಷಿಕರು, ಸಾಹಿತಿಗಳು ಹಿಂದಿಯಲ್ಲಿ ಅನುವಾದಗೊಂಡ ಇಲ್ಲಿರುವ ನಾಟಕಗಳನ್ನು ಓದಿ, ಲಭ್ಯವಾಗುತ್ತಿರುವ ಅವುಗಳ ಮೂಲಕವೆ ಕುವೆಂಪು ಅವರ ಅಕ್ಷಯ ಪ್ರತಿಭೆಯನ್ನು, ಅವರ ರಾಷ್ಟ್ರಕವಿತ್ವವನ್ನು, ನಾಟಕ ಸಾಹಿತ್ಯದ ಶ್ರೀಮಂತಿಕೆಯನ್ನು, ಅವರ ಶ್ರೀಮಂತ ವ್ಯಕ್ತಿತ್ವವನ್ನು ಕಂಡುಕೊಳ್ಳಲು ಸಹಜವಾಗಿ ಯತ್ನಿಸುತ್ತಾರೆ. ಕುವೆಂಪು ಅವರ ಈ ೧೨ ನಾಟಕಗಳಲ್ಲಿ ಖಂಡಿತವಾಗಿಯೂ ಅವರ ಎಲ್ಲ ಪ್ರತಿಭಾಂಶಗಳು ಅಡಕವಾಗಿವೆ. ನಮ್ಮ ಹಿಂದೀ ಅನುವಾದಕರು ಮಹಾಕವಿಯ ಈ ವ್ಯಕ್ತಿತ್ವವನ್ನು ದ್ಯೋತಿಸಲು ಯಾವ ರೀತಿಯಲ್ಲಿ ಯತ್ನಿಸಿದ್ದಾರೆ ಎಂಬ ಕುತೂಹಲವನ್ನು ಲಕ್ಷ್ಯದಲ್ಲಿಟ್ಟುಕೊಂಡು ಕೆಲ ವಿಚಾರಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಹೇಳುತ್ತಿದ್ದೇನೆ.

ಕುವೆಂಪು ನಾಟಕಗಳನ್ನು ಬೇರೆ ಭಾಷೆಗೆ ಅನುವಾದಿಸಲು ತೊಡಗುವ ಮೊದಲು ಕೆಲವು ಅಂಶಗಳನ್ನು ಅವಶ್ಯ ಗಮನಿಸಬೇಕು. ನಮಗಿಂತ ಮೊದಲು ಇಂಥ ಅನುವಾದ ಮಾಡಿದವರ ಪ್ರಯತ್ನ, ಅವರ ಸಫಲತೆ, ವಿಫಲತೆಗಳನ್ನು ತಿಳಿದುಕೊಳ್ಳುವುದು ಲೇಸು; ಅವರು ಬಳಸಿದ ಶೈಲಿ, ಅವರು ಎದುರಿಸಿದ ತೊಂದರೆ ಇತ್ಯಾದಿ ನಮಗೆ ಇನ್ನೂ ಉತ್ತಮವಾದ ಹೊಸ ದಾರಿ ತೋರಬಹುದು. ಅನ್ಯ ಭಾಷಿಕರು ಅಥವಾ ಹಿಂದೀ ಭಾಷಿಕರು ಕನ್ನಡ ನಾಟಕಗಳನ್ನು ಅನುವಾದಿಸಿದ್ದಿದ್ದರೆ ಅವರು ನಡೆದು ಬಂದ ದಾರಿ ಭಿನ್ನವಾಗಿರುತ್ತದೆ. ಹಾಗೆಯೇ ಕನ್ನಡವನ್ನು

ಚೆನ್ನಾಗಿ ತಿಳಿದ, ಹಿಂದೀ ಕಲಿತ, ನಮ್ಮಲ್ಲಿಯೇ ಇರುವ ಹಿಂದೀ ಬಲ್ಲವರು ಮಾಡಿದ ಅನುವಾದಗಳ ಸ್ವರೂಪವೇ ಬೇರೆಯಾಗಿರುತ್ತದೆ.

ಖಲೀಲ್ ಗಿಬ್ರಾನ್ ಕಥಾತ್ಮಕ, ಗೀತಾತ್ಮಕ, ಪರೋಕ್ಷ ಶುದ್ಧ ನೈತಿಕ ಬೋಧನೆ ತುಂಬಿದ ಬರವಣಿಗೆಗಳನ್ನು ಇಂಗ್ಲಿಷಿಗೆ ಅನುವಾದಿಸಿದ್ದು ಇಂದು ವಿಶ್ವಮಾನ್ಯವೆನಿಸುವಂತಾಗಿದೆ. ಅದೇ ರೀತಿ ಉಮರ್ ಖಯ್ಯಾಮನ ಕಾವ್ಯಾತ್ಮಕತೆ, ಛಂದಸ್ಸುಗಳನ್ನು ಸಹ ಇಂಗ್ಲಿಷ್ ನಲ್ಲಿ ಅಮರಗೊಳಿಸಿದ ಪರಿ ಅನನ್ಯವಾದದ್ದು. ನಂತರ ಅಂಥ ಬರವಣಿಗೆ ಹಿಂದೀ, ಕನ್ನಡ ಮುಂತಾದ ಭಾರತೀಯ ಭಾಷೆಗಳಲ್ಲಿ ಪಡೆದುಕೊಂಡ ಯಶಸ್ಸನ್ನೂ ನಾವು ಪರಿಶೀಲಿಸಬೇಕು. ಹಾಗೆಯೇ ಬಿ. ಎಂ. ಶ್ರೀ ಅವರ ಮೂಲಕ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅವತರಿಸಿದ ಇಂಗ್ಲಿಷ್ ಗೀತಗಳ ಹಿನ್ನೆಲೆ, ಅವುಗಳ ಕೊಡುಗೆ, ನಿರ್ಮಿಸಿದ ಪರಂಪರೆಯನ್ನು ಕೂಡ ನಿರ್ಲಕ್ಷಿಸಲಾಗದು. ಅದೇ ರೀತಿ ಭಾರತೀಯ ಹಿನ್ನೆಲೆಯಲ್ಲಿ ಕವಿ ಕಾಳಿದಾಸ , ಭವಭೂತಿ ಮುಂತಾದವರ ಸಂಸ್ಕೃತ ನಾಟಕಗಳನ್ನು ಭಾರತದ ಇತರ ಭಾಷೆಗಳಿಗೆ, ಮತ್ತು ವಿಶೇಷವಾಗಿ, ಕಾಲಕಾಲಕ್ಕೆ, ವಿಭಿನ್ನ ಬಗೆಯಲ್ಲಿ ನಮ್ಮ ಕನ್ನಡಕ್ಕೆ ಬರಮಾಡಿಕೊಂಡ ಬಗೆಯನ್ನು ಮನದಟ್ಟು ಮಾಡಿಕೊಳ್ಳಬೇಕು.

ಹಾಗೆಯೇ ಇತ್ತೀಚಿನ ಬಂಗಾಲಿ ಕವಿ ರವೀಂದ್ರನಾಥ ಠಾಕೂರ್ ಅವರ ಬಗೆಗೂ ಅರ್ಥ ಮಾಡಿಕೊಳ್ಳಬೇಕು. ಆಧುನಿಕ ಭಾರತೀಯ ಸಾಹಿತ್ಯಿಕ ಹಿನ್ನೆಲೆಯಲ್ಲಿ ರವೀಂದ್ರನಾಥರು ಕುವೆಂಪುಗಿಂತ ಮೊದಲಿನವರು, ಪೂರ್ವದವರು. ಪರೋಕ್ಷವಾಗಿ ರವೀಂದ್ರನಾಥರ ಸಾಹಿತ್ಯಿಕ ಬಳುವಳಿಯನ್ನು ಬಹುಮಟ್ಟಿಗೆ ಸಾಹಿತ್ಯಿಕ, ಸಾಂಸ್ಕೃತಿಕ ರೀತಿಯಲ್ಲಿ ಮುಂದುವರಿಸಿದವರು ಕುವೆಂಪು. ಇವರಿಬ್ಬರೂ ಕತೆ, ಕಾದಂಬರಿ, ಕಾವ್ಯ, ಗೇಯ ಗೀತಗಳು, ವೈಚಾರಿಕ ನಿಬಂಧ, ವಿಮರ್ಶೆ, ತಾತ್ವಿಕ ಮೀಮಾಂಸೆ, ನಾಟಕ ಇತ್ಯಾದಿ ಕ್ಷೇತ್ರಗಳಲ್ಲಿ ಸಮಾನವಾಗಿ ಪ್ರತಿಭೆಯನ್ನು ಮೆರೆದವರಾಗಿದ್ದಾರೆ.

ಈಗ ಮುಖ್ಯವಾಗಿ ನಾವು ಗಮನಿಸಬೇಕಾಗಿದ್ದು ಅವರ ನಾಟಕ ಕೃತಿಗಳ ಬಗ್ಗೆ. ರವೀಂದ್ರರ ನಾಟಕ ಸೃಷ್ಟಿ ವೈವಿಧ್ಯಪೂರ್ಣವಾದದ್ದು. ಅವರು ಮಕ್ಕಳ ನಾಟಕ, ರೂಪಕಗಳು, ಗೀತನಾಟಕ, ಪೂರ್ಣಾವಧಿ ರಂಗನಾಟಕ ಇತ್ಯಾದಿ ಎಲ್ಲ ಕ್ಷೇತ್ರಗಳಲ್ಲಿ ಕೃಷಿ ಮಾಡಿದ್ದಾರೆ. ಅವರಿಗೆ ರಂಗಭೂಮಿಯ ನಿಕಟ ಸಂಪರ್ಕವಿತ್ತು. ಅವರು ನಾಟಕ ನೋಡಿದ್ದರು, ಆಡಿದ್ದರು, ಆಡಿಸಿದ್ದರು, ನಟಿಸಿದ್ದರು, ನಿರ್ದೇಶಿಸಿದ್ದರು. ರವೀಂದ್ರರು ಬಂಗಾಲಿಯಲ್ಲಿ ಬರೆದ ನಾಟಕಗಳು ಇಂಗ್ಲಿಷ್, ಹಿಂದೀ ಮತ್ತು ಇತರ ಭಾಷೆಗಳಿಗೆ ಅನುವಾದಗೊಂಡಿದೆ. ಕೆಲವನ್ನು ಅವರೇ ಇಂಗ್ಲಿಷಿಗೆ ಅನುವಾದಿಸಿದ್ದಾರೆ, ಕೆಲವನ್ನು ಇತರರು ಮಾಡಿದ್ದಾರೆ. ಹಿಂದೀ ಭಾಷೆಯ ಪ್ರತಿಷ್ಠಿತ ಅನುವಾದಕರು, ಲೇಖಕರು ಹಿಂದಿಗೆ ಅಳವಡಿಸಿದ್ದಾರೆ. ಮಾತೃಭಾಷೆ ಹಿಂದೀ ಇದ್ದ, ಬಂಗಾಲಿಯನ್ನು ಚೆನ್ನಾಗಿ ಅರಿತಿದ್ದ ಲೇಖಕರು ಈ ಪಟ್ಟಿಯಲ್ಲಿದ್ದಾರೆ ಎಂಬುವನ್ನು ಗಮನಿಸಬೇಕು. ಅವನ್ನು ಓದಿದಾಗ, ಅವು ಸ್ವತಂತ್ರ ಹಿಂದೀ ನಾಟಕಗಳೇ ಎಂಬಂತೆ ಓದಿಸಿಕೊಳ್ಳುತ್ತವೆ. ಅವು ಕೂಡ ರಂಗದ ಮೇಲೆ ಬಂದು, ಪ್ರಯೋಗಗೊಂಡು, ನಂತರ

ಪ್ರಕಟವಾಗಿರಬಹುದು. ಸ್ವಲ್ಪ ಮಟ್ಟಿಗೆ ಹಿಂದೀ ತಿಳಿದಿದ್ದ ರವೀಂದ್ರರು, ಇಂಗ್ಲಿಷ್ ನೆರವಿನೊಂದಿಗೆ ಕಬೀರನ ಆಯ್ದ 'ಪದ್'ಗಳನ್ನು ತಮ್ಮದೇ ಆದ ಕಾವ್ಯಾತ್ಮಕ ಇಂಗ್ಲಿಷಿಗೆ ಅನುವಾದಿಸಿದ್ದು ಎಲ್ಲ ಅನುವಾದಕರಿಗೆ ಒಂದು ಆದರ್ಶ ಕೃತಿಯೆನಿಸುವಂತೆ ಉಳಿದಿದೆ. ನಾಟಕ ಸೃಷ್ಟಿಯ ನಿಟ್ಟಿನಲ್ಲಿ ಯೋಚಿಸುವಾಗ ಕುವೆಂಪು ಕೂಡ ಒಂದು ರೀತಿಯಲ್ಲಿ ಕನ್ನಡದ ರವೀಂದ್ರರೇ.

೨

ಒಂದು ಪ್ರತಿಷ್ಠಿತ ವಿಶ್ವವಿದ್ಯಾಲಯ ಕುವೆಂಪು ನಾಟಕವನ್ನು ಅನುವಾದ ಮಾಡಿಸಿದ್ದರಿಂದ ಮತ್ತು ಪ್ರಕಟಿಸುತ್ತಿದ್ದುದರಿಂದ ಈಗಾಗಲೇ ಕುವೆಂಪು ನಾಟಕಗಳನ್ನು ಹಿಂದೀ ಭಾಷೆಗೆ ಅನುವಾದಿಸಿದವರು ಹಾಗೂ ಅನುವಾದಿಸುವವರು, ಮತ್ತು ಇನ್ನು ಮುಂದೆ ಅನುವಾದ ಮಾಡಿಸುವವರು ಲಕ್ಷ್ಯದಲ್ಲಿಟ್ಟುಕೊಳ್ಳಬೇಕಾದ ಕೆಲವು ಅಂಶಗಳು ಕೆಳಗಿನಂತಿವೆ ಎಂದು ನಾನು ಭಾವಿಸಿದ್ದೇನೆ. ೧) ನಾವು ಹಿಂದೀ ಜಗತ್ತಿಗೆ, ಹಿಂದೀ ಭಾಷೆ ಮತ್ತು ಸಾಹಿತ್ಯಲೋಕಕ್ಕೆ 'ಮಹಾಕವಿ ಕುವೆಂಪು' ಅವರನ್ನು ಪರಿಚಯಿಸುತ್ತಿದ್ದೇವೆ. ೨) ಮಹಾಕವಿ 'ಕುವೆಂಪು ರಚಿಸಿದ ನಾಟಕಗಳನ್ನು' ಪರಿಚಯಿಸುತ್ತಿದ್ದೇವೆ. ೩) ಕನ್ನಡ ನಾಟಕಗಳ ಚರಿತ್ರೆಯ ಹಿನ್ನೆಲೆಯಲ್ಲಿ ನಾಟಕಕಾರ ಕುವೆಂಪು ಅವರನ್ನು ಪ್ರತಿಷ್ಠಾಪಿಸುತ್ತಿದ್ದೇವೆ. ೪) ಒಟ್ಟಿನಲ್ಲಿ ಕನ್ನಡ ನಾಟಕಗಳನ್ನು ಪರಿಚಯಿಸುತ್ತಿದ್ದೇವೆ. ೫) ನಮ್ಮ ರಂಗಭೂಮಿಯ 'ಅಂದಿನ ಇತಿಹಾಸವನ್ನು' ತೋರಿಸುತ್ತಿದ್ದೇವೆ. ೬) ಕನ್ನಡದ ಹಿರಿಮೆಯನ್ನು ಎತ್ತಿ ಹಿಡಿಯಲು ಯತ್ನಿಸುತ್ತಿದ್ದೇವೆ. ೭) ಕರ್ನಾಟಕದ ಹಿಂದೀ ಅನುವಾದಕರ ಅಥವಾ ಇಲ್ಲಿಯ ವಿದ್ವಾಂಸರ, ಅಧ್ಯಾಪಕರ ಹಿಂದೀ ಪರಿಜ್ಞಾನವನ್ನು ತೋರಿಸುತ್ತಿದ್ದೇವೆ. ೮) ನಮ್ಮ ಅನುವಾದಕರ ಹಿಂದೀ ಜ್ಞಾನ ಮತ್ತು ಹಿಂದೀ ಭಾಷೆಯ ಮೇಲಿನ ಹಿಡಿತ, ಪ್ರಬುದ್ಧತೆ ಮತ್ತು 'ತನ್ಮೂಲಕ ಅವರ ವ್ಯಕ್ತಿತ್ವವನ್ನು' ಪ್ರದರ್ಶಿಸುತ್ತಿದ್ದೇವೆ. ೯) ಈ ಸಾಮಾನ್ಯ ತಿಳಿವಳಿಕೆ, ಗೌರವ ಭಾವಗಳ 'ಒಟ್ಟಾರೆ ಪರಿಣಾಮ' ಕನ್ನಡದ ಮೇಲೆ, ಇಲ್ಲಿಯ ನಾಟಕ, ರಂಗಭೂಮಿ, ವಿದ್ವತ್ ಪರಂಪರೆಯ ಮೇಲೆ ಆಗುವುದನ್ನು ಲಕ್ಷ್ಯದಲ್ಲಿಡ ಬೇಕಾಗುತ್ತದೆ.

೩

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಪ್ರಸಾರಾಂಗ ಪ್ರಕಟಿಸಿದ, 'ಕುವೆಂಪು ಸಮಗ್ರ ನಾಟಕ' (ಸಂ. ಡಾ. ಕೆ. ಸಿ. ಶಿವಾರೆಡ್ಡಿ; ೨೦೦೪)ದಲ್ಲಿ ಕುವೆಂಪು ಅವರ ಒಟ್ಟು ೧೪ ನಾಟಕಗಳಿವೆ. ಅಲ್ಲಿರುವ ೨ ರೂಪಾಂತರ, ಅಳವಡಿಕೆಗಳಾದ 'ಬಿರುಗಾಳಿ' (೧೯೩೦ : 'ಟೆಂಪೆಸ್ಟ್) ಮತ್ತು 'ರಕ್ತಾಕ್ಷಿ' (೧೯೩೨ ; 'ಹ್ಯಾಮ್‌ಲಿಟ್) ಬಿಟ್ಟು ಉಳಿದ ೧೨ ಸ್ವತಂತ್ರ (೧೦ ಪೂರ್ಣಾವಧಿ, ಗಂಭೀರ + ೨ ಮಕ್ಕಳ) ನಾಟಕಗಳನ್ನು ಹಿಂದೀ ಅನುವಾದಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಮೂಲ ಆಕರ ಸಂಗ್ರಹದಲ್ಲಿರುವಂತ ಕುವೆಂಪು ನಾಟಕಗಳ ಬಗ್ಗೆ ಮಹತ್ವದ ಉಪೋದ್ಘಾತದ ಮಾತುಗಳಾಗಲಿ; ಮತ್ತು ಹಿಂದೀ ಭಾಷಿಕರಿಗೆ ಅಗತ್ಯವಾಗಿ

ತ್ರಿಳಿಸಬೇಕಾದ ಮಹಾಕವಿ, ನಾಟಕಕಾರ, ಚಿಂತಕ, ಘನವ್ಯಕ್ತಿತ್ವದ ಕುವೆಂಪು ಕುರಿತ ಪರಿಚಯ ಲೇಖನ ಅಥವಾ ಜೀವನದ ವಿವರಗಳು, ಅವರ ಕೃತಿಗಳ ಪಟ್ಟಿ, ಅವರ ನಾಟಕಗಳ ವಸ್ತು ವಿವೇಚನೆ ಇತ್ಯಾದಿ ಈ ಹಿಂದೀ ಸಂಪುಟದಲ್ಲಿ ಇಲ್ಲ. ನೇರವಾಗಿ ೫೧೫ ಪುಟಗಳಲ್ಲಿ ವ್ಯಾಪಿಸಿದ ಹಿಂದೀ ಅನುವಾದಗಳನ್ನು ಪ್ರಸ್ತುತ ಸಂಪಾದಕರು ಕೊಟ್ಟಿರುವ ಕ್ರಮದಲ್ಲಿ ಈ ಕೆಳಗೆ ನೀಡುತ್ತಿದ್ದೇನೆ. (ಕಂಸದಲ್ಲಿ ಆಯಾ ನಾಟಕದ ತಲೆ ಬರಹ ಮತ್ತು ಅದು ಮೊದಲು ಪ್ರಕಟವಾದ ವರ್ಷಗಳನ್ನು ಕೊಟ್ಟಿರುತ್ತೇನೆ)

೦೧) ಶೂದ್ರ ತಪಸ್ವಿ (ಶೂದ್ರ ತಪಸ್ವಿ : ೧೯೪೪)
ಅನುವಾದ : ಬಿ. ಆರ್. ನಾರಾಯಣ

೦೨) ಶ್ಮಶಾನ್ ಕುರುಕ್ಷೇತ್ರ (ಶ್ಮಶಾನ್ ಕುರುಕ್ಷೇತ್ರಂ : ೧೯೩೧) :
ಅನುವಾದ : ಬಿ. ಆರ್. ನಾರಾಯಣ

೦೩) ಅಂಗೂಠೇ ಕೇ ಬದಲೇ (ಬೆರಳ್‌ಗೆ ಕೊರಳ್ : ೧೯೪೭)
ಅನುವಾದ : ಬಿ. ಆರ್. ನಾರಾಯಣ

೦೪) ಮಹಾರಾತ್ರಿ (ಮಹಾರಾತ್ರಿ : ೧೯೩೧)
ಅನುವಾದ : ಪ್ರಧಾನ ಗುರುದತ್ತ

೦೫) ಸಫಾಈಗಾರ್ (ಜಲಗಾರ : ೧೯೨೮)
ಅನುವಾದ : ತಿಪ್ಪೇಸ್ವಾಮಿ

೦೬) ವಾಲ್ಮೀಕಿ ಕಾ ಭಾಗ್ಯ (ವಾಲ್ಮೀಕಿಯ ಭಾಗ್ಯ : ೧೯೩೧)
ಅನುವಾದ : ತಿಪ್ಪೇಸ್ವಾಮಿ

೦೭) ಯಮ್ ಕಿ ಹಾರ್ (ಯಮನ ಸೋಲು : ೧೯೨೮)
ಅನುವಾದ : ವೀ ಸೌಭಾಗ್ಯಲಕ್ಷ್ಮಿ

೦೮) ಕಾನೀನ್ (ಕಾನೀನ : ೧೯೨೪)
ಅನುವಾದ : ಎಂ. ಎಸ್. ಶಶಿಕಲಾ ಗೌಡ

೦೯) ಮೇರಾ ಗೋಪಾಲ್ (ನನ್ನ ಗೋಪಾಲ : ೧೯೩೦)
ಅನುವಾದ : ಎಂ. ಎಸ್. ಶಶಿಕಲಾ ಗೌಡ

೧೦) ಬಾದಲ್ ಭೈಯಾ ಕಾ ಛೋಟಾ ಭಾಯಿ (ಮೋಡಣ್ಣನ ತಮ್ಮ : ೧೯೨೬)
ಅನುವಾದ : ಜ್ಯೋತಿ ಶಂಕರ್

೧೧) ಚಂದ್ರಹಾಸ್ (ಚಂದ್ರಹಾಸ : ೧೯೬೩)
ಅನುವಾದ : ಶ್ರೀಧರ ಹೆಗಡೆ

೧೨) ಬಲಿದಾನ್ (ಬಲಿದಾನ : ೧೯೪೭)
ಅನುವಾದ : ಶ್ರೀಧರ ಹೆಗಡೆ

ನಾಟಕ ರಚನೆಗೆ ಕುವೆಂಪು ಬಳಸಿದ ವಸ್ತು, ಉದ್ದೇಶ, ಶೈಲಿ, ಕಾವ್ಯಾತ್ಮಕತೆ, ಭಾಷೆ, ಸಾಂದರ್ಭಿಕ ಪದಗಳ ಬಳಕೆ, ಅವುಗಳ ಅನಿವಾರ್ಯತೆ, ಅವರು ಬರೆವ ಟಿಪ್ಪಣಿಗಳು ಇತ್ಯಾದಿ ಹೇಗೆ ಅನುವಾದಗೊಂಡಿವೆ ಎಂಬುದನ್ನು ನಾವು ಪರಿಶೀಲಿಸ ಬೇಕು. ಈಗ ನನ್ನ ಕೈಯಲ್ಲಿರುವ ಕೃತಿಯಲ್ಲಿ ಹೊಂದಿಸಿರುವ ಕ್ರಮದಲ್ಲಿ ಈ ನಾಟಕಗಳ ಬಗ್ಗೆ **ಟಿಪ್ಪಣಿ ರೂಪದಲ್ಲಿ ಕೆಲವು ಮಾತುಗಳನ್ನು** ವಿವರಿಸುತ್ತೇನೆ. ಈ ಪರಿಸ್ಥಿತಿಯಲ್ಲಿ ಏನನ್ನೂ ವಿಸ್ತರಿಸುವ, ವಿವರಿಸುವ ಅಗತ್ಯ ಇಲ್ಲವೆನಿಸುತ್ತದೆ.

೧) ಶೂದ್ರ ತಪಸ್ವೀ: ಬಿ. ಆರ್. ನಾರಾಯಣ

೧) ಈ ನಾಟಕ ರಚನೆಗೆ ಕುವೆಂಪು ೪ಪುಟಗಳ ಮುನ್ನುಡಿ ಬರೆದಿದ್ದಾರೆ. ಕೊನೆಯಲ್ಲಿ '೨-೧-೧೯೪೪, ಬೆಂಗಳೂರು' ಎಂದು ನಮೂದಿಸಿ ತಮ್ಮ ಅಂಕಿತ ಹಾಕಿದ್ದಾರೆ. ಅನುವಾದಕರು ಮೂಲದ ಮಹತ್ವದ ಕೊನೆಯ ೯ ಸಾಲುಗಳನ್ನು ಅನುವಾದಿಸಿಲ್ಲ; ದಿನಾಂಕ, ಊರಿನ ಹೆಸರು ನಮೂದಿಸಿಲ್ಲ. ಅಷ್ಟೇ ಅಲ್ಲ, ಆರಂಭದಲ್ಲಿ 'ಅನುವಾದಕ್ ಕೀ ಓರ್ ಸೆ" (ಅನುವಾದಕರ ಮಾತು) ಎಂದು ಬರೆದುಕೊಂಡು, 'ಕುವೆಂಪು' ಹೆಸರಿನ ಜಾಗದಲ್ಲಿ 'ಬಿ. ಆರ್. ನಾರಾಯಣ' ಎಂದು ತಮ್ಮ ಹೆಸರು ಹಾಕಿಕೊಂಡಿದ್ದಾರೆ. ಇದಲ್ಲದೆ, ಮೊದಲ ಮುನ್ನುಡಿಯ ಜೊತೆಯಲ್ಲಿಯೇ 'ಮಾರ್ನುಡಿ' ಶೀರ್ಷಿಕೆಯಲ್ಲಿ ಕುವೆಂಪು '೨೪.೭.೧೯೪೭ : ಮೈಸೂರು : ಕುವೆಂಪು' ಎಂದು ಹೆಸರು ನಮೂದಿಸಿ ಬರೆದ ೩ ಪುಟಗಳನ್ನು ಅನುವಾದಿಸಿಯೇ ಇಲ್ಲ. (ನೋಡಿ : ಮೂಲ ಕನ್ನಡ ಪುಟ : ೧೮೯ -೧೯೮;' ಹಿಂದೀ ಪುಟ ೨-೪) ಅಥವಾ ಹಿಂದೀ ಅವತರಣಿಕೆಗೆ ಅದರ ಅನುವಾದ ಅನಗತ್ಯವಾದುದೆನಿಸಿದರೆ ಹಾಗೆ ತಿಳಿಸಿಬಿಡಬಹುದಿತ್ತು.

೨) ಮೂಲ ನಾಟಕದ ಆಗಿನ ಹಳೆ ಕನ್ನಡ ಅನ್ನಿಸುವ, ಆದರೆ ಸರಳವಾಗಿರುವ ಕನ್ನಡ ಪದ್ಯ ಸಂವಾದಗಳನ್ನು ಈಗಿನ ಹಿಂದೀ ಗದ್ಯವಾಗಿ ಅನುವಾದಿಸಿದ್ದಾರೆ. ಕುವೆಂಪು ರಚಿತ ಕಾವ್ಯ ನಾಟಕ, ಲಯ ಸಂಗೀತ, ಅದರ ಗಂಧ, ಗಾಂಭೀರ್ಯ ಅದ್ಭುತವಾಗಿದೆ. ಅದರ ಕಿಂಚಿತ್ ಪ್ರಯತ್ನವೂ ಅನುವಾದದಲ್ಲಿ ಕಾಣುವುದಿಲ್ಲ.

೩) ಪಾತ್ರಗಳ ಪರಸ್ಪರ ಸಂಬೋಧನೆ ಮತ್ತು ಇತರರ ಸಂವಾದಗಳಲ್ಲಿ ಏಕರೂಪತೆ ಇಲ್ಲ. (ನೋಡಿ : ಪುಟ - ೭, ೮ ಮುಂ.) ಹಿಂದಿಯ 'ತೂ', 'ತುಮ್' ಮುಂತಾದ ಸರ್ವನಾಮಗಳ ಗೊಂದಲ ಎಲ್ಲ ಪುಟಗಳಲ್ಲಿ ಇದೆ.

೪) ಪದಗಳ, ಕಾವ್ಯಾಂಶಗಳ ಅನೇಕ ಅಪಾರ್ಥಕಾರಕ ಅನುವಾದಗಳ ವಿವರ ಪಟ್ಟಿ ಮಾಡುವುದು ಈಗ ಸಾಧ್ಯವಿಲ್ಲ. ಆದರೂ ಒಂದು ಉದಾಹರಣೆ: "ಆರೀತನ್ ರುಂದ್ರಸತ್ವನ್? ದೇವತೆವೋಲ್ ಪೊಳೆವನ್!" (ರಾಮನನ್ನು ಕುರಿತು ಕುಮಾರನ ಮಾತು : ಕ. ಪು. ೨೨೪) ಅದರ ಹಿಂದಿ ಅನುವಾದ ಹೀಗಿದೆ :

"ಯಹ್ ಮಹಾಶಕ್ತಿಶಾಲೀ ವ್ಯಕ್ತಿ ಕೌನ್ ಹೈಂ? ಯೇ ತೋ ದೇವತಾ ಕೇ ಸಮಾನ್ ಚಮಕ್ ರಹೇ ಹೈಂ!" (ಹಿಂ. ಪುಟ ೨೨) (ಕೆಳಗಿನ ಅಡ್ಡ ಗೆರೆ ನಾನು ಹಾಕಿದ್ದು.)

೨) **ಶ್ಮಶಾನ್ ಕುರುಕ್ಷೇತ್ರ : ಬಿ. ಆರ್. ನಾರಾಯಣ**

೧) ಆರಂಭದಲ್ಲಿ ಕುವೆಂಪು ಬರೆದ ಅತ್ಯಂತ ಅರ್ಥಗರ್ಭಿತ ಪೀಠಿಕೆಯನ್ನು (ಕ.ಪು.೬೬) ಅನುವಾದಿಸಿಲ್ಲ. ಬದಲಾಗಿ ಅನುವಾದಕರು ತಾವಾಗಿ ಬರೆದ ೧೪ ಸಾಲುಗಳ ನೀರಸ 'ಕಥಾಸಾರ್' ಕೊಟ್ಟಿದ್ದಾರೆ. (ಹಿಂ.ಪು. ೨೪)

೨) ಕುವೆಂಪು ಪಾತ್ರ ಪ್ರಾಧಾನ್ಯದ ಮೇರೆಗೆ ನೀಡಿದ ಪಟ್ಟಿ ಪ್ರವೇಶಾನುಸಾರ ಬಂದಿದೆ, ನಡೆಯುತ್ತದೆ. ಅದರ, ಮೂಲದ ಕಾವ್ಯನಾಟಕ ಇಲ್ಲಿ ಸಂಪೂರ್ಣ ಸರಳ, ಒಮ್ಮೊಮ್ಮೆ ನೀರಸ, ಅರ್ಥಹೀನ ಗದ್ಯವಾಗಿದೆ. ಕನಿಷ್ಠ ಪಕ್ಷ ನಾಟಕಕ್ಕೆ ಅಗತ್ಯವಿದ್ದ ಸಂಭಾಷಣ ಶೈಲಿಯನ್ನಾದರೂ ಉಳಿಸಿಕೊಂಡು ಬಳಸಬೇಕಿತ್ತು.

೩) ಅನುವಾದ ಶೈಲಿಗೆ ಒಂದು ಉದಾಹರಣೆ

"ಇದೇನಿದೀ ಭಾರತ ಕುರುಕ್ಷೇತ್ರಮೀ ದಿನಂ
ಮೂಗುವಟ್ಟಿರ್ಪ ಸುದುಗಾಡಿನಂತಿರ್ಪುದು?
ನಿಚ್ಚಮುಂ ನಾನಾಲಿಸಿರ್ದ ರಣಕಹಳೆಗಳ
ದೆಸೆದೆಸೆಗಳಂ ತಿವಿವ ದನಿಯಿಲ್ಲ...." (ಕ. ಪು. ೮೦)

"ಯಹ್ ಕ್ಯಾ? ಮಹಾಭಾರತ್ ಕಾ ಯಹ್ ಕುರುಕ್ಷೇತ್ರ ಆಜ್ ಏಕ್‌ದಮ್ ಶ್ಮಶಾನ್ ಭೂಮಿ ಬನ್ ಗಯಾ ಹೈ ! ಮೈಂನೇ ರಣ್ ಭೇರಿಯೋಂ ಕೇ ತೂರ್ಯನಾದ್, ಜೋ ದಸೋಂ ದಿಶಾಓಂ ಕೋ ಗುಂಜಾತೇ ಥೇ, ಸುನೇ ಥೇ ವೇ ಮೌನ್ ಹೋ ಗಯೇ ಹೈಂ!" (ಹಿ.ಪು. ೨೬) ಮಹಾಭಾರತದ ಒಂದು ಕೃತಿ, ಭಾರತ ಒಂದು ಸಂಸ್ಕೃತಿ; ಮಹಾಭಾರತ ಭಾರತದಲ್ಲಿದೆ. ಕುವೆಂಪುವಿನ ಮಹಾ 'ಭಾರತ' ಅನುವಾದದಲ್ಲಿ 'ಮಹಾಭಾರತ'ವಾದುದು ಸಮಂಜಸವಲ್ಲ.+

"**ರುದ್ರ** – ವರ್ಣಿಸಯ್, ವಿಶ್ವಕವಿ, ಆ ಮಿಂಚುವ ದೃಶ್ಯಮಾಲಿಗಳನ್!

ಕೃಷ್ಣ – ಬಣ್ಣಿಪನ್ ಮುಖ್ಯಮನ್:" (ಕ. ಪು. ೧೨೦)

ರುದ್ರ–ವರ್ಣನ್ ಕರೋ ಹೇ ವಿಶ್ವ ಕವಿ, ಉನ್ ಕೌಂಧನೇವಾಲೀ ದೃಶ್ಯ-ಮಾಲಾ ಕಾ।

ಕೃಷ್ಣ – ಉಸಕೀ ಮುಖ್ಯ ಮುಖ್ಯ ಬಾತೋಂ ಕಾ ವರ್ಣನ್ ಕರ್‌ತಾ ಹೂಂ :
(ಹಿ. ಪು. ೬೧)

೩) ಅಂಗೂಠೇ ಕೇ ಬದಲೇ .... ಬಿ. ಆರ್. ನಾರಾಯಣ

೧) 'ಬೆರಳ್‌ಗ ಕೊರಳ್' ನಾಟಕದ ಆರಂಭದಲ್ಲಿ ಕುವೆಂಪು ಶ್ರೀಯವರಿಗೆ ನೀಡಿದ ೧೭ ಸಾಲುಗಳ ಐತಿಹಾಸಿಕ ಅರ್ಪಣ ಪದ್ಯದ ಅನುವಾದವೂ ಇಲ್ಲ. ಆ ಕುರಿತು ಉಲ್ಲೇಖವೂ ಇಲ್ಲ.

೨) 'ಬೆರಳ್‌ಗೆ ಕೊರಳ್' ಶೀರ್ಷಿಕೆಯನ್ನು ಯಥಾವತ್ತಾಗಿ ಅನುವಾದ ಮಾಡಲು ಹೋಗಿ, 'ಹೆಬ್ಬೆರಳು' ತಲೆಯಲ್ಲಿ ಇಟ್ಟುಕೊಂಡು, "ಅಂಗೂಠೇ ಕೇ ಬದಲೇ..." ಎಂದು ಅನುವಾದಿಸಿ ಕೊನೆಯಲ್ಲಿ ೩ ಟಿಕ್ಕಿ ಇಟ್ಟಿದ್ದಾರೆ. 'ಉಂಗಲೀ ಔರ್ ಗಲಾ' ಅಥವಾ ಇನ್ನೂ ಸೂಕ್ತವಾದ 'ಏಕಲವ್ಯ' ಹೆಸರನ್ನೇ ಇಡ ಬಹುದಿತ್ತು.

೩) ಮೂಲದಲ್ಲಿ (ಕ.ಪು. ೨೭೯-೨೮೮) ಕುವೆಂಪು ಬರೆದ ೧೦ ಪುಟಗಳ 'ಟಿಪ್ಪಣಿಕೆ'ಯನ್ನು, ಮಧ್ಯದ ಪದ್ಯಗಳನ್ನು ಅಲ್ಲಲ್ಲಿ ಬಿಟ್ಟು ಉಳಿದೆಡೆ ತಮಗೆ ತಿಳಿದಷ್ಟು ಮಾತ್ರ ಅನುವಾದಿಸಿದ್ದಾರೆ. ಮೂಲದಲ್ಲಿ ನಾಟಕದ ಕೊನೆಯಲ್ಲಿದ್ದ ಟಿಪ್ಪಣಿಯನ್ನು ಈಗ ನಾಟಕದ ಮೊದಲಲ್ಲಿ ತಂದು, 'ಅನುವಾದಕ್ ಕೀ ಓರ್ ಸೇ' ಎಂದು **ತಮ್ಮ ಹೆಸರಿನಲ್ಲಿ** (ಹಿ.ಪು. ೬೪-೭೧) ಹಾಕಿಕೊಂಡಿದ್ದಾರೆ.

೪) ಮೂಲದಲ್ಲಿ ೩ ದೃಶ್ಯಗಳಿಗೆ ಗುರು, ಕರ್ಮ, ಯಜ್ಞ ಎಂದು ತಲೆ ಕಟ್ಟುಗಳಿವೆ. ಅನುವಾದಕರಿಗೆ 'ಗುರು' ಇಷ್ಟವಾದಂತಿಲ್ಲ. ಅದಕ್ಕೆ ಬದಲಾಗಿ "ದೃಶ್ಯ - ಏಕ್" ಎಂದಿದ್ದಾರೆ. (ಹಿ. ಪು. ೭೩)

೫) ಕ.ಪು. ೨೩೨ ಇಡೀ ಪುಟ ಅನುವಾದಿಸಿಲ್ಲ. (ಹಿ.ಪು. ೭೪) ಹೀಗೆಯೇ ಇನ್ನೂ ಹಲವು ಕಡೆ (ನೋಡಿ : ೨೩೫, ೨೬೩ ಮುಂ) ಸಾಲು - ಸಾಲುಗಳ ಅನುವಾದ ಮಾಡಿಲ್ಲ.

೬) ಇಲ್ಲಿಯೂ 'ತೂ', 'ತುಮ್'ಗಳ ಗಡಿಬಿಡಿ ಬಹಳವಾಗಿದೆ.

೭) ಮೂಲದಲ್ಲಿ ದೃಶ್ಯಗಳ ಕೊನೆಯಲ್ಲಿ 'ತೆರೆ' ಇತ್ಯಾದಿ ಇರದಿದ್ದರೂ ಅನುವಾದಕರು ೩ ಕಡೆ 'ಪಟಾಕ್ಷೇಪ್' ಮಾಡಿದ್ದಾರೆ.

೪) ಮಹಾರಾತ್ರಿ : ಪ್ರಧಾನ ಗುರುದತ್ತ

೧) ಅನುವಾದಕರು ಹಿಂದಿಯಲ್ಲಿ ಬರೆದ ೧೧ ಸಾಲುಗಳ 'ಕಥಾಸಾರ್'ದಲ್ಲಿ (ಹಿ.ಪು. ೧೧೬) ಹಿಂದಿಯ ಗಂಧ ಲಭಿಸಿದ್ದರೆ.... ಚೆನ್ನಾಗಿರುತ್ತಿತ್ತು!

೨) ಕುವೆಂಪು ಅವರ ಮೂಲ ಕಾವ್ಯರೂಪವನ್ನು ಅರ್ಥ ಮಾಡಿಕೊಂಡು ಕಾವ್ಯರೂಪದಲ್ಲಿ ಅನುವಾದಿಸಲು ತೊಡಗಿದ ಪ್ರಯತ್ನ ಮಾತ್ರ ಇಲ್ಲಿದೆ. ಸಿದ್ಧಾರ್ಥ ರಾತ್ರಿಯ ಹೊತ್ತು ಕಿಟಕಿಯ ಬಳಿ ಸಾರಿ, ಹೇಳುವ ಕೆಲವು ಮಾತು:

"ಮಲಗಿ, ಕೈವಾರಿಗಳೆ, ಮಲಗಿ, ಏಳದಿರಿ
ವಾದ್ಯಗಾರರೆ, ನಿದ್ದೆ ದೇವತೆಯೆ, ನಿನ್ನ

ಮಧುರ ಚುಂಬನದಿಂದ ಮಧುರತರವಾಗಲಿ!
ನಿನ್ನ ಮುತ್ತಿನೊಳಿಂದು ಎಲ್ಲ ಕಣ್ಣವೆಗಳನು
ಒತ್ತಿ ಹಿಡಿ, ಮೌನದೇವತೆಯೆ ಬಾ, ನಿನ್ನ
ಸಾಮ್ರಾಜ್ಯದೊಳು"

"ಸೋ ಜಾಇಏ, ಹೇ ವಂದಿಗಾಯೋಂ, ಸೋ ಜಾಇಏ, ಉಠಿಏ ಮತ್
ಹೇ ವಾದ್ಯಕಾರೋಂ! ಹೇ ಅಧಿ ದೇವತಾ ನೀಂದ್ ಕೀ, ಮಧುರ್ ತರ್ ಬನಾ ದೋ
ತುಮ್ಹಾರೇ ಮಧುರ್ ಚುಂಬನ್ ಕೋ! ಚುಂಬನ್ ಸೇ ಆಜ್ ತುಮ್ಹಾರೇ
ದಬಾ ದೋ ಪಲ್ಕೋಂ ಕೋ ಸಬ್ ಕೀ! ಹೇ ಅಧಿದೇವತಾ ಮೌನ ಕೀ,
ಹೋ ಜಾಏ ರಾಜ್ ತುಮ್ಹಾರೇ ಸಾಮ್ರಾಜ್ಯ ಕಾ!"

ಹಿಂದಿಯ ಏಕವಚನ, ಬಹುವಚನ, ತೂ, ತುಮ್, ಆಪ್ ಮುಂತಾದವುಗಳ ಬಗ್ಗೆ ಎಷ್ಟು ಎಚ್ಚರ ವಹಿಸಿದರೂ ಕಡಿಮೆ. ಕನ್ನಡದ 'ಮಲಗಿ' ಈ ಸಂದರ್ಭದಲ್ಲಿ ಸಿದ್ಧಾರ್ಥನ ಬಾಯಿಯಲ್ಲಿ ಎಂದೂ 'ಸೋ ಜಾಇಏ' ಆಗಲಾರದು. ಹಿಂದಿಯಲ್ಲಿ 'ದೇವತಾ' ಪುಲ್ಲಿಂಗ ಪದ. ಅದು ಕನ್ನಡದ 'ದೇವತೆ'ಯಂತೆ ಬಳಕೆಯಾಗದು. ಈ ಮತ್ತು ಇಂಥವುಗಳನ್ನು ತೀಡಿಕೊಳ್ಳಲೇ ಬೇಕು. ಸುಮ್ಮನೆ ಇನ್ನೊಂದು ಉದಾಹರಣೆ :

ಧೈರ್ಯವಿದೆಯೇ ಧೈರ್ಯ! ವೈರಾಗ್ಯ ದೇವತೆಯೆ,
ಸಲಹೆನ್ನನಿಂದು **ಮೃದುವಾಗು**, ಎಲೆ ನೆಲವೆ;
ಜನಿಸಿರುವ ರಾಹುಲನ ಕೆನ್ನೆಯಂದದೊಳೀಗ
ಮಿದುವಾಗು, ಎಲೆ ನೆಲವೆ!" (ಕ. ಪು. ೧೪೩)

'ಧೀರಜ್ ರಖೋ, ಹೇ ಮೇರಾ ದಿಲ್ ! ಹೇ ದೇವ್‌ತಾ ವೈರಾಗ್ಯ ಕೀ!
ರಕ್ಷಾ ಕರೋ ಆಜ್ ಮೇರಿ। ಹೇ ಧರ್ತೀ, ಮೃದುಲ್ ಬನ್ ಜಾಓ;
ಅಭೀ ಜನೇ ರಾಹುಲ್ ಕೇ ಗಾಲ್ ಕೇ ಜೈಸೇ ಮೃದುಲ್ ಬನೋ (ಹಿ. ಪು. ೧೩೬)

೫) ಸಫಾಈಗಾರ್ : ತಿಪ್ಪೇಸ್ವಾಮಿ

೧) ಸ್ವಚ್ಛತೆಯ ಕಾಯಕ ಮಾಡುವವರನ್ನು ದ್ಯೋತಿಸುವ ವಿಶಿಷ್ಟ ಪದ ಕನ್ನಡದ 'ಜಲಗಾರ'. ಹಿಂದಿಯಲ್ಲಿ 'ಸ್ವಚ್ಛತಾ ಕರ್ಮಚಾರೀ' ಅಥವಾ 'ಸಫಾಈ ಕರ್ಮಚಾರಿ' ಅನ್ನಬಹುದಿತ್ತೇನೋ. ಆದರೆ ಜಲಗಾರದಂತೆ 'ಸಫಾಈಗಾರ್' ಎಂಬ ಅರ್ಥಪೂರ್ಣ ಏಕಪದ ಟಂಕಿಸಿದ್ದು ಚೆನ್ನಾಗಿದೆ. ಮೂಲ ಸಂಪೂರ್ಣ ಗೀತನಾಟಕದ ಬದಲು ಪತ್ರಿಕೆಗೆ ಸುಳಿದು, ಅದರ ಸೌಂದರ್ಯ ಹಿಡಿಯುವ ಯತ್ನ ಅನುವಾದದಲ್ಲಿ ಸ್ಪಷ್ಟವಾಗಿ ಕಾಣುತ್ತದೆ.

೨) 'ಅನುವಾದಕ್ ಕೀ ಓರ್ ಸೇ' ಎಂದು ತಿಪ್ಪೇಸ್ವಾಮಿ ಬರೆದ ಮೊದಲ ಮಾತು ಕುವೆಂಪು, ನಾಟಕದ ವಸ್ತು ಮತ್ತು ಅನುವಾದಕರ ತಿಳಿವಳಿಕೆಗಳನ್ನು ಜಲಗಾರ ಭಾವದಿಂದಲೇ ವ್ಯಕ್ತಪಡಿಸುತ್ತವೆ.

೩) "ವನ್ ಕೇ ವಿಕಸಿತ್ ಸುಮನೋಂ ಕೋ ಗೂಂಥಕರ್" (ಹಿ. ಪು. ೧೬೦ + (ಕ. ಪು. ೩) ಮುಂತಾದ ಗದ್ಯದಂಥ, ಲಯಬಾಧಕ ಪದಗಳನ್ನು ಸರಳವಾಗಿ, ಸಂಕ್ಷಿಪ್ತಗೊಳಿಸಿ "ವನ್ ಕೇ ವಿಕಸಿತ್ ಸುಮನ್ ಗೂಂಥಕರ್" ಎಂದು ಮಾಡಿದ್ದರೆ... ಎಂದೆಲ್ಲ ಅನ್ನಿಸಿದರೂ ಸಾಧ್ಯವಿದ್ದಷ್ಟು ಅರ್ಥ ಲಯ ಕಾಪಾಡುವ ಪ್ರಯತ್ನವಿದೆ.

೩) ಭೂಮಿಯಲ್ಲಿ ಹುಟ್ಟು ಕುರುಡರಿಗಿಂತ ಕಣ್ಣುಳ್ಳ
ಕುರುಡರೆನಿತೊಳರು? ಬನದ ಕೆಂದಳಿರಲ್ಲಿ
ಬಗ್ಗಿಸುವ ಕೋಗಿಲೆಯೆ, ನಿನ್ನ ಪುಗಲಿಂಚರದಿ
ಪರಮವಾಣಿಯ ಕೇಳದವಗೆ ಕಿವಿಯಿದ್ದರೇಂ?
ಎಲೆ ರಮ್ಯವನಗಳಿರ, ನಿಮ್ಮ ಸೌಂದರ್ಯದಲಿ
ಪರಮಾತ್ಮನಂ ಕಾಣದವಗಿದ್ದರೇಂ ಕಣ್ಣೆರಡು?" (ಕ.ಪು. ೯)

ಹಿಂದಿಯಲ್ಲಿ ಇದು ಹೀಗಾಗಿದೆ : (ಹಿ.ಪು. ೧೬೬) ಇಲ್ಲಿ ಕೆಳಗೆರೆಯ ಭಾಗಗಳನ್ನು ಪರಿಷ್ಕರಿಸಿ, ಹೆಚ್ಚಿನ ಕಾವ್ಯ ತರಬಹುದಾಗಿದೆ ಮತ್ತು ಇಲ್ಲಿಯೂ 'ತೂ, ತುಮ್' ಗಳು ಕಾಡಿವೆ.

"ಇಸ್ ಭೂಮಿ ಪರ್ ಜನ್ಮಾಂಧೋಮ ಸೇ ಆಂಖೋಂ ಕೇ ರಹ್‌ತೇ ಅಂಧೇ ಕಹಾಂ ಬೆಹ್‌ತರ್ ಹೈಂ?
ವನ್ ಕೀ ಲಾಲ್ ಕೋಪಲೋಂ ಪರ್ ಬೈಠೀ ಕೋಯಿಲ್,
ತುಮ್ಹಾರೇ ಕೋಮಲ್ ಕಂಠ ಸೇ ನಿಕಲ್ ನೇ ವಾಲಿ ಪರಮ್ ವಾಣೀ ಕೋ
ನ ಸುನ್‌ನೇವಲೋಮ ಕೋ ಕಾನ್ ರಹ್‌ತೇ ಹುವೆ ಕ್ಯಾ ಲಾಭ?
ಹೆ ರಮ್ಯ ವನೋಂ ಆಪ್ ಕೇ ಸೌಂದರ್ಯ ಮೇ ಜೋ ನಹೀ ದೇಖ್‌ತಾ ಪರಮಾತ್ಮಾ ಕೋ
ಉಸೇ ದೋ ಆಂಖೇಂ ರಹ್‌ನೇ ಸೇ ಕ್ಯಾ ಲಾಭ್?"

೬) **ವಾಲ್ಮೀಕಿ ಕಾ ಭಾಗ್ಯ : ತಿಪ್ಪೇಸ್ವಾಮಿ**

೧) ಮೊದಲಲ್ಲಿ ಬರೆದ ಕುವೆಂಪು ವರ 'ವಿಜ್ಞಾಪನೆ'ಯನ್ನ ಅವರ ಹೆಸರಿನಲ್ಲಿಯೇ, ಸಾಧ್ಯವಿದ್ದಷ್ಟು ನಿರ್ದುಷ್ಟ ಹಿಂದಿಯಲ್ಲಿ ಸ್ತುತ್ಯವಾಗಿ ಅನುವಾದಿಸಿದ್ದನ್ನು ಮೆಚ್ಚಬೇಕು.

೨) ಇದರ ಅನುವಾದದ ಹೊತ್ತಿಗೆ ತಿಪ್ಪೇಸ್ವಾಮಿ ತಮ್ಮನ್ನು ಮತ್ತಷ್ಟು ಪಳಗಿಸಿಕೊಂಡಿದ್ದಾರೆ. ಕಾವ್ಯ ಸಂವಾದಗಳ ಬಳಿಕ ಮೊದಲಾದವು ಇನ್ನಷ್ಟು ಸುಂದರವಾಗಿವೆ. ಆದರೆ ಇಲ್ಲಿಯೂ ಹಿಂದೀ ಸರ್ವ ನಾಮಗಳು ಅವರನ್ನು ಮತ್ತೆ ಮತ್ತೆ ಕಾಡಿರುವುದು ಆಶ್ಚರ್ಯ, ಬೇಸರ. ಉದಾ...

"ನಿನ್ನಂ ನಾನೋವಿಕೊಂಡಿರ್ಪೆಂ
ಅಂಜದಿರು, ಹಾ ನನ್ನೊಡನೆ!" (ಕ. ಪು. ೧೮೬)

ಆಪ್‌ಕೀ ಹಮ್ ಕರೇಂಗೇ ರಕ್ಷಾ
ಡರೋ ಮತ್, ಆಓ ಮೇರೇ ಸಾಥ್" (ಹಿ. ಪು. ೨೨೧)
"ತಾಯಿ, ಮೇಲೇಳು
ನಿನಗಿಲ್ಲಂ ಒಳಿತಹುದು.
ನೀನೆನ್ನ ಮಹಾಕಾವ್ಯದ ಸವಿಗಣ್ಣಲೆ!
ಕಥಾ ನಾಯಿಕೆಯಲ್ತೆ!
ವಾಲ್ಮೀಕಿಯ ಭಾಗ್ಯಮಲ್ತೆ" (ಕ.ಪು. ೧೮೬)

"ಮಾತಾ ಉಠೋ ತೋ, ಆಪ್ ಕಾ ಭಲಾ ಹೋಗಾ।
ಆಪ್ ಮೇರೇ ಮಹಾಕಾವ್ಯ ಕೀ ಸುಂದರ್ ಆಂಖ್ ಹೋ।
ಕಥಾ ನಾಯಿಕಾ ಹೋ,
ವಾಲ್ಮೀಕಿ ಕಾ ಭಾಗ್ಯ ಹೋ" (ಹಿ. ಪು. ೨೧೨)

೬) **ಯಮ್ ಕೀ ಹಾರ್ : ಪೀ. ಸೌಭಾಗ್ಯಲಕ್ಷ್ಮಿ**

೧) ಸೌಭಾಗ್ಯಲಕ್ಷ್ಮಿ ಯವರು ಸ್ವಚ್ಛ, ಶುದ್ಧ, ನೇರ, ಸುಂದರ ಹಿಂದಿಯಲ್ಲಿ ಸತ್ಯವಾನ್ ಸಾವಿತ್ರಿ ಕಥೆ, ದಾರ್ಶನಿಕ ಆಶಯ, ಮತ್ತು ಕುವೆಂಪು ಅಪೇಕ್ಷೆಯನ್ನು ವಿಶದೀಕರಿಸಿದ್ದಾರೆ. ಪ್ರಸ್ತುತ ಸಂಗ್ರಹದಲ್ಲಿ ಬಲು ಮುದಗೊಳಿಸುವ ಭಾಷೆ ಇವರದು. ಆದರೆ ನಾಟಕ ಭಾಗದ ಅನುವಾದದಲ್ಲಿ ಅಲ್ಲಲ್ಲಿ ಕಂಡು ಬರುವ ಸ್ಖಾಲಿತ್ಯಗಳು ಒಟ್ಟಿನ ಪ್ರಭಾವವನ್ನು ಮಸುಕುಗೊಳಿಸುತ್ತವೆ. ಅಂಥವರನ್ನು ತಿದ್ದಿಕೊಂಡಲ್ಲಿ ಅವರು ಇಲ್ಲಿ ಉಳಿದವರಿಗಿಂತ ಶ್ರೇಷ್ಠ ಅನುವಾದ ಸಾಧಿಸಬಲ್ಲರು.

೨) ತಿದ್ದಿಕೊಳ್ಳುವಂಥ ೧-೨ ಉದಾಹರಣೆ ಮಾತ್ರ : ಹಿ.ಪು. ೨೧೭ - "ಕ್ರೂರ್ ನಿಯತಿ ನೇ ಜೀವನ್ ಕೀ ಸೂತ್ ಕಾಟ್ ಡಾಲೀ ಹೈ". ಹಿಂದಿಯಲ್ಲಿ 'ಸೂತ್' (ಸೂತ್ರ) ಪುಲ್ಲಿಂಗ ಪದ; ಹೀಗಾಗಿ 'ಜೀವನ್ ಕಾ ಸೂತ್ ಕಾಟ್ ಡಾಲಾ ಹೈ' ಎಂದಾಗಬೇಕು. (ಹಿ. ಪು. ೨೨೧ - "ಉಸ್‌ಕೇ ಬಗಲ್ ಮೇಂ" ಇಲ್ಲಿ 'ಉಸ್‌ಕೀ' ಎಂದೇ ಆಗುತ್ತದೆ.

೩) ಹಿಂದಿ ಆಡುಮಾತಿನ ಧಾಟಿಯನ್ನೂ ಚೆನ್ನಾಗಿ ತಿಳಿದಿರುವ ಸೌಭಾಗ್ಯಲಕ್ಷ್ಮಿ ಅವರು ಉಪಸಂಹಾರ ದೃಶ್ಯದ ಮಂಗಲದಂತೆ ಕೊನೆಯಲ್ಲಿ ಬರುವ ಅನುವಾಕ್‌ಗಳ ಅನುವಾದದಲ್ಲಿ ಒಂದು ವಿಶಿಷ್ಟ ಪ್ರಯೋಗ ಮಾಡಿದ್ದಾರೆ.

ದೂತ : ಸಾವಿತ್ರಿ ಸತ್ಯವಂತರ ಕತೆ ಕೇಳಿದವ -/ ರೆಲ್ಲರಾಗಲಿ ಧನ್ಯ!

ಯಕ್ಷ : ನೋಡಿದವರಿಗೆ ಪುಣ್ಯ

ದೂತ : ಆಡಿದವರಿಗ ಭಕ್ತಿ!

ಯಕ್ಷ : ಮಾಡಿದವರಿಗೆ ಮುಕ್ತಿ !" (ಕ. ಪು. ೭೩)

ಅದು ಹಿಂದಿಯಲ್ಲಿ ಹೀಗಿದೆ :

ದೂತ್ : ಸಾವಿತ್ರೀ ಸತ್ಯವಾನ್ ಕೀ ಕಹಾನೀ ಜೋ ಸುನೇ, / ವೆ ಧನ್ಯ ಹೋಂಗೇ

ಯಕ್ಷ : ಜಿನ್ಹೋಂನೆ ದೇಖಾ, ವೇ ಪುಣ್ಯವಾನ್ ಹೈಂ।

ದೂತ್ : ಜೋ ಮಂಚನ್ ಕರೇಂಗೇ, ಉನ್ಹೇಂ ಭಕ್ತಿ ಹೈ।

ಯಕ್ಷ : ಜೋ ಇಸ್‌ಮೇಂ ಭಾಗ್ ಲೇಂಗೇ, ಉನ್‌ಕೋ ಮುಕ್ತ ಹೈ" (ಹಿ.ಪು.೨೫೨)

ಇಲ್ಲಿ ಕೊನೆಯಲ್ಲಿ ಬರುವ ನೋಡಿದವರಿಗೆ, ಆಡಿದವರಿಗೆ, ಮಾಡಿದವರಿಗೆ ಪದಗಳ ದೂರಾರ್ಥಗಳನ್ನು ಗ್ರಹಿಸಿದ್ದಾರ. ಆದ್ದರಿಂದ 'ಆಡಿದವರಿಗ' ಎಂಬುದನ್ನು 'ನಾಟಕ ಆಡುವುದು' ಎಂದು ಭಾವಿಸಿ, ಹಿಂದಿಯಲ್ಲಿ 'ಮಂಚನ್ ಕರೇಂಗೆ' (ರಂಗಕ್ಕೆ ತರುವುದು, ಸ್ಟೇಜಿಂಗ್) ಎಂದು ಅನುವಾದಿಸಿದ್ದಾರೆ. ಇಲ್ಲಿ ಸರ್ವಸ್ವವನ್ನೂ ಒಳಗೊಳ್ಳುವ ದೃಷ್ಟಿ, ವಾಕ್, ಕೃತಿ(ಕರ್ಮ)ಗಳು ಪ್ರಧಾನವಾಗಿರುವುದರಿಂದ 'ನೋಡು ಆಡು ಮಾಡು'ಗಳಿಗೆ 'ದೇಖ್ ಬೋಲ್ ಕರ್'ಗಳ ಮೂಲಕವೇ ಅರ್ಥವನ್ನು ಧ್ವನಿಸಬೇಕು. 'ಬೋಲ್' ದಲ್ಲಿ ಸಂಭಾಷಣೆ, ಅಭಿನಯ, ರಂಗಕ್ರಿಯೆ ಎಲ್ಲವೂ ಅಳವಡುತ್ತವೆ; 'ಮಂಚನ್' ದಲ್ಲಿ ನಾಟಕ ಆಡಿಸು ಮಾತ್ರ ಮುಖ್ಯವಾಗಿ, ಅರ್ಥ ಸೀಮಿತಗೊಳ್ಳುತ್ತದೆ.

ಆ) **ಕಾನೀನ್ : ಎಂ. ಎಸ್. ಶಶಿಕಲಾ ಗೌಡ**

೧) ಶಶಿಕಲಾ ಗೌಡ ಅವರು ತಮ್ಮ ಮಾತಿನಲ್ಲಿ 'ಕಾನೀನ' ಬಗ್ಗೆ ಬರೆಯುತ್ತ. ಅದು ಮಹಾ ಭಾರತದ ವಸ್ತು ಆಧರಿಸಿ ಕುವೆಂಪು ಬರೆದ 'ಸರ್ವ ಪ್ರಥಮ್ ನಾಟಕ್ ಹೈ' (೧೯೨೯) ಎಂದಿರುವುದನ್ನು ಹೇಗೆ ಒಪ್ಪುವುದು?

೨) ಕನ್ನಡದಿಂದ ಹಿಂದಿಗೆ ಅನುವಾದಿಸಿದ ನಂತರ, ಕನ್ನಡವನ್ನು ಬದಿಗಿಟ್ಟು ಹಿಂದಿಯನ್ನು ಮಾತ್ರ ಓದಿಕೊಂಡರೆ ಸಹ ನಮ್ಮ ಅನೇಕ ದೋಷಗಳನ್ನು ತಿದ್ದಿ ಕೊಳ್ಳಲು ಸಾಧ್ಯ. "ಕುವೆಂಪು ನೇ ಇಸ್ ನಾಟಕ್ ಮೇಂ ಜೋ ಪರಿವರ್ತನ್ ಕಿಯಾ ಹೈ ವಹ್ ಯಹ್ ಕಿ ಯಹಾಂ ಆನೇವಾಲೇ ಕರ್ಣ, ಭೀಷ್ಮ, ಏವಂ ಪರಶುರಾಮ್ - ಇನ್ ತೀನೋಂ ಪಾತ್ರೋಂ ಪರ್ ಜೋ ದೋಷ್ ಲಗೇ ಥೇ ಉನ್ಹೇಂ ದೂರ್ ಕಿಯೇ ಹೈಂ!" (ಹಿ. ಪು. ೨೫೪)

೩) ಆರಂಭದಲ್ಲಿಯೇ ಕುವೆಂಪು ಸುಂದರವಾದ ಕಾವ್ಯಮಯ 'ವಿಧಿವಾಣಿ' ನೀಡಿದ್ದಾರೆ. ಅದನ್ನು ಅನುವಾದಕಿ ಅತ್ಯಂತ ನೀರಸ, ಅನರ್ಥ, ಅಪಾರ್ಥ ಕಾರಕವೆನಿಸುವ ಹಿಂದಿಯಲ್ಲಿ ಬದಲಿಸಿದ್ದಾರ. ಅದರ ಮೊದಲ ನಾಲ್ಕು ಸಾಲು ಮಾತ್ರ ಇಲ್ಲಿ ಉಧಾಹರಿಸುತ್ತೇನೆ:

"ಕಾಲದೇವಿಯ ಗರ್ಭದಲಿ ಮಹಾಭಾರತವು
ಮೆಲು ಮೆಲನೆ ಬೆಳೆದು ಮೈಗೊಂಡು ಮೊಳೆದೋರುತಿದೆ.
ಆ ಕುರುಕ್ಷೇತ್ರದಲಿ ಬಲಿದಾನವಾಗಲಿಹ
ಯಜ್ಞಪಶುಗಳ ಬಲಿಗೆ ಸನ್ನಾಹ ನಡೆಯುತ್ತಿದೆ" (ಕ.ಪು.೪೨೭)

"ಕಾಲ್ ದೇವೀ ಕೇ ಗರ್ಭ ಮೇ ಧೀರೇ - ಧೀರೇ ಸೇ ಮಹಾಭಾರತ್ ಬಢ್‌ಕರ್ ಅಂಗಸೌಷ್ಠವ್ ಪಾಕರ್ ಅಂಕುರ್ ಮೇ ರಹಾ ಹೈ। ಉಸ್ ಕುರುಕ್ಷೇತ್ರ ಮೇಂ ಬಲಿದಾನ್ ಕರಾನೇ ವಾಲೇ ಯಜ್ಞಪಶುಓಂ ಕೀ ಬಲಿ ಕೇ ಲಿಏ ಸನ್ನಾಟಾ ಛಾ ಪರಾ ಹೈ।" (ಹಿ.ಪು. ೨೫೬).

ಕೆಟ್ಟ ಅನುವಾದಕ್ಕೆ ಉದಾಹರಣೆಯಾಗಿ ಇವರ ಅಕ್ಷರಶಃ ಅಸಂಖ್ಯ ದೋಷಗಳನ್ನು ಪಟ್ಟಿ ಮಾಡುವುದು ದುಸ್ತರ ಕಾರ್ಯ. ಮೂಲದ ಸಮಗ್ರ ಕಾವ್ಯ ನಾಟಕವನ್ನು ತಮಗೆ ತೋಚಿದಂತೆ, ಈಗಷ್ಟೇ ಪರಿಚಿಸಿದಂಥ ಹಿಂದಿಯ ಗದ್ಯದಲ್ಲಿ, ಅನುವಾದ ಮಾಡಿದ್ದಾರೆ. 'ಪಾದರಿಯ ಬನದಲ್ಲಿ' (ಕ.ಪು. ೪೨೮) 'ಜಂಗಲೀ ವನ್ ಮೇಂ' (ಹಿ. ಪು. ೨೫೭) ಆಗಿದೆ. 'ಗುಲಾಬಿ ವನ' 'ಕಾಡು ಬನ' ವಾಗಬಾರದು. 'ಬನವೆನಿತು ಕಣ್ಗೆಡ್ಡವಾಗಿಹುದು?' (ಕ.ಪು. ೪೨೮) 'ಜಂಗಲ್ ಕೇ ಭೀತರ್ ದೇಖಿಯೇಂ ತೋ ಕಿತ್‌ನಾ ಅಂಧಕಾರ್ ಲಗ್ ರಹಾ ಹೈ!' (ಹಿ. ಪು. ೨೫೭). ಎಡ್ಡ = ಸುಂದರ, ಆಕರ್ಷಕ, ಮೋಹಕ, 'ಕಣ್ಗೆಡ್ಡವಾಗಿದೆ' = ಕಣ್ಣಿಗೆ ಸುಂದರವಾಗಿ, ಮನೋಹರವಾಗಿ ಕಾಣುತ್ತಿದೆ ಎಂದರ್ಥ. ಬಹುಶಃ 'ಕಣ್ಣಿಗೆ ಅಡ್ಡ' ಎಂದು ಓದಿಕೊಂಡು ಅಥವಾ ಹಾಗೆ ಎಣಿಸಿ ಅಥವಾ ಭಾವಿಸಿ, 'ಅಂಧಕಾರ'ವಾಗಿದೆ.

ಹಿಂದಿಯಲ್ಲಿ ಬಳಕೆಯಾಗುವ ಪದ ಬಂಧ, ಅರ್ಥವ್ಯತ್ಯಯ, ಹ್ರಸ್ವ ದೀರ್ಘ, ಏಕ ವಚನ, ಪುಲ್ಲಿಂಗ, ಸ್ತ್ರೀಲಿಂಗಗಳ ಕನಿಷ್ಠತಮ ಜ್ಞಾನದ ಕಡೆಗಾದರೂ ಲಕ್ಷ್ಯ ವಹಿಸಿ, ಅನುವಾದ ಮಾಡದಿದ್ದರೆ ಮೂಲಕೃತಿಗೆ ಮತ್ತು ಕೃತಿಕಾರರಿಗೆ ಅನ್ಯಾಯವಾಗುತ್ತದೆ.

೪) ಇಲ್ಲಿ ಅನುವಾದಕ 'ದುಃಶಾಸನ' ಅಥವಾ 'ದುಶ್ಶಾಸನ' ಎಂದು ಇರಬೇಕಾದ ನಾಮಪದವನ್ನು 'ದುಃಶ್ಯಾಸನ' ಎಂದೇ ಬಳಸಿದ್ದಾರೆ (ಹಿ. ಪು. ೨೫೫, ೨೮೩-೨೮೬). ಕುವೆಂಪು ಎಂದೂ ತಪ್ಪು ಮಾಡಿರಲಾರರು ಮತ್ತು ೨೦೦೪ರಲ್ಲಿ ಪ್ರಕಟಿತ 'ಸಮಗ್ರ ನಾಟಕ' ದಲ್ಲಿಯೂ ಈ ದೋಷವಿಲ್ಲ. ಅಲ್ಲಿ ಪಾತ್ರ ಪರಿಚಯ ಪಟ್ಟಿಯಲ್ಲಿ ಮಾತ್ರ 'ದುಃಶ್ಯಾಸನ' ಎಂದು ತಪ್ಪಿದೆ. (೪೨೬). ಕ.ಪು. ಪ್ರಾಧಿಕಾರ ಪ್ರಕಟಿಸಿದ ಪಂಡಿತ ಯಜ್ಞನಾರಾಯಣ ಉಡುಪರ ಸಂಪಾದಕತ್ವದ 'ಪುರಾಣ-ಭಾರತ ಕೋಶ' (೧೯೯೪) ದಲ್ಲಿ ಸಹ 'ದುಃಶ್ಯಾಸನ', 'ದುಃಶ್ಶಳೆ' 'ದುಶ್ಶಲಾ' ಮುಂತಾದ (ಪು. ೨೮೫, ೨೮೭, ೨೮೮, ೨೯೦ ಮುಂ.) ವ್ಯಾಕರಣ ಸಮ್ಮತವಲ್ಲದ, ಅಸಾಧು ಪ್ರಯೋಗಗಳು ಬಂದುದನ್ನು ಯಾರು ತಿದ್ದಬೇಕು!

೯) **ಮೀರಾ ಗೋಪಾಲ್ : ಎಂ. ಎಸ್. ಶಶಿಕಲಾ ಗೌಡ**

೧) 'ನನ್ನ ಗೋಪಾಲ' ನಾಟಕದಲ್ಲಿ ಕುವೆಂಪು ಪ್ರತಿಯೊಂದು ಪಾತ್ರದಲ್ಲಿ ಶಿಶುಭಾವ ಬಿಂಬಿಸುವ ಮುದ್ದುಗದ್ಯ ಅಥವಾ ಹಸುಳೆಗದ್ಯ ಬಳಸಿದ್ದಾರೆ. ಅನುವಾದಕಿ ತಮ್ಮ ಮೊದಲ ಅನುವಾದದಂತೆ ಇಲ್ಲಿಯೂ ದುರ್ಲಕ್ಷ್ಯ, ದುರರ್ಥಗಳ ಹುದುಲಲ್ಲಿ ಸಿಲುಕಿದ್ದಾರೆ. 'ಇಸ್ ನಾಟಕ್ ಮೇಂ ಭಗವದ್ಗೀತಾ ಕಾ ಸಾರಾಂಶ್ ಕೋ" ಮುಂತಾದವು ಮತ್ತು 'ನೂಲುತ್ತಿದ್ದಾಳೆ' ಎಂಬುದಕ್ಕೆ 'ಸೂತ್ ಕಾತ್‌ನೇ ಕಾ ಕಾಮ್ ಕರ್ ರಹೀ ಹೈ' ದಂಥ ವಿಸ್ತಾರ ಮೋಹಗಳು ವರ್ಜ್ಯವಾಗದಿದ್ದರೆ ಅನಾಹುತಗಳು ಸಂಭವಿಸಬಹುದು.

೧೦) **ಬಾದಲ್ ಭೈಯಾ ಕಾ ಛೋಟಾ ಭಾಈ : ಜ್ಯೋತಿ ಶಂಕರ್**

೧) ನಾಟಕದ ಶೀರ್ಷಿಕೆಯನ್ನು ಅಕ್ಷರಶಃ ಅನುವಾದಿಸುವ ಹಠ ಹೇಗೆ ಕೈ ಕೊಡುತ್ತದೆ ಎಂಬುದಕ್ಕೆ ಈ ತಲೆಕಟ್ಟು ಉದಾಹರಣೆ. ಕನ್ನಡದಲ್ಲಿ ಅಣ್ಣ, ತಮ್ಮ, ಅಕ್ಕ, ತಂಗಿ ಎಂಬುವು ಸ್ಪಷ್ಟ ಸಂಬಂಧಗಳನ್ನು ಸೂಚಿಸುತ್ತವೆ. ಹಿಂದಿಯಲ್ಲಿ ಇವನ್ನು ಬಡಾ ಭಾಈ, ಛೋಟಾ ಭಾಈ, ಬಡೀ ಬೆಹನ್, ಛೋಟೀ ಬಹನ್ ಎಂದು ಗುರುತಿಸುತ್ತೇವೆ. 'ಇಷ್ಟು ಮಾತ್ರದ ಶಬ್ದಜ್ಞಾನ' ದಿಂದ ಹೊರಟರೆ ಈ ಅನುವಾದಕಿ ನೀಡಿದ ಶೀರ್ಷಿಕೆ ಸರಿ. ಆದರೆ ಅದು ಹಿಂದಿಯಾಗದು. ಇಂಥ ಸಮಸ್ಯೆಗಳನ್ನು ನೀಗಿಕೊಂಡು ಮುಂದುವರೆಯಬೇಕಾಗುತ್ತದೆ. 'ಬಾದಲ್ ಕಾ ಛೋಟಾ ಭಾಈ' ಎಂದಿದ್ದರೆ ಬಾದಲ್ 'ಅಣ್ಣ' ಎಂಬ ಅರ್ಥ ತಾನೇ ಹೊಮ್ಮುತ್ತದೆ. ಅಥವಾ ಅಣ್ಣ ಎಂದು ಹೇಳಲೇ ಬೇಕೆಂದಿದ್ದರೆ 'ಬಾದಲ್ ಭೈಯಾ ಕಾ ಭಾಈ' ಅಷ್ಟಕ್ಕೇ ನಿಲ್ಲಬೇಕು.

೨) ಅನುವಾದಕಿಯ ಮಾತಿನಲ್ಲಿ ಹಿಂದಿಯಲ್ಲಿ ಮೋಡಣ್ಣ, ಗುಡುಗು, ಸಿಡಿಲು. ಕೆಂಡ ಹೊಳೆ, ಜೆಮ್ಮಾರಲ ಹಣ್ಣು, ನಿನಗೆ ಸೂನ್ನೆ.........' ಐಸೇ ಶಬ್ದೋಂ ಮೇಂ ಕನ್ನಡ್ ಭಾಷಾ ಕೀ ಖುಶ್‌ಬೂ ಕೋ ದೇಖ್ ಸಕ್ತೇ ಹೈಂ!" ಎಂದು ಬರೆದಿದ್ದಾರೆ. ಹಿಂದೀ ಓದುಗರಿಗಾಗಿ ಹಿಂದಿಯಲ್ಲಿ ಬರೆದ ಈ ಮಾತು, ಈ ಪದಗಳು ಯಾರಿಗಾಗಿ? ಹಿಂದಿಯವರಿಗೆ ಇದರ ಖುಶ್‌ಬೂ', ಸುಗಂಧ, ಪರಿಮಳ ಎಲ್ಲಿಲ್ಲಿ ಸಿಗಬಹುದೆಂದು ಸಂಪೂರ್ಣ ಹಿಂದೀ ಅನುವಾದದಲ್ಲಿ 'ಈ ಪದಗಳಿಗಾಗಿ' ಹುಡುಕಾಡಿ ಸೋತೆ!

೩) ಇಲ್ಲಿ ಪದ್ಯಾತ್ಮಕ ಅನುವಾದದ ಪ್ರಯತ್ನವಿದೆ, ಅಷ್ಟೇ : ಆದರೆ ಯಶಸ್ಸು ಮಾತ್ರ ಲಭಿಸಿಲ್ಲ. ಇಡೀ ಕನ್ನಡ ವಾಕ್ಯಾವಳಿಗಳನ್ನು, ಶಬ್ದಗಳನ್ನು ಹಿಂದೀ ಲಿಪಿಗೆ ಯಥಾವತ್ ಬದಲಿಸಿದರೆ ಏನಾಗಬಹುದೊ ಅದಾಗಿದೆ.

"ವನದೆಡೆ ಹುಡುಗನೊಬ್ಬನು ಸುತ್ತಲೂ ನೋಡುತ್ತ ಬಂದು, ನೀಲ ಗಗನದ ಕಡೆ ನೋಡಿ ಮಂದಸ್ಮಿತನಾಗಿ ಸಂತೋಷವನ್ನು ತೋರ್ಪಡಿಸಿ, ಅಲ್ಲಿ

ಒಂಟಿಯಾಗಿ ತೇಲುತ್ತಿದ್ದ ಮೋಡವನ್ನು ಸಂಬೋಧಿಸುತ್ತಾನೆ" (ಕ. ಪು. ೬೮೫) ಈ ಬಗೆಯ ವಾಕ್ಯರಚನೆ ಕನ್ನಡದಲ್ಲಿ ಸಾಧ್ಯ ಮತ್ತು ಅದು ಕನ್ನಡದ ಸಾಮೂಹಿಕ ಶಕ್ತಿಯೂ ಹೌದು. ಆದರೆ ಹಿಂದೀ ಅಥವಾ ಇಂಗ್ಲಿಶ್‌ನಲ್ಲಿ ಈ ಬಗೆಯ ವಾಕ್ಯಗಳನ್ನು ಹಿಂಗಡಿಸಿಯೇ ಅರ್ಥ ಸೂಚಿಸಬೇಕಾಗುತ್ತದೆ ಎಂಬುದನ್ನು ಅರಿಯದ ಅನುವಾದಕರು ಸಂಪೂರ್ಣ ವಿಫಲರಾಗುತ್ತಾರೆ. ಇದನ್ನೂ ಜ್ಯೋತಿ ಶಂಕರ್ ಅವರು ಹೀಗೆ ಹೇಳಿದ್ದಾರೆ.

"ಏಕ್ ಬಾಲಕ್ ಏಕ್ ಕೇ ಚಾರೋ ಓರ್ ದೇಖ್ತೇ ಹುಏ ಆಕರ್, ನೀಲ್ ಗಗನ ಕೇ ಓರ್ ಮಂದಸ್ಮಿತ ಹೋಕರ್ ಅಪನೇ ಸಂತೋಷ್ ಕೋ ಪ್ರಕಟ್ ಕರ್ ತೇ ಹುಏ, ಏಪ್ ತೈರ್‌ತೇ ಬಾದಲ್ ಸೇ ಇಸ್ ತರಹ್ ಕಹ್‌ತಾ ಹೈ!"

೪) ಇವರು ಕೂಡ ತೂ ತುಮ್ ಗಳನ್ನು ಧಾರಾಳವಾಗಿ ದುರುಪಯೋಗ ಪಡಿಸಿಕೊಂಡಿದ್ದಾರೆ.

೧೧) ಚಂದ್ರಹಾಸ್ + (೧೨) ಬಲಿದಾನ್ : ಶ್ರೀಧರ್ ಹೆಗಡೆ

೧) ಇದುವರೆಗೆ ನಾನು ೧೦ ನಾಟಕಗಳಲ್ಲಿ ಬರುವ ಸಂಭಾವ್ಯ ದೋಷಗಳ ಬಗ್ಗೆ ಹೇಳಿದೆ. ಅಂಥ ಮತ್ತು ಇನ್ನೂ ಹೊಸ ಬಗೆಯ ಹಲವಾರು ವಿಚಿತ್ರ ಪ್ರಕಾರದ ಕೆಟ್ಟ ಅನುವಾದದ ಉದಾಹರಣೆಗಳನ್ನು ಶ್ರೀಧರ ಹೆಗಡೆಯವರಲ್ಲಿ ಕಾಣಬಹುದು.

ಚಂದ್ರಹಾಸ್ : "ಅಂತೂ 'ಚಂದ್ರಹಾಸ' ಆಗ ಪುಸ್ತಕ ರೂಪದಲ್ಲಿ ಅಚ್ಚು ಕಾಣಲಿಲ್ಲ (ಕ. ಪು. ೩೨೧) = "ಖೈರ್, 'ಚಂದ್ರಹಾಸ' ತಬ್ ಪುಸ್ತಕ್ ಕೇ ರೂಪ್ ಮೇಂ ಛಾಪ್ ನಹೀ ಪಾಯಾ" ಹಿ.ಪು.೩೪೧. + "ಮೂವತ್ತೆರಡು ವರ್ಷಗಳ ತರುವಾಯ ನಾನು ೧೯೬೦ ರಲ್ಲಿ ನಿವೃತ್ತನಾದ ಮೇಲೆ, ಉನ್ನತ ಸ್ಥಾನದಲ್ಲಿರುವ ಬೆಂಗಳೂರಿನ ಹಿರಿಯ ಮಿತ್ರರೊಬ್ಬರು ಈ ನಾಟಕದ ಒಂದು ಪ್ರತಿಯನ್ನು ಪತ್ತೆ ಹಚ್ಚಿ ಕಳುಹಿಸಿಕೊಟ್ಟರು." (ಕ.ಪು.೩೪೧) "೩೨ ಸಾಲ್ ಕೇ ಬಾದ್ ಮೈ ಸನ್ ೧೯೬೦ ಮೇ ಸೇವಾ ನಿವೃತ್ತಿ ಹೋ ಜಾನೇ ಕೇ ಬಾದ್ ಮೇರೆ ಬುಜುರ್ಗ್ ಮಿತ್ರ ನೇ ಬೆಂಗಳೂರ್ ಮೇಂ ಜೋ ಉಚ್ಚ ಸ್ಥಾನ್ ಪರ್ ಥೇ, ಇಸ್ ನಾಟಕ್ ಕೀ ಏಕ್ ಪ್ರತಿ ಕಾ ಪತಾ ಲಗಾಕರ್ ಭಿಜವಾ ದಿಯಾ" (ಹಿ.ಪು. ೩೪೧) +"ಈ 'ಚಂದ್ರಹಾಸ್' ಆ 'ಚಂದ್ರಹಾಸ್'ದ ಸಾರಸಂಸ್ಕಾರಗಳನ್ನೊಳಗೊಂಡು ಮೂಡಿರುವ ಪುನರ್ಜನ್ಮೋಪಮ ಕೃತಿಯಾಗಿದೆ" (ಕ. ಪು. ೩೨೨). "ಇಸ್ ಚಂದ್ರಹಾಸ್ ಉಸ್ ಚಂದ್ರಹಾಸ ಕಾ ಸಾರ್ ಸಂಸ್ಕಾರ ಪಾಕರ್ ನಯಾ ಆಕಾರ್ ಪಾಕರ್ ಪುನರ್ಜನ್ಮ ಪ್ರಾಪ್ತ ಕೀ ಹುಈ ನಯೀ ಕೃತಿ ಹೈ" (೩೪೨) +

೧ನೆಯ ಬಾಲಕ : ನಾನೊಂದು ಮಾವಿನಹಣ್ಣು ಬರೆದೆ; ನೋಡಿ ಬನ್ನಿ. / **೨ನೆಯ ಬಾಲಕ :** ನಾನೊಂದು ಹಕ್ಕಿ ಬರೆದೆ; ಹಾರಿ ಹೋಗುತ್ತಿದೆ. / ನೋಡಿ, ನೋಡಿ! / **೩ನೆಯ ಬಾಲಕ :** ನಾನೊಂದು ಗುಡಿ ಕಟ್ಟಿದ್ದೇನೆ. ಪೂಜೆಗೆ ಬನ್ನಿ! / **೧ನೆಯ ಬಾಲಕ :** ಮೊದಲು ನನ್ನ ಹಣ್ಣು ನೋಡು ಬಾ. **೨ನೆಯ ಬಾಲಕ :** ನನ್ನ ಹಕ್ಕಿ? (ಕ. ಪು. ೩೨೫)

" **ಪೆಹಲಾ ಬಾಲಕ್ :** ಮೈಂನೇ ಏಕ್ ಆಮ್ ಕೇ ಫಲ್ ಕೀ ರಚನಾ ಕೀ ಹೈ; / ದೇಖಿಏ / ಆಇಏ / **ದೂಸ್‌ರಾ ಬಾಲಕ್ :** ಮೈಂನೇ ಏಕ್ ಪಂಛೀ ಕೀ ರಚ್‌ನಾ ಕೀ ಹೈ / ಉಡ್‌ಕರ್ ಜಾ ರಹೀ ಹೈ! / ದೇಖೋ, ದೇಖೋ! ದೌಡ್ ಕರ್ ಆಇಏ / **ತೀಸ್‌ರಾ ಬಾಲಕ್ :** ಮೈಂನೇ ಏಕ್ ಮಂದಿರ್ ಕೀ ರಚನಾ ಕೀ ಹೈ! / ಪೂಜಾ ಕೇ ಲಿಏ ಆಈಏ! / **ಪಹ್‌ಲಾ ಬಾಲಕ್ :** ಪಹ್‌ಲೇ ಮೇರಾ ಫಲ್ ದೇಖೋ; ಆ / **ದೂಸ್‌ರಾ ಬಾಲಕ್ :** ಮೇರೀ ಪಂಛೀ?" ಹಿ. ಪು. ೩೪೭)

"ಇರಲಮ್ಮಾ ಆ ದುರುಳರಂ ಪಿಡಿದು / ಕಳುಹಿಸಲು ಸಿದ್ಧವಾಗಿದೆ ನಮ್ಮ ಸೇನೆ" (ಕ. ಪು. ೩೭೬)

"ರಹ್‌ನೇ ದೋ ಉನ್ ದುಷ್ಟೋಂ ಕೋ ಬಂದೀ ಬನಾಕರ್ **ಜೇಲ್ ಭೇಜ್‌ನೇ ಕೇ ಲಿಏ** ಹಮಾರಿ ಸೇನಾ ತೈಯಾರ್ ಹೈ!" (ಹಿ. ಪು. ೪೧೫)

ಚಂದ್ರಹಾಸನನ್ನು ಇಷ್ಟಪಡುತ್ತಿರುವ ವಿಷಯ ತನ್ನ ತಂದೆ ರಾಜಮಂತ್ರಿ ದುಷ್ಟಬುದ್ಧಿಗೆ ಪರೋಕ್ಷವಾಗಿ ತನ್ನ ಮನೋಗತವನ್ನು ಸೂಚಿಸುತ್ತಿದ್ದಾಳೆ. ಆಗ ಕುವೆಂಪು ಲೆಕ್ಕಣಿಕೆ ಬಳಸಿದ 'ಸೆರೆಮನೆಗೆ' ಪದಕ್ಕೆ ಹಿಂದಿಯಲ್ಲಿ '**ಜೇಲ್ ಭೇಜ್ ನೇ ಕೇ ಲಿಏ**' ಎಂದು ಬರೆದದ್ದು. ಅನುವಾದಕರಿಗೆ ಹಿಂದಿಯಲ್ಲಿ ಬೇರೆ ಭಾರತೀಯ ಪದಗಳು ಸಿಗದೇ ಹೋದುದನ್ನು ಕುಂತಲ ದೊರೆಯ ಮಹಾಮಂತ್ರಿಯಾಗಿದ್ದ ಆ ಕಾಲದ ದುಷ್ಟ ಬುದ್ಧಿಯೇ ವಿವರಿಸಬೇಕು. ಇದು ನಮ್ಮ ಅಭಿವ್ಯಕ್ತಿ ಶಕ್ತಿಯ ಸಾಂಸ್ಕೃತಿಕ ದಿವಾಳಿತನವೋ ಅಥವಾ ದಬ್ಬಾಳಿಕೆಯೋ ಅರ್ಥವಾಗುತ್ತಿಲ್ಲ.

೧೨) **ಬಲಿದಾನ್ : .....**

ಅನುವಾದಕರು ಬರೆದ ಕೆಟ್ಟ 'ಕಥಾ ಸಾರ್' (ಹಿ. ಪು. ೪೭೮) ದ ಕೆಳಗೆ ಅನುವಾದಕರ ಹೆಸರು ಹಾಕ ಬೇಕಾಗಿತ್ತು. ಓದುಗರು ಅದು ಕುವೆಂಪು ಬರೆದದ್ದು ಎಂದು ತಿಳಿಯದಿರಲಿ . ಇಲ್ಲಿಯೂ ಅಸಂಖ್ಯ ಅಪದ್ಧ, ಅನರ್ಥಕಾರಿ ಅನುವಾದ ಹೇರಳವಾಗಿವೆ. ಅನುವಾದ ಮಾಡಿದವರು ಕನಿಷ್ಠ ಪಕ್ಷ ಒಮ್ಮೆ ಯಾವರೂ ಓದಿ ಕೊಂಡಿದ್ದರೆ ಅಥವಾ ಓದಿಸಿಕೊಂಡಿದ್ದರೆ ಶೇಕಡಾ ೧೦ ರಷ್ಟು ತಿದ್ದುಪಡಿ ಯಾವರೂ ಮಾಡಿಕೊಳ್ಳಬಹುದಿತ್ತು.

ಒಟ್ಟಿನಲ್ಲಿ ೧೨ ನಾಟಕಗಳನ್ನು ಅನುವಾದಿಸುವಾಗ ಮೂಲದಲ್ಲಿ ಕುವೆಂಪು ಕೊಟ್ಟ ಶೀರ್ಷಿಕೆಗಳನ್ನೇ ಬಹುಪಾಲು ಅನುವಾದಕರು ಬಳಸಿಕೊಂಡಿದ್ದಾರೆ. ಮೂವರು ಮಾತ್ರ ಬದಲಿಸಬೇಕಾಗಿ ಬಂದಿದೆ. ತಿಪ್ಪೇಸ್ವಾಮಿ ಒಳ್ಳೆಯ ಹೊಸ ಪದ ಬಳಸಿ ಗೆಲುವಾಗಿದ್ದಾರೆ. ಉಳಿದಿಬ್ಬರು ಗೊಂದಲಕ್ಕೆ ಸಿಲುಕಿದ್ದಾರೆ. ಕಥಾವಸ್ತುವನ್ನು ಲಕ್ಷ್ಯದಲ್ಲಿಟ್ಟುಕೊಂಡು ಸಾರ್ಥಕ ಶೀರ್ಷಿಕೆ ಕೊಡುವ ಮೂಲಕ ಮೂಲ ನಾಟಕದ ಗೌರವ ಹೆಚ್ಚಿಸುವಂತೆ 'ನಡೆಯುವುದು' ಅನುವಾದದ ಧರ್ಮ.

೪

ಈಗ ಈ ಅನುವಾದಗಳ ಬಗ್ಗೆ ಸಮಾರೋಪ ಎನ್ನಿಸುವಂಥ ಕೆಲವು ಮಾತುಗಳು : ಇವು ಕನ್ನಡದಲ್ಲಿ ರಂಗಭೂಮಿಗಾಗಿ ನಾಟಕಕಾರನೊಬ್ಬ ಬರೆದ ಅಭಿನಯಪ್ರಧಾನ ನಾಟಕಗಳಲ್ಲ. ಕವಿಯೊಬ್ಬನ ಅಂತರ್‌ದ್ವಂದ್ವದ, ಅಂತರ್‌ಮನದ ನಾಟಕೀಯ ವಿಶ್ಲೇಷಣೆಯ ರಂಗ ಪ್ರಯತ್ನಗಳು. ದಾರ್ಶನಿಕ ಕವಿಯ ಹೃದಯದಿಂದ ಮೂಡಿದ ತಾತ್ವಿಕ, ನೈತಿಕ ವಿಚಾರಗಳ ಭಾವ ಪ್ರಧಾನವಾದ, ಚರಿತ್ರೆ ಮತ್ತು ಚಾರಿತ್ರ್ಯ ಪ್ರಧಾನವಾದ ರಂಗಾತ್ಮಕ ಅಭಿವ್ಯಕ್ತಿಗಳು. ಕವಿ ತನ್ನ ನಿತ್ಯದ ಕಾವ್ಯ ಪಥವನ್ನು ಬದಿಗಿರಿಸಿ, ಕಾವ್ಯ ಪ್ರಸಾದದಿಂದ ಹೊರಬಂದು, ಸಾರ್ವಜನಿಕರ, ಸಾಮಾನ್ಯರ ರಂಗಮಾರ್ಗಗಳಲ್ಲಿ ಸುಳಿದಾಡಿ, ವಿಶ್ವವನ್ನು ಸಂಚರಿಸ ಬಯಸುವ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಕಾವ್ಯರಂಗದ ಕಲಾತ್ಮಕ ನಾಟಕಗಳು. ಇವನ್ನು ರಂಗಕ್ಕೆ ಅಳವಡಿಸಿಕೊಳ್ಳುವುದು ರಂಗತಜ್ಞರ, ರಂಗಾಸಕ್ತರ, ನಿರ್ದೇಶಕರ ಕೆಲಸ, ಹೊಣೆ. ಇದು ಒಬ್ಬ ಕವಿಯು ಗಾಯಕನಾಗಿರದಿದ್ದರೂ, ಅವನು ರಚಿಸಿದ ಗೀತಗಳನ್ನು ಗಾಯಕನೊಬ್ಬನು ಹಾಡಿದ ಹಾಗೆ; ಕತೆ ಅಥವಾ ಕಾದಂಬರಿಯನ್ನು ಅಥವಾ ಹಳೆಯ ಅನ್ಯಭಾಷಾ ನಾಟಕಗಳನ್ನು ನಾವು ನಮ್ಮ ಉದ್ದೇಶಕ್ಕೆ ತಕ್ಕಂತೆ, ನಮ್ಮ ಕಾಲಕ್ಕೆ ತಕ್ಕಂತೆ ಹೊಸ ನಾಟಕ ರೂಪಕ್ಕೆ ಅಳವಡಿಸಿಕೊಂಡಂತೆ. ಅಂಥ ಹೊತ್ತಿನಲ್ಲಿ ಕವಿಯ/ ಲೇಖಕನ ಆಶಯ ಮತ್ತು ಅಪೇಕ್ಷೆಗಳನ್ನು ಗೌರವಿಸಬೇಕು. ಕಾಲ ಘಟ್ಟ ಬದಲಾದಾಗಲೂ ಮಾರ್ಪಾಡು, ಮುಂದುವರಿದ ತಿದ್ದುಪಡಿ, ಸೇರ್ಪಡೆ ಮಾಡಿಕೊಳ್ಳಬಹುದು. ಆದರೆ ಅವು ಮೂಲ ಕರ್ತೃವಿನ ಅಭೀಪ್ಸೆ, ಅಭಿಪ್ರೇತಗಳಿಗೆ ವ್ಯತ್ಯಯ ಬರದ ಹಾಗೆ ವಿರೋಧಿಯೆನಿಸುವ ಹಾಗೆ ಬದಲಾಗ ಬೇಕು. (ಉದಾ : ಶ್ರೀರಂಗರ ಕಂಸಿನಲ್ಲಿಯ ಸೂಚನೆಗಳನ್ನು ನಿರ್ದೇಶಕರು ಈಗ ನಿರ್ಲಕ್ಷಿಸುತ್ತಿದ್ದಾರೆ. ಇಂಥ ಕೃತಿಗಳ ಅನುವಾದಗಳನ್ನು ನಾಟಕ - ಕವಿಗಳು ಅಥವಾ ಕವಿ ಭಾವಿಗಳು ಮಾಡಬೇಕು. ನಾಟಕಕಾರರು ಮಾಡಬೇಕು. ಯಾರೇ ಮಾಡಲಿ, ಕಾವ್ಯಾತ್ಮಕ ಅನುವಾದ ಮಾಡಬೇಕು. ಕಾವ್ಯಾನುವಾದ ಮಾಡಬೇಕು. ಒಟ್ಟು ಅದನ್ನು ನಾಟಕವನ್ನಾಗಿ ಮಾಡಬೇಕು. ಶೇಕ್ಸ್‌ಪಿಯರ್ ಮುಖ್ಯವಾಗುವುದೇ. ಅಂಥ ಅನುವಾದಗಳಿಂದಾಗಿ ಅನುವಾದಕರು ತಮ್ಮ ಅನುವಾದಗಳನ್ನು ರಂಗಕ್ಕೆ ತಂದು, ಪರೀಕ್ಷಿಸಿ, ಆಗ ಆಗುವ ತೊಂದರೆಗಳನ್ನು ನೋಡಿ, ತಿದ್ದಿಕೊಳ್ಳುವಂತಾಗಿದ್ದರೆ ಇನ್ನೂ ಉತ್ತಮವಾಗಿರುತ್ತಿತ್ತು. ಹಿಂದೀ ಕವಿ - ನಾಟಕಕಾರ ಜಯಶಂಕರ್ ಪ್ರಸಾದ್ ವಿಷಯದಲ್ಲಿ ಹೀಗೇ ಆಗಿತ್ತು. ಅವರ ಕೃತಿಗಳನ್ನು ಬಿ. ವಿ. ಕಾರಂತರು 'ರಂಗ ನಾಟಕ'ಗೊಳಿಸಿದರು. ರಂಗಕ್ಕೆ ತಂದರು. ಅದಕ್ಕೆ ಕಾರಣ ಮೂಲ ಹೂರಣದಲ್ಲಿ ನಾಟಕ ಮತ್ತು ಕಾವ್ಯ ಸಮೃದ್ಧವಾಗಿತ್ತು.

ಕೊನೆಯಲ್ಲಿ ಕೆಲವು ಸೂಚನೆಗಳನ್ನು ಹೀಗೆ ಹಂಚಿಕೊಳ್ಳಬಹುದು. ಈ ಅನುವಾದಕರು ಜೊತೆ ಜೊತೆಗೆ ಕುಳಿತು ಪರಸ್ಪರ ಅನುವಾದ ಓದಬೇಕಿತ್ತು. ಈ ಅನುವಾದ ಮಾಡಿರುವ , ಅಂದರೆ, ಹಿಂದೀ ಚೆನ್ನಾಗಿ ತಿಳಿದಿರುವ ಇತರ ೨-೩ ಜನರೆದುರು ಓದಿಸಿ, ಚರ್ಚಿಸಿ ತಿದ್ದಿಸಿ ಸರಿಪಡಿಸಬೇಕಿತ್ತು. ಹಿಂದೀ ಮಾತೃಭಾಷಿಕರಿಗೆ ಹಾಗೂ ರಂಗಭಾಷೆ ಬಲ್ಲವರಿಗೆ ತೋರಿಸಿ ಪರಿಷ್ಕರಿಸಬೇಕಿತ್ತು. ಅನುವಾದ ಮಾಡುವಾಗ, ಇವು ಹಿಂದೀ ಭಾಷಿಕರಿಗೆ ಓದುಗರಿಗೆ ಹೇಗೆ ತಲುಪುತ್ತವೆ ಅನ್ನುವುದನ್ನು ಲಕ್ಷಿಸಬೇಕು. ಬಹು ಮುಖ್ಯವಾಗಿ, ಇವು ನಾಟಕಗಳಾಗಿದ್ದರಿಂದ ರಂಗದ ಮೇಲೆ ಹೇಗೆ ಬರಬೇಕು, ಹಿಂದೀ ಪ್ರೇಕ್ಷಕರಿಗೆ ಹೇಗೆ ತಲುಪಬೇಕು ಅನ್ನುವುದು ಮುಖ್ಯವಾಗಬೇಕು. ಎಷ್ಟಾದರೂ ಹಿಂದೀ ಭಾಷೆ ನಾವು ಇಲ್ಲಿಯೆ, ನಮ್ಮವರಿಂದಲೇ ಕಲಿತ ಭಾಷೆ, ಕಲಿಯುತ್ತಿರುವ ಭಾಷೆ; ಹೀಗಾಗಿ ಕೇಳಿ, ತಿಳಿದು, ತಿದ್ದಿಕೊಳ್ಳುವುದರಲ್ಲಿ ಏನೂ ತಪ್ಪಿಲ್ಲ. ಕೊನೆಗೂ ಉಳಿಯಬೇಕಾದದ್ದು ಕುವೆಂಪು ರಚಿತ ಸುಂದರ, ಶುದ್ಧ, ಸ್ವಚ್ಛ ಕನ್ನಡ ನಾಟಕಗಳು ಮತ್ತು ತನ್ಮೂಲಕ ಕನ್ನಡದ ಗೌರವ, ಹಿರಿಮೆ.

ಬಿ. ಆರ್. ನಾರಾಯಣರು ಅನುವಾದಿಸಿದ, ಆಗ ಪ್ರಕಟವಾಗಿದ್ದ ಅವರ ದಿನಾಂಕ ಇತ್ಯಾದಿ ನಮೂದಿಸಬೇಕಿತ್ತು. ಆ ಕಾಲದಲ್ಲಿಯೇ ಅವರು ಮಾಡಿದ್ದ ಅಪರಾಧಿಕ ತಪ್ಪುಗಳನ್ನು ಆಗಲೇ ಕಂಡುಕೊಂಡಿರದಿದ್ದರೆ, ಕನಿಷ್ಟ ಪಕ್ಷ ಈಗ ಅವು ಗಮನಕ್ಕೆ ಬಂದಾಗಲಾದರೂ ,ಕುವೆಂಪು ಅಧ್ಯಯನ ಸಂಸ್ಥೆಯೇ ಪ್ರಕಟಿಸುತ್ತಿರುವ ಕೃತಿಯಲ್ಲಾದರೂ ಅದನ್ನ ಸರಿಪಡಿಸಿಕೊಳ್ಳದಿದ್ದರೆ, ಕುವೆಂಪು ಬರೆದುದನ್ನು ನಮ್ಮ ಕಣ್ಣೆದುರೇ ಕೊಳ್ಳೆ ಹೊಡೆಯುತ್ತಿರುವಾಗ ಸುಮ್ಮನಿದ್ದರೆ, ಮಹಾಕೃತಿಚೌರ್ಯವನ್ನು ಒಂದು ಅಧಿಕೃತ ಸಂಸ್ಥೆಯೇ ಸಮರ್ಥಿಸಿ ಪುರಸ್ಕರಿಸಿದಂತಾಗುತ್ತದೆ.

ಆಯಾ ನಾಟಕದ ಆರಂಭದಲ್ಲಿ ಅಥವಾ ಕೊನೆಯಲ್ಲಿ ಮೂಲ ಕನ್ನಡ ನಾಟಕ ಪ್ರಕಟವಾದ ವರ್ಷ, ಮತ್ತು ಕುವೆಂಪು ನೀಡಿದ್ದ ಮೂಲ ಕನ್ನಡ ಶೀರ್ಷಿಕೆ ಕೊಡಬೇಕಿತ್ತು. ಚಾರಿತ್ರಿಕ ಹಿನ್ನೆಲೆಯಲ್ಲಿ ಮೌಲ್ಯಮಾಪನಕ್ಕೆ, ವಿಮರ್ಶೆಗೆ ಇದು ಅನುಕೂಲವಾಗುತ್ತದೆ. ಇಂಥ ಮಹತ್ವದ ಪುಸ್ತಕ ಪ್ರಕಟಿಸುತ್ತಿರುವಾಗ ಕರಡಚ್ಚು ತಿದ್ದುಪಡಿ ಬಹಳ ಮುಖ್ಯ. ಸದ್ಯ ಇಲ್ಲಿ ಉಳಿದಿರುವ ಕಲ್ಪನಾತೀತ , ಅಸಂಖ್ಯ ಮುದ್ರಣ ದೋಷಗಳನ್ನು ಕುವೆಂಪು ಅವರ ಆತ್ಮ ಎಂದೂ ಕ್ಷಮಿಸದು. ಬಹುಶಃ ಪ್ರಧಾನ ಸಂಪಾದಕರು ಮತ್ತು ಸಂಪಾದಕರು ಕನ್ನಡದಲ್ಲಿ ಬರೆದ ಮೊದಲ ಮಾತುಗಳನ್ನು ಹಾಗೂ ಶೀರ್ಷಿಕೆಯ ಪುಟಗಳನ್ನು ಹಿಂದಿ ಯಲ್ಲಿ ಅನುವಾದಿಸಲಾಗಿದೆ. ಆ ಕುರಿತು ಸಹ ಅಧ್ಯಯನ ಸಂಸ್ಥೆ ಕಾಳಜಿ ವಹಿಸಬೇಕಿತ್ತು.

ಈ ಅನುವಾದಗಳು ಹಿಂದೀ ಬಲ್ಲವರಿಗೆ ಮತ್ತು ನಾಟಕ ಬಯಸುವವರಿಗೆ ಸಂತೋಷ ನೀಡಬೇಕು. ಇನ್ನೂ ಮುಖ್ಯವಾಗಿ ಹಿಂದೀ ಹಾಗೂ ಕನ್ನಡ ಎರಡೂ ತಿಳಿದವರಿಗೆ ಅಸಂತೋಷ ಉಂಟಾಗಬಾರದು.

●

ಯೂಲಿಸಸ್‌ನ ಕೊನೆಯ ಕತೆ*

• ಜಿ. ಎಸ್. ಆಮೂರ

ನನ್ನ ಬಳಿ ಆಗ ಒಂದೇ ಒಂದು ಹಡಗು ಉಳಿದಿತ್ತು
ನನ್ನನ್ನೇ ನಂಬಿದ ಕೆಲ ಸಹಚರರನ್ನು ಬಿಟ್ಟು ಯಾರೂ
ನನ್ನ ಜೊತೆಗಿರಲಿಲ್ಲ. ನಮಗೆ ವಯಸ್ಸಾಗಿತ್ತು ದಣಿದಿದ್ದೆವು

ಆದರೂ, ಈ ಜಗತ್ತನ್ನು ಅದರ ರೀತಿನೀತಿಗಳನ್ನು
ಮನುಷ್ಯನ ಒಳಿತು ಕೆಡುಕುಗಳನ್ನು ತಿಳಿಯುವ ಆಸೆ
ಹಿಂಗಿರಲಿಲ್ಲ, ಮಗನ ಮೇಲಿನ ಮೋಹ, ತಂದೆಯ ಬಗೆಗಿನ

ಪೂಜ್ಯ ಭಾವ, ಪತ್ನಿ ಪೆನೊಲೆಪಿಯ ಅಪಾರ ನಿಷ್ಠೆ
ಪ್ರೇಮ, ಯಾವುದೂ ನನ್ನನ್ನು ತಡೆಯಲಿಲ್ಲ. ಅಜ್ಞಾತ
ಜಗತ್ತು ಕರೆಯುತ್ತಿತ್ತು ನನ್ನನ್ನು ನಿರಂತರವಾಗಿ.

ಎದುರೇ ಇದ್ದವು ಹರ್ಕ್ಯುಲಿಸ್ ನಿಲ್ಲಿಸಿದ ಶಿಲಾಸ್ತಂಭ
ಹೋಗಕೂಡದು ಇದರಾಚೆ ಯಾವ ಮನುಷ್ಯನೂ
ಇದು ಅವನ ಎಚ್ಚರಿಕೆ, ಕಟ್ಟಾಜ್ಞೆ. ಆದರೂ ನನಗೆ

ಸುಮ್ಮನಿರಲಾಗಲಿಲ್ಲ. ಸೋಲು - ಗೆಲುವುಗಳ ಪರಿವೆ
ನನಗಿರಲಿಲ್ಲ ಸಾವಿರ ಸಂಕಟಗಳನ್ನು ದಾಟಿದ ನನಗೆ
ಸಾವಿನ ಭಯವಿರಲಿಲ್ಲ. ಅನುಭವದ ಹಸಿವು

ಅರಿವಿನ ಹಂಬಲ ಇವೇ ನನ್ನ ಉಸಿರಾಗಿದ್ದವು
ತೆರದಿಟ್ಟು ನನ್ನಂತರಂಗವನ್ನು ಜೊತೆಗಾರರೆದುರು
ಕೇಳಿದೆ, "ಬರುವಿರಾ ನೀವು ನನ್ನೊಡನೆ"

ಎಲ್ಲಿಂದ ಬಂದವರು ನೀವು ಎನ್ನುವುದನ್ನೂ ನೆನಪಿಸಿಕೊಳ್ಳಿ
ಪಶುಗಳಂತ ಬದುಕಿದವರಲ್ಲ ನೀವು ಅರಿವಿನ
ಅನ್ವೇಷಕರು, ಧೀರರು, ಸಾಹಸಿಗಳು, ಮನುಷ್ಯರು

ಅವರಲ್ಲೊಬ್ಬನೂ ಹಿಂಜರಿಯಲಿಲ್ಲ 'ಹೊರಟುಬಿಟ್ಟೆವು ನಾವು
ಕಾಣದ ಕಡಲಿನಲ್ಲಿ, ನೋಡದ ಜಗತ್ತಿನತ್ತ'. ಸಾಧಿಸಲು
ಪ್ರಾಣವನ್ನೇ ಪಣವಿಟ್ಟು ಮಾನವನ ಮಹದಾಸೆಯನ್ನು

* ಆಧಾರ : ಡಾಂಟೆಯ ಡಿವೈನ್ ಕಾಮಿಡಿ

ನೋಟ

ಬಸವ ಸಿನಿಮಾ ಬುದ್ಧ ಪ್ರತಿಮಾ

● ಕುಪ್ನಳ್ಳಿ ಎಂ. ಬೈರಪ್ಪ

ಇತಿಹಾಸವನ್ನು ಅರಿಯದವರು ಇತಿಹಾಸವನ್ನು ಎಂದೂ ಸೃಷ್ಟಿಸಲಾರರು.

- ಡಾ॥ ಅಂಬೇಡ್ಕರ್

ನಮ್ಮ ಭಾರತ ದೇಶದ ಕನ್ನಡ ನೆಲದಲ್ಲಿ ೧೨ನೇ ಶತಮಾನದಲ್ಲಿ ಅಮಾನವೀಯ ಅಸಮಾನತೆಯ ವಿರುದ್ಧ ಬಹು ದೊಡ್ಡ ಹೋರಾಟ ನಡೆಯಿತು. ಅದು ಕರ್ನಾಟಕ ಮಾತ್ರವಲ್ಲದೆ ಭಾರತದ ಸಾಂಸ್ಕೃತಿಕ ಸಂದರ್ಭದಲ್ಲಿ ಅತ್ಯಂತ ಮಹತ್ವದ ಬಂಡಾಯಗಾಥೆ. ಇದರ ರೂವಾರಿಗಳು ಬಹುಜನ ಸಮುದಾಯಗಳು. ದುಡಿವ ನೂರಾರು ಬಹುಜನ ಸಮುದಾಯಗಳ ಜನರು ಮನುಷ್ಯತ್ವಕ್ಕೆ ಶರಣರಾದರು. ಸಾಮಾಜಿಕ , ಆರ್ಥಿಕ, ಧಾರ್ಮಿಕ ಸಾಹಿತ್ಯಕ ಮತ್ತು ರಾಜಕ ನೆಲೆಗಳಲ್ಲಿದ್ದ ಜೀವ ವಿರೋಧಿ ನಡೆಗಳನ್ನು ಧಿಕ್ಕರಿಸಿ ಸಾಂಘಿಕ ಹೋರಾಟ ನಡೆಸಿದರು. ಇವರನ್ನೆಲ್ಲಾ ಆಪ್ತವಾಗಿ ಕಾಣುತ್ತ ಸಮತೆ, ಮಮತೆಗಳ ನೆಲೆಯಲ್ಲಿ ಸಂಘಟಿಸಿ ಬಹುಜನರ ಬಂಡಾಯವನ್ನು ಬೆಂಬಲಿಸಿ ಮುಂದೆ ನಿಂದವರು ಬಸವಣ್ಣ. ಕೇವಲ ಅರಮನೆಯ ಕರಣಿಕನಾಗಿರದೆ ಬಹುಜನರ ಬೆವರಿನ ಮಹಾಮನೆಯ ನಿರ್ಮಾಣದ ಕಾರಣಿಕನೂ ಆದ ಮಹಾ ಮಾನವತಾವಾದಿ ಬಸವಣ್ಣ.

ಬಸವಣ್ಣನವರಿಗೆ ಬಹುಜನರ ಆಪ್ತತೆ, ಸಾಂಘಿಕತೆ ಮತ್ತು ಮಾನವತೆಗಳು ಸಾಧ್ಯವಾಗಿದ್ದು ತನ್ನ ಸ್ವ-ಜಲಗಾರತ್ವದಿಂದ. ಬಹಿರಂಗದ ಹೊಲಸನ್ನು ಗುಡಿಸಿ ಶುದ್ಧ ಮಾಡುವಂತೆ ಅಂತರಂಗದ ಹೊಲಸುಗಳನ್ನು ತನಗೆ ತಾನೇ ಶುದ್ಧವಾಗಿಟ್ಟುಕೊಳ್ಳುವುದೇ ಸ್ವ-ಜಲಗಾರತ್ವ. ಸಮಾಜವು ಗುರ್ತಿಸಬಹುದಾದ ಮೂಲಭೂತ ಚಹರೆಗಳನ್ನು ಬಸವಣ್ಣನವರು ಮೊದಲಿಗೆ ನಿರಸನಗೊಳಿಸಿಕೊಂಡರು. ಮೇಲು ಎಂಬ ವಿಷದ ಮುಳ್ಳನ್ನು ತನ್ನೆದೆಯಿಂದ ಕಿತ್ತೆಸೆದು 'ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ' ಎಂದು ಬಹುಜನರ ಕೇರಿಗೆ, ಗುಡಿಸಲಿಗೆ ಬಂದರು. ಇವನಾರವ ಇವನಾರವ ಎಂದೆನಿಸದೆ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ ಎಂದು ಬಹುಜನರ ಹೃದಯ ಹೊಕ್ಕರು. ತಮ್ಮ ಅಂತರಂಗದ ಹಮ್ಮು-ಬಿಮ್ಮುಗಳ ಕೊಳೆಯನ್ನು ತೊಳೆಯುತ್ತಾ ಬಂದರು. ಯಾರೂ ಮುಟ್ಟದ ಮನುಷ್ಯರನ್ನು ಅಪ್ಪ, ಬೊಪ್ಪ, ತಾಯಿ, ತಂಗಿ, ಅಕ್ಕ, ಅಣ್ಣ ಎಂದು ತನ್ನ ಮನದೊಳಗಿಟ್ಟುಕೊಂಡು ಆರಾಧಿಸಿದರು. ಬಹುಜನರ ಪ್ರೀತಿಯಿಂದ ಉಣಿಸಿದ ತುತ್ತುಂಡು ಮಾನವತೆಯ ಮುತ್ತಾಗಿ ಬೆಳೆದರು. ಕೊನೆಗೆ ಎನಗಿಂತ ಕಿರಿಯರಿಲ್ಲ ಎಂದು ಬಹುಜನರ 'ಬಸವಣ್ಣ'ನೇ ಆದರು. ಓಜೆ ಬಜಾವಣೆ, ಅಮೃತಗಣ, ದೇವಗಣಗಳ ಲೆಕ್ಕದ ಹಂಗಿಲ್ಲದೆ ಯಾರಿಗೂ ಕೇಡಿಲ್ಲದೆ ಆನು ಒಲಿದಂತೆ ಹಾಡುತ್ತಾ ಹಾಡುತ್ತಾ ಪಡಬಾರದ ಕಷ್ಟಪಟ್ಟು, ಹಲವಾರು ಪರೀಕ್ಷೆಗೆ ಒಳಪಟ್ಟ ಬಸವಣ್ಣನವರು ಮಾದಾರ ಚೆನ್ನಯ್ಯ, ಅಲ್ಲಮ, ಅಕ್ಕ ಮುಂತಾದ ಶರಣಕಿರಣಗಳ ದೀಪ್ತಿಯಲ್ಲಿ ಬೆಳಗುತ್ತಾ ಹೋದರು.

ಬಹುಜನ ಸಮಾಜದ ನಾಡಿ ಹಿಡಿದು ನಡೆ-ನುಡಿದ ಬಸವಣ್ಣನವರು ಮೌಢ್ಯದ ಸಂಕೋಲೆಗಳನ್ನು ಕಿತ್ತೆಸೆದಿದ್ದು ಗೊಡ್ಡು ಮನಗಳಿಗೆ ಸಹಿಸಲಾಗಲಿಲ್ಲ. ಗೊಡ್ಡು ಮನಗಳ ಹಿಡಿತದಲ್ಲಿದ್ದ ಪ್ರಭುತ್ವವನ್ನು ಜನತೆಯ ಕಡೆಗೆ ಬಾಗಿಸಿದ್ದು ನುಂಗಲಾರದ ತುತ್ತಾಗಿ ಬಿಟ್ಟಿತ್ತು. ಆಗ ಗೊಡ್ಡು ಮನಗಳೆಲ್ಲಾ ಒಂದಾಗಿ ಕೈ ಕೈ ಹಿಡಿದು "ಬಾಯಲ್ಲಿ ಬೆಲ್ಲ ಎದೆಯಲ್ಲಿ ಕತ್ತರಿ" ಇಟ್ಟುಕೊಂಡು ಬಹುಜನ ಶರಣರನ್ನು ಬಸವಣ್ಣನನ್ನು ಸದೆಬಡಿದರು. ಪರಿಣಾಮವಾಗಿ ಅನೇಕ ಶರಣರು, ಕಲ್ಯಾಣದರಸು, ಬಸವಣ್ಣನೂ ಐಕ್ಯವಾಗಿ (ಕೊಲೆಯಾಗಿ!?) ಹೋದರು. ಇವರ ನಡುವೆ ಅಳಿದುಳಿದ ಕೆಲವು ನಿಜ ಶರಣರು ಶರಣತ್ವವನ್ನು ಉಳಿಸಿ ಬೆಳೆಸಲು ಬದ್ಧತೆಯಿಂದ ನಿಜ ಶರಣತ್ವವನ್ನು ಕಾಪಿಟ್ಟುಕೊಂಡರು. ಆದರೆ ಕಾಪಿಟ್ಟುಕೊಂಡವರಿಂದಲೂ ಕದ್ದು ಶರಣತ್ವಕ್ಕೆ ಮೇಲುಕೀಳಿನ ಘೋರಿಗಳನ್ನು ಕಟ್ಟಿದವರು ಕೆಲವು ಗೋಮುಖವ್ಯಾಘ್ರರು. ಇದರಿಂದ ಬಹುಜನರ ಎದೆ ಮುರಿಯುವಷ್ಟು ವಿಷಪ್ರಕ್ಷಿಪ್ತಗಳು ವಚನ ಸರೋವರವನ್ನು ಹೊಕ್ಕವು. ಹೀಗಾದಾಗ ಬಹುಜನರ ಬಗೆಗಿನ ಬಸವಾಶಯವು ಮರೆಯಾಗುತ್ತ ಹೋಯಿತು. ಬಸವಾದಿಗಳು ಲಿಂಗೈಕ್ಯರಾಗಿ ಭಜನೆಗಳಲ್ಲಿ ಕಾಲದ ಕಳೆವಾಗಿಬಿಟ್ಟರು. ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂದ ಬಸವ ಮೌಲ್ಯವು ಇಂದಿಗೂ ಅಪಮೌಲ್ಯಕ್ಕೆ ಒಳಗಾಗುತ್ತಲೇಯಿದೆ.

ಎಲ್ಲ ಕಾಲ ಮೌಲ್ಯಗಳು ಕಾಲೋತ್ತರದಲ್ಲಿ ಹೀಗೆಯೇ ಆಗುತ್ತಿರುವಾಗ ಶರಣ ಚರಿತ್ರೆಯನ್ನಾಗಲೀ ಬಸವ ಚರಿತ್ರೆಯನ್ನಾಗಲೀ ಸರಿಯಾದ ಆಳವಾಗಿ ಅರಿತುಕೊಳ್ಳಬೇಕಾದದ್ದು ಬಸವೋತ್ತರ ಸಂದರ್ಭದ ಹಾಗೂ ಇಂದಿನ ಸಂದರ್ಭದ ಮುಂದಿರುವ ಸಾಂಸ್ಕೃತಿಕ ಗ್ರಹಿಕೆಯ ಬಹು ದೊಡ್ಡ ಸವಾಲು. ಈ ಸವಾಲನ್ನು ಎದುರಿಸಿ ಶರಣಚರಿತ್ರೆಯನ್ನು ಅರ್ಥ ಮಾಡಿಕೊಳ್ಳುವ ಬಸವೋತ್ತರ ಪ್ರಯತ್ನ ಪರಂಪರೆಯನ್ನು ವಚನ ಸಂಗ್ರಹ, ವಚನ ಸಂಪಾದನೆ, ಶರಣಪುರಾಣ, ಹರಿಹರನ ರಗಳೆಗಳು ಹಾಗೂ ಶೂನ್ಯಸಂಪಾದನೆಯಂತಹ ಕಾವ್ಯ - ಕಾರ್ಯ - ಸಾಧನೆಗಳಿಂದಲೇ ಗುರ್ತಿಸಬಹುದಾಗಿದೆ. ಇಂದಿಗೂ ಕಥೆ, ಕಾವ್ಯ, ಕಾದಂಬರಿ, ನಾಟಕ, ವೈಚಾರಿಕ ಸಂಶೋಧನೆ ಮೊದಲಾದ ಸೃಜನಶೀಲ ಪ್ರಕಾರಗಳಿಂದ ಶರಣ ಪರಂಪರೆಯನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನಗಳು ಗಮನಾರ್ಹವಾಗಿ ನಡೆಯುತ್ತಲೇ ಇವೆ. ಇದು ಶರಣತತ್ವಕ್ಕಿರುವ ಸಾಂಸ್ಕೃತಿಕ ಮೌಲ್ಯ ಮತ್ತು ಚಲನಶೀಲತೆಯ ಗುಣವಾಗಿದೆ. ಇಂಥ ಶರಣಾರ್ಥ ಕಾಲ ಮೌಲ್ಯ ಗ್ರಹಿಕೆಯ ಪ್ರಯತ್ನವಾಗಿ ಟಿ. ವಿ. ಸಿಂಗ್ ಠಾಕೂರು ಅವರ ನಿರ್ದೇಶನದಲ್ಲಿ ಹಾಗೂ ಜಿ. ಎಸ್. ಎಸ್. ಮೂರ್ತಿ ಅವರ ನಿರ್ಮಾಣದಲ್ಲಿ ಮೂಡಿ ಬಂದಿರುವ ಸಿನಿಮಾ: 'ಜಗಜ್ಯೋತಿ ಬಸವೇಶ್ವರ'. ಇದು ಪುರಾಣ ಮೂಲದ ಶರಣ ಕಥನವನ್ನು ಆಧರಿಸಿದೆ. ಪುರಾಣ ಮೂಲಕ್ಕೆ ನಿಷ್ಠರಾಗಿ ಸಂಪಾದನೆಯಾಗಿರುವ ಸಿನಿಮಾ ಕೃತಿ, ಆಧುನಿಕ ಸಂದರ್ಭದ ಒಂದು ಬಗೆಯ ಶೂನ್ಯ ಸಂಪಾದನೆಯೇ ಎನ್ನಬಹುದು.

ಬಸವೋತ್ತರ ಸಂದರ್ಭದಲ್ಲಿ ಕೆಲವು ವಚನ ಸಂಪಾದನಾಕಾರರು ಸಂಪಾದಿಸಿದ್ದು ಮಾತ್ರ 'ಶೂನ್ಯ ಸಂಪಾದನೆ' ಯಾಗುವುದಿಲ್ಲ. ಕಾಲಕಾಲಕ್ಕೆ ತಕ್ಕಂತೆ ಮುಕ್ತಮಾತಿನ ವಚನಗಳೊಂದಿಗೆ

ಯಾರು ಬೇಕಾದರೂ ಅರ್ಥಪೂರ್ಣವಾಗಿ ಅನುಸಂಧಾನಗೊಳ್ಳುವುದು ಔಚಿತ್ಯ ಪೂರ್ಣವಾಗಿದೆ. ಈ ಮೂಲಕ ಶರಣ ಚರಿತ್ರೆಯ ಸತ್ಯದ ಬಹುಮುಖಗಳನ್ನು ದರ್ಶಿಸ ಬಹುದು. ಚಿಂತಕರಾದ ಕಿ. ರಂ. ನಾಗರಾಜ್ ಅವರು ಹೇಳಿದಂತೆ : "....ಹಲವು ವಚನಗಳಿಂದ ತೆಗೆದ ಸಾಲುಗಳನ್ನು ಮತ್ತೆ ಜೋಡಿಸಿದರೂ ಇನ್ನೊಂದು ವಚನವಾಗುತ್ತದೆ. ನನಗೆ ಬೇಕಾದ ಸಾಲಗಳನ್ನು ಆಯ್ದುಕೊಂಡು ಇನ್ನೊಂದು ರೀತಿಯಲ್ಲಿ ಮಾಡಿದರೆ ಅದೂ ಇನ್ನೊಂದು ವಚನವಾಗುತ್ತದೆ. ಅದಕ್ಕೂ ಒಂದು ಯೂನಿಟಿ ಅಥವಾ ಐಕ್ಯತೆ ಇದೆ. ಹೀಗೆ ವಚನಗಳನ್ನು ಓದುವವರೆಲ್ಲರೂ ಶೂನ್ಯ ಸಂಪಾದನಕಾರರಾಗಬಹುದು. ನಾಲ್ಕು ಜನ ಮಾತ್ರ ಶೂನ್ಯ ಸಂಪಾದನಕಾರರಲ್ಲ. ಎಷ್ಟು ಜನ ಬೇಕಾದರೂ ಆಗಬಹುದು. ನಮ್ಮ ನಮ್ಮ ಸಂದರ್ಭಕ್ಕೆ ನಮ್ಮದೇ ಸಂಪಾದನೆಗಳನ್ನು ಕಟ್ಟಿಕೊಳ್ಳ ಬಹುದು." (ತೆರೆದ ಪಠ್ಯ - ಕಿ. ರಂ. ನಾಗರಾಜರ ಆಯ್ದ ಬರಹಗಳು; ಸಂ. ನಟರಾಜ್ ಹುಳಿಯಾರ್; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು; ೨೦೧೨, ಪುಟ ೧೬೦) ಈ ದಿಸೆಯಲ್ಲಿ ಜಗಜ್ಯೋತಿ ಬಸವೇಶ್ವರ ಸಿನಿಮಾ ಸಹ ತನ್ನ ಕಾಲದ 'ಪರಂಪರೆಯ ವೈಭವೀಕರಣ'ದ ಮೌಲ್ಯಾನು ಸಂಧಾನದಲ್ಲಿ ಶರಣರ ಚರಿತ್ರೆಯನ್ನು ಕಟ್ಟಿಕೊಂಡಿರುವ ಒಂದು ಗಮನಾರ್ಹ ಪ್ರಯತ್ನವಾಗಿದೆ.

ಶರಣಪುರಾಣದ ಮೂಲದಿಂದ ವಸ್ತುವನ್ನು ಆಯ್ಕೆ ಮಾಡಿಕೊಂಡು ಸಿನಿಮಾ ಮಾಧ್ಯಮಕ್ಕೆ ತಕ್ಕಂತೆ ಚಿತ್ರಕಥೆ, ಆರಂಭಾಂತ್ಯಗಳು ದೃಶ್ಯ ಚೌಕಟ್ಟು, ಭಾವನಾತ್ಮಕತೆ, ಗೀತೆ, ನೃತ್ಯ, ಹಾಗೂ ಸಂದೇಶ ಉದ್ದೇಶಗಳನ್ನು ನಿರ್ವಹಣೆ ಮಾಡಲಾಗಿದೆ. ಪುರಾಣ ಮೂಲದಿಂದ ಮಾ. ನಂ. ನಂಜಪ್ಪನವರು ರಚಿಸಿರುವ ಶರಣಕಥಾ ಸಂಯೋಜನೆಗೆ ತಕ್ಕ ಸಂಭಾಷಣೆಯನ್ನು ಜಿ. ವಿ. ಅಯ್ಯರ್ ಅವರು ನೀಡಿದ್ದಾರೆ. ಸಿ. ಹೊನ್ನಪ್ಪ ಭಾಗವತರ್, ರಾಜಕುಮಾರ್, ಅಶ್ವಥ್, ಬಾಲಕೃಷ್ಣ, ಲೀಲಾವತಿ ನರಸಿಂಹರಾಜು, ಜಿ.ವಿ.ಅಯ್ಯರ್ ಮೊದಲಾದವರು ಶರಣ ಚರಿತ್ರೆಯ ಪಾತ್ರಗಳಿಗೆ ತಮ್ಮ ಮನೋಜ್ಞ ಅಭಿನಯದ ಮೂಲಕ ಜೀವ ತುಂಬಿದ್ದಾರೆ. ಜಿ. ಕೆ. ವೆಂಕಟೇಶ್ ಅವರ ಸಂಗೀತ, ನಿರ್ದೇಶನದಲ್ಲಿ ಮೂಡಿ ಬಂದಿರುವ ವಚನ ಗೀತೆಗಳು ಹೆಚ್ಚು ಶಾಸ್ತ್ರೀಯವಾಗಿದ್ದರೂ ಮತ್ತೆ ಮತ್ತೆ ಕೇಳಬೇಕೆನಿಸುತ್ತದೆ.

ಇದು ಕಪ್ಪು -ಬಿಳುಪು ಚಿತ್ರವಾದ್ದರಿಂದ ಆರಂಭದಿಂದಲೂ ಅನೇಕ ದೃಶ್ಯಗಳ ಬ್ಯಾಕ್ ಗ್ರೌಂಡ್‌ನ ಸಂಗತಿಗಳು ಅಸ್ಪಷ್ಟವಾಗಿವೆ. ಆದರೆ ಅಭಿನಯ ಹಾಗೂ ಸಂಭಾಷಣೆಗಳ ಆಕರ್ಷಣೆಯಿಂದಾಗಿ ದೃಶ್ಯ ಪ್ರಸ್ತುತಿ ಹಾಗೂ ದೃಶ್ಯ ಸಂಯೋಜನೆಯು ಸಹೃದಯರನ್ನೂ ತನ್ಮಯಗೊಳಿಸುತ್ತದೆ.

ಶಿವನಾಜ್ಞೆಯ ಮೇರೆಗೆ ಧರ್ಮರಕ್ಷಣೆಗಾಗಿ ಕೈಲಾಸದಿಂದ ನಂದಿಯು ಬಸವನಾಗಿ ಭೂಲೋಕದಲ್ಲಿ ಜನಿಸುವುದು. ಬಾಲಕ ಬಸವನು ಕೌಟುಂಬಿಕ ಸಂಕೋಲೆಗಳಿಂದ ಬಿಡಿಸಿಕೊಂಡು ಗುರುವಿನ ಸೇವೆಗೆ ಬದ್ಧನಾಗುವುದು, ಗುರುಸೇವೆಯಲ್ಲಿದ್ದಾಗ ಬಸವನಿಗೆ ವಿವಾಹವಾಗುವುದು, ವಿವಾಹದ ನಂತರ ಬಸವ ಯುಗದ ಮೌಲ್ಯಗಳ ದರ್ಶನ, ಬಸವ ದಯಾದರ್ಶನ, ಅರಮನೆಯಲ್ಲಿ ಶರಣರು ಮತ್ತು ಬಿಜ್ಜಳ ರಾಜನ ನಡುವಿನ ಯುದ್ಧ ಪ್ರಸಂಗ,

ಶರಣ ವಚನ ಗಾಯನ ಮೊದಲಾದ ದೃಶ್ಯಗಳು ದಾರ್ಶನಿಕತೆಯನ್ನು ಒಳಗೊಂಡು ಮನಮುಟ್ಟುತ್ತವೆ. ಉದಾಹರಣೆಗೆ, ಬಸವನ ಮನೆಗೆ ಕಳ್ಳ ಹೊಕ್ಕ ದೃಶ್ಯದೊಳಗಿನ ದಾರ್ಶನಿಕತೆಯು ಸಾರ್ವಕಾಲಿಕವಾದುದು. ಅನಾವಶ್ಯಕವಾಗಿ ಆಭರಣಗಳನ್ನು ಕಳ್ಳನಿಗೆ ವಾಪಸ್ಸು ಕೊಡುವ ಮೂಲಕ ಇಲ್ಲದವರ, ಶರಣಜನರ ಸೇವೆ ಮಾಡುವ ಸಂದೇಶ ನಿಜಕ್ಕೂ ಈ ಹೊತ್ತಿನ ಎಲ್ಲ ಶ್ರೀಮಂತರಿಗೂ ಶ್ರೀಮಂತ ಮಠಗಳಿಗೂ ಬಹು ದೊಡ್ಡ ಪಾಠ. ಈ ಹೊತ್ತಿನ ಮಠಗಳೂ ಶ್ರೀಮಂತರೂ ನಿಜವಾಗಲೂ ಬಸವ ತತ್ವಾಧಾರಿತವೇ ಆಗಿದ್ದರೆ ಮೊದಲು ನಮ್ಮ ಮನೆಯೊಳಗಿನ, ಮಠದೊಳಗಿನ ಸಂಪತ್ತನ್ನು ನಾಡಿಗೆ, ಬಡವರಿಗೆ ಸರಿಸಮನಾಗಿ ಹಂಚಿ ಸಮಪಾಲಿನ ಸಮಬಾಳಿಗೆ ಶ್ರಮಿಸಬೇಕು. ಉಳ್ಳವರು ಇಲ್ಲದವರಿಗೆ ಸದಾ ನೆರವಾಗಬೇಕು. ಹೀಗಾದಾಗ ನಮ್ಮ ನಾಡು ಬಸವಣ್ಣನವರು ಕಂಡ ಸಮತೆಯ ಕಲ್ಯಾಣದ ನಾಡಾಗುವುದರಲ್ಲಿ ಯಾವ ಅನುಮಾನವೂ ಇಲ್ಲ. ಆದರೆ ಆ ತಾಕತ್ತು ಈ ಹೊತ್ತಿನಲ್ಲಿ ಯಾರಿಗಿದೆ ? ಯಾವ ಮಠಕ್ಕಿದೆ? ಈ ಹೊತ್ತು ಶಿಕ್ಷಣ, ಸಂಪತ್ತುಗಳ ರಾಷ್ಟ್ರೀಕರಣದ ಬಗ್ಗೆ ಮಾತಾಡ್ತಿರೋ ನಾವು ಬಸವತತ್ವ ಚಲನಶೀಲತೆ ಜೀವಂತಿಕೆಗಾಗಿ ಮಠಗಳ ರಾಷ್ಟ್ರೀಕರಣಕ್ಕಾಗಿ, ನೈಜ ಬಸವಾಶಯಕ್ಕಾಗಿ ಹಂಬಲಿಸುವ ಎಲ್ಲರು ಒಂದಾಗಿ ದುಡಿಯುವುದು ಸಾಧುವಲ್ಲವೇ?

ಇಂತಹ ದರ್ಶನ - ಅನುಸಂಧಾನದಿಂದ ಎಚ್ಚರಗೊಳಿಸುವ ದೃಶ್ಯಗಳು ಹಲವಾರಿವೆ. ಆದರೆ ಕೆಲವು ದೃಶ್ಯಗಳಿಗೆ ಇನ್ನೂ ಇರಬಹುದಾದ ಮೌಲ್ಯದರ್ಶನ ಹಾಗೂ ಪರಿಷ್ಕರಣ ಸಾಧ್ಯತೆಗಳನ್ನು ಇನ್ನಷ್ಟು ವಿಸ್ತಾರಗೊಳಿಸುವ ಅವಕಾಶವಿದ್ದು ಸಿನಿಮಾ ನಿರ್ಮಾತೃಗಳು ಆ ಕಡೆ ಇನ್ನಷ್ಟು ಆಳವಾಗಿ ಚಿಂತಿಸಬಹುದಿತ್ತು. ಉದಾಹರಣೆಗೆ, ವಚನಗಳ ಪ್ರಸ್ತಾಪ, ಗಾಯನದ ಹಲವು ಸಂದರ್ಭಗಳು ಅನೌಚಿತ್ಯವಾಗಿ ಕಂಡು ಬರುತ್ತವೆ. ಅಲ್ಲದೆ ಈ ಚಲನಚಿತ್ರವು ಬಸವಯುಗದ ಶರಣಚರಿತ್ರೆಯ ದೈವೀಕರಣದ ಒಂದು ಆಕರ್ಷಕ ಕಲಾ ನಿರ್ಮಿತಿಯಾಗಿದೆ. ಶರಣಚರಿತ್ರೆಯನ್ನು 'ಮಾನವ ಹೃದಯ ದೈವೀಕರಣ' ವಾಗಿಸಿರುವ ಪುರಾಣಮೂಲದಿಂದ ವಸ್ತುವನ್ನು ಪರಿಶೀಲಿಸದೆ ಪರಿಷ್ಕರಿಸದೆ ಹಾಗೆಯೇ ಪ್ರಸ್ತುತಪಡಿಸಿರುವುದು ಈ ಸಿನಿಮಾದ ಮೂಲನಿಷ್ಠೆಯೂ ಹೌದು, ಮಹತ್ವವೂ ಹೌದು, ಮಿತಿಯೂ ಹೌದು. ಆದರೆ ನಮ್ಮ ಸಾಮಾಜಿಕ ಸಂದರ್ಭದಲ್ಲಿ ಒಮ್ಮೊಮ್ಮೆ ಮಹತ್ವವೇ ಮಿತಿಯಾದರೆ ಮತ್ತೊಮ್ಮೊಮ್ಮೆ ಮಿತಿಯೇ ಮಹತ್ವವೂ ಆಗಿಬಿಡುವುದು ಸಂದಿಗ್ಧದ ಹಾಗೂ ಸೋಜಿಗದ ಸಂಗತಿ.

ಒಟ್ಟು ಸಿನಿಮಾದಲ್ಲಿ ಬಸವಾದಿ ಶರಣ ಸಾಮಾಜೀಕರಣಕ್ಕಿಂತ ದೈವೀಕರಣದ ಛಾಯೆಗಳೇ ಹೆಚ್ಚಾಗಿವೆ. ಹಾಗಾಗಿಯೇ ಇಲ್ಲಿ ಮಾನವ ಹೃದಯವನ್ನು ದೈವೀಕರಿಸಿ ನೋಡಲಾಗಿದೆಯೇ ಹೊರತು ದೈವಹೃದಯವನ್ನು ಮಾನವೀಕರಿಸಿ ನೋಡಲಾಗಿಲ್ಲ. (ಬಸವನು ದೈವಾನುಗ್ರಹದಿಂದ ಅವತಾರವೆತ್ತಿ ಕೊನೆಗೆ ದೈವದಲ್ಲಿ ಐಕ್ಯಗೊಳ್ಳುತ್ತಾನೆ) ಆದುದರಿಂದ ಶರಣಚರಿತ್ರೆಯ ಅನೇಕ ವಾಸ್ತವ ಸಂಗತಿಗಳು ಕತ್ತಲಲ್ಲಿ ಉಳಿದಂತಾಗಿದೆ. 'ಮಾನವ ಹೃದಯವನ್ನು ದೈವೀಕರಿಸುವುದು' ಎಂದರೆ, ವಾಸ್ತವಾಂಶಗಳನ್ನು ಇನ್ನಿಲ್ಲದಂತೆ ಪುರಾಣೀಕರಣಕ್ಕೆ ಒಳಗುಮಾಡಿ ಮರೆಮಾಚು

ವುದು; 'ದೈವಶ್ರದ್ಧೆಯನ್ನು ಮಾನವೀಕರಿಸುವುದು' ಎಂದರೆ, ವಾಸ್ತವಾಂಶಗಳನ್ನು ಪುರಾಣೀಕರಿಸದೆ ಅಥವಾ ಪುರಾಣೀಕರಣಗೊಂಡ ವಾಸ್ತವಾಂಶಗಳನ್ನು ಮನೋವೈಜ್ಞಾನಿಕವಾಗಿ ಪರೀಕ್ಷಿಸಿ ಅರ್ಥೈಸಿಕೊಳ್ಳುವುದು. ಬಾಬಾಸಾಹೇಬ್ ಅಂಬೇಡ್ಕರ್ ಅವರು ಯಹೂದಿಗಳು ತಮ್ಮ ಮೊದಲನೆಯ ದಾಸ್ಯತ್ವದ ನಂತರ ಏಳಿಗೆ ಹೊಂದಲು ಅವರ ದೇಹ ಮತ್ತು ಮನಸ್ಸುಗಳ ಆಧಿಕ್ಯವೇ ಪ್ರಮುಖ ಕಾರಣವೆಂದು ಹೇಳಬಹುದು. ಮೊದಲನೆಯದಾಗಿ, ದೇವರನ್ನು ನಂಬುವುದರಿಂದ, ನೆಚ್ಚುವುದರಿಂದ ಇದು ಸಾಧ್ಯವಾಗಬಹುದು. (ನಂಬಿ ಕರೆದರೆ ಓ ಎನ್ನನೇ ಶಿವನು ಎಂದು ಶರಣರು ಹೇಳಿಲ್ಲವೇ? ಏನೂ ಇಲ್ಲದಾಗ ಕೊನೆಯ ಪಕ್ಷ ದೇವರ ಕರುಣೆಯಾದರೂ ಇದ್ದರೆ ನಮಗೆ ಧೈರ್ಯ ನೀಡಲು ಸಾಕು. ಸಂಕಟ ಕಾಲದಲ್ಲಿ ದೇವರಲ್ಲಿದ್ದ ನಂಬಿಕೆಯೇ ನಮ್ಮನ್ನು ರಕ್ಷಿಸಿ, ನಮ್ಮ ಯಶಸ್ಸಿಗೆ ಮೂಲ ಕಾರಣವಾಗಬಲ್ಲದು... ದೇಹ ಮತ್ತು ಮನಸ್ಸಿನ ಆಧಿಕ್ಯದ ಸ್ಥಿತಿಯೂ ಕೂಡ ಸಾಮಾಜಿಕ ಪರಿಸರದ ಪರಿಣಾಮವೇ ಆಗಿರುತ್ತದೆ. ಆದರೆ ಪ್ರಸನ್ನವಾದ, ಅನುಕೂಲಕರವಾದ ಪರಿಸರವಿದ್ದರೆ ಮಾತ್ರ ಇಂಥ ಪರಿಣಾಮ ಉಂಟಾಗಲು ಸಾಧ್ಯ. ಎಂಥ ಪರಿಸರವು ದೇಹ ಮತ್ತು ಮನಸ್ಸುಗಳ ಆಧಿಕ್ಯಕ್ಕೆ ಅಂದರೆ ಏಳಿಗೆಗೆ ಸಹಾಯ ಮಾಡಬಲ್ಲದು? ಪ್ರಸನ್ನವಾದ ಸಾಮಾಜಿಕ ಪರಿಸರ ಏನನ್ನು ಒಳಗೊಳ್ಳುತ್ತದೆ? ಇದು ಬಂಧನಗಳಿಂದ ಮುಕ್ತವಾಗಿರುತ್ತದೆ. ಅಡ್ಡಿ ಆತಂಕಗಳಿಂದ ಸುರಕ್ಷಿತವಾಗಿರುತ್ತದೆ. ಹೇಗಾದರೂ ಜೀವಿಸುವುದಕ್ಕೆ ಅಲ್ಲ, ಸುಖ, ಸಂತೋಷ, ನೆಮ್ಮದಿಯಿಂದ ಬಾಳುವ ಹಕ್ಕುಳ್ಳವನನ್ನಾಗಿ ಮಾಡುವಂಥದು. ಒಬ್ಬನ ಐಷಾರಾಮಿನ ಸುಖಕ್ಕಾಗಿ ಮತ್ತೊಬ್ಬನನ್ನು ಕತ್ತೆಯಂತೆ ದುಡಿಯುವಂತೆ ಒತ್ತಾಯ ಮಾಡುವುದಿಲ್ಲ. ಮುಂದೋಡುತ್ತಿರುವ ಸ್ಪರ್ಧಾಳುವಿನ ಕಾಲನ್ನು ಯಾರೂ ಜಗ್ಗದಂತೆ ಜಾಗೃತೆ ವಹಿಸುತ್ತದೆ. ವ್ಯಕ್ತಿಯ ಸಾಧನೆ ಆಧರಿಸಿ ಪ್ರತಿಫಲ ನೀಡುತ್ತದೆಯೇ ವಿನಃ ಜಾತಿ ಆಧರಿಸಿ ಅಲ್ಲ. ಎಲ್ಲರೊಂದಿಗೆ ಒಳ್ಳೇ ಭಾವನಾತ್ಮಕ ಸಂಬಂಧ ಹೊಂದಿರುವಂಥದು. ಅಂದರೆ ಎಲ್ಲರಿಗೂ ಒಳ್ಳೆಯದನ್ನೇ ಬಯಸುವಂಥದು. ಇಂಥ ಪರಿಸರದ ಸ್ಥಿತಿಗತಿಗಳು ದೇಹ ಮತ್ತು ಮನಸ್ಸುಗಳ ಆಧಿಕ್ಯದ ಸ್ಥಿತಿಗೆ ನೆರವು ನೀಡಬಲ್ಲದು. ಏಳಿಗೆಗೆ ನೀರುಗೊಬ್ಬರವಾಗಬಲ್ಲದು... (ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು, ಸಂಪುಟ-೧೨, ಭಾಗ-೨, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು; ೧೯೯೯; ಪುಟ ೯೨೧-೯೨೨) ಜನಪರವಾದ 'ದೈವಶ್ರದ್ಧೆಯ ಮಾನವೀಕರಣವನ್ನು ಕುರಿತಾದ ಈ ಮನೋವೈಜ್ಞಾನಿಕ ಚಿಂತನೆಗಳನ್ನು ನೇರವಾಗಿ ೧೨ನೇ ಶತಮಾನದ ವಚನ ಯುಗದ ಬಸವಾದಿ ಶರಣ ಸಂಸ್ಕೃತಿಗೂ ಅನ್ವಯಿಸಬಹುದಾಗಿವೆ.

ಒಂದು ಕಾಲದ ಸಾಹಿತ್ಯ textಗಳನ್ನು ಈ ಹೊತ್ತಿನ context ಗಳಲ್ಲಿ ನೋಡಿ ಚರಿತ್ರೆ ಮತ್ತು ವರ್ತಮಾನಗಳೊಂದಿಗೆ ಅರ್ಥಪೂರ್ಣವಾದ ಅನುಸಂಧಾನ ನಡೆಸಬೇಕು. ಹಾಗಾಗದಿದ್ದರೆ ಚಾರಿತ್ರಿಕ ವಿಸ್ಮೃತಿಗೂ ವರ್ತಮಾನದ ಹೊರಗೊಳ್ಳುವಿಕೆಗೂ ಒಳಗಾಗಿಬಿಡುತ್ತೇವೆ. ಜನಮುಖಿಯಾದ ಶರಣಚರಿತ್ರೆಯೊಂದಿಗೆ ವರ್ತಮಾನವನ್ನು ಮುಖಾಮುಖಿಯಾಗುವಾಗಲೂ ಸಹ ಸರಿಯಾದ ಅನುಸಂಧಾನ ಸಾಧ್ಯವಾಗದೆ ಈಗ ಚಾಲ್ತಿಯಲ್ಲಿರುವ

ಪುರಾಣೀಕರಣದ ಪತ್ರ ಹಾಗೂ ದಂತಕಥೆಗಳೇ ಪ್ರಮಾಣಗಳೆಂದು ಸ್ವೀಕರಿಸಿರುವುದೂ ಸಹ ಇಂತಹ ಚಾರಿತ್ರಿಕ ವಿಸ್ಮೃತಿಗೆ ಸಾಕ್ಷಿಯಾಗಿದೆ. 'ಜಗಜ್ಯೋತಿ ಬಸವೇಶ್ವರ' ಸಿನಿಮಾ ಸಹ ಇಂತಹ ಚಾರಿತ್ರಿಕ ವಿಸ್ಮೃತಿಯಲ್ಲಿ ನಿರ್ಮಿಸಿರುವ ಚಲನ ಚಿತ್ರವಾಗಿದೆ. ಸಿನಿಮಾ ಮಾಧ್ಯಮವು ಸಾಹಿತ್ಯಕ್ಕಿಂತ ಹೆಚ್ಚು ಜನಪ್ರಿಯವಾದ ಕ್ಷೇತ್ರ. ಆದರೆ ಅವಕ್ಕೆ ಅದರದೇ ಆದ ಮಿತಿಗಳೂ ಇವೆ. ಆದಾಗ್ಯೂ ಚರಿತ್ರೆಯ ಹೊಸ ಹುಡುಕಾಟಕ್ಕೆ ಪ್ರಯತ್ನಿಸದೇ ಮತ್ತದೇ ಪುರಾಣಪ್ರೇರಿತ ಅವಾಸ್ತವಗಳೇ ಚರಿತ್ರೆಯೆಂಬಂತೆ ಪ್ರಯೋಗಿಸಿರುವುದು ಸತ್ಯದೂರವಾಗಿದೆ. ಶರಣರ ವಚನಗಳಲ್ಲೇ ಇರುವ ಸತ್ಯ ಸಂಗತಿಗಳನ್ನು ಆಧರಿಸದೆ ಶರಣರನ್ನು ದೈವೀಕರಿಸಿ ಪುರಾಣೀಕರಣ ಮಾಡಲಾಗಿದೆ. ಕೆಲವು ಸಂಗತಿಗಳನ್ನು ಹೊರತುಪಡಿಸಿದರೆ ಅನೇಕ ವಿಚಾರಗಳೂ ಅವಾಸ್ತವವೂ ಅಸಂಬದ್ಧವೂ ಆಗಿ ಕಾಣುತ್ತದೆ.

ವಾಸ್ತವವಾಗಿ ತನ್ನ ಜಾತಿ ಅಹಂಕಾರವನ್ನೂ ಹಿಂಸಾವೃತ್ತಿಯನ್ನೂ ತೀವ್ರವಾಗಿ ಖಂಡಿಸಿ ಸಮಾಜಮುಖಿ ಎಳೆಗೆಯ ಸಂತರಾದ ಬಸವಾದಿ ಶರಣರನ್ನು ಪುರಾಣೀಕರಿಸಿ ಸಾಂಸ್ಕೃತಿಕ ಸತ್ಯಗಳನ್ನು ಗಾಢ ವಿಸ್ಮೃತಿಗೆ ದೂಡುವುದು ಬಸವತತ್ವಕ್ಕೆ ಮಾಡುವ ವಿರೋಧವೂ ಅನ್ಯಾಯವೂ ಆಗುವುದಿಲ್ಲವೇ? ಸಿನಿಮಾದ ಮೊದಲ ದೃಶ್ಯವನ್ನೇ ಗಮನಿಸಿ. ಬಸವಣ್ಣನವರು ತಮ್ಮ ಜೀವಿತಾವಧಿಯಲ್ಲಿ ಜಾತಿ ಕಾರಣಕ್ಕಾಗಿ ಅನುಭವಿಸಿರಬಹುದಾದ ಸಂಕಟಗಳನ್ನು ಮರೆಸುವ ರೀತಿಯಲ್ಲಿ ಕೈಲಾಸದಿಂದ ನಂದಿಯ ಅವತಾರವಾಗಿ ಭೂಲೋಕದಲ್ಲಿ ಧರ್ಮರಕ್ಷಣೆಗಾಗಿ ಬಸವನಾಗಿ ಜನಿಸುವಂತೆ ಪ್ರೇರೇಪಿಸುವುದು ಹಾಗೂ ಕೊನೆಯಲ್ಲಿ ಲಿಂಗೈಕ್ಯನಾಗುವುದು ವಾಸ್ತವ ದೂರವಾಗಿದೆ. ಮಾದರಸ ಮತ್ತು ಮಾದಲಾಂಬಿಕೆಯ ಮಗನಾಗಿ ಜನಿಸಿ ಇನ್ನೂ ಬಾಲಕನಿದ್ದಾಗಲೇ ಕುಟುಂಬ ವಿಮುಖನಾಗಿ ಸಂತನಂತೆ ಮಾತನಾಡುವುದು ಮಕ್ಕಳ ಮನೋಸ್ಥಿತಿಯ ಮನೋವೈಜ್ಞಾನಿಕತೆಯ ಹಿನ್ನೆಲೆಯಲ್ಲಿ ಅಸಂಬದ್ಧ ಎನಿಸುತ್ತದೆ. ಇವಕ್ಕೆ ಬದಲಾಗಿ, ಬಾಲಕ ಬಸವನು ಯುವಕನಾಗಿ ಬೆಳೆಯುತ್ತ ಅನುಭವಿಸಿರ ಬಹುದಾದ ಯಾತನೆಗಳನ್ನು ಚಿತ್ರಿಸಲು ಸಾಧ್ಯವಿತ್ತು. ಆದರೆ ಅದು ಸಾಧ್ಯವಾಗಿಲ್ಲ. ಅಲ್ಲದೆ, ಬಸವಣ್ಣ ಮತ್ತು ಇತರ ಶರಣರ ನಡುವೆ ಏರ್ಪಡುವ ಸಂವಾದದಲ್ಲಿ ಸಂವಾದ ಪೂರ್ವದ ಸಾಂಸ್ಕೃತಿಕ ಸ್ಮೃತಿ-ವಿಸ್ಮೃತಿಗಳ ಪರಾಮರ್ಶೆ ಅಷ್ಟಾಗಿ ನಡೆಯುವುದಿಲ್ಲ. ಬದಲಾಗಿ, ಹೆಚ್ಚು ಭಾವನಾತ್ಮಕತೆ ಹಾಗೂ ನೇರ ಆರಾಧನಾ ಪ್ರವೃತ್ತಿಗಳನ್ನು ಚಿತ್ರಿಸಲಾಗಿದೆ. ಮಹಾಮನೆಯ ಮುಕ್ತ ಸಂವಾದ ಸಾಧ್ಯತೆಗಳನ್ನು ಮರೆಸುವಂತೆ ಹೆಚ್ಚು ದೈವಾತ್ಮಕಗೊಳಿಸಲಾಗಿದೆ. ಹೀಗೆ ಈ ಚಿತ್ರದಲ್ಲಿ ಬಸವಾದಿ ಶರಣರ ಮುಕ್ತ ಕಾಯಕ ಶ್ರದ್ಧೆಯನ್ನು ಸಾಮಾಜೀಕರಣದ ಹಿನ್ನೆಲೆಯಲ್ಲಿ ನೋಡದೆ ಅವತಾರವಾಗಿಸಿಬಿಟ್ಟಿರುವುದು ಸಮಂಜಸವಾಗಿ ಕಾಣದು.

ಶರಣ ಚರಿತ್ರೆಯನ್ನಾಗಲೀ ಬಸವ ಚರಿತ್ರೆಯನ್ನಾಗಲೀ ಈ ಹೊತ್ತಿನಲ್ಲಿ ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾದದ್ದೇನೊ ಸರಿ. ಆದರೆ ಈ ನಿಟ್ಟಿನಲ್ಲಿ ಪ್ರಯತ್ನಿಸಿದವರೆಲ್ಲ ಸರಿಯಾಗಿಯೇ ಅರ್ಥ ಮಾಡಿಕೊಳ್ಳುತ್ತಾರೆಂದು ಭಾವಿಸಲಾಗದು. ಇಂಥ ಕಾರಣದಿಂದಲೇ ಹೇಳಿದ್ದು, ಈ

ಅರ್ಥ ಗ್ರಹಿಕೆಯು ಬಸವೋತ್ತರ ಸಂದರ್ಭದ ಹಾಗೂ ನಮ್ಮ ಇಂದಿನ ಸಂದರ್ಭದ ಮುಂದಿರುವ ಸಾಂಸ್ಕೃತಿಕ ಗ್ರಹಿಕೆಯ ಬಹು ದೊಡ್ಡ ಸವಾಲು ಎಂದು. ಕೆಲವರು ಶರಣ ಚರಿತ್ರೆಯನ್ನು ಪುರಾಣ ಮೂಲದಿಂದ ಅರ್ಥ ಮಾಡಿಕೊಂಡರೆ, ಮತ್ತೆ ಕೆಲವರು ವಚನಗಳ ಮೂಲಕವೇ ಶರಣ ಚರಿತ್ರೆಯನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾರೆ. ಚಾರಿತ್ರಿಕ ಸಂಗತಿಗಳನ್ನು ಪುರಾಣೀಕರಿಸಿ ಮೆರೆಸುತ್ತಿರುವ ಸಂದರ್ಭದಲ್ಲಿ ನಿಜ ಶರಣತ್ವದ ಪರಂಪರೆಯನ್ನು ಅರ್ಥ ಮಾಡಿಕೊಳ್ಳುವುದು ತುರ್ತಿನ ವಿಚಾರವಾಗಿದೆ. ಲೋಕದ ಹಲವು ರೀತಿಯ ಹಿಂಸೆಯನ್ನು ವಿರೋಧಿಸಿ ಜನಮುಖಿಯಾದ ಬುದ್ಧ, ಮಹಾವೀರ, ಬಸವ ಮೊದಲಾದ ಮಹಾನ್ ಚೇತನಗಳ ಅರಿವು ಮತ್ತು ಅಂತಃಕರಣಗಳನ್ನು ಇನ್ನಿಲ್ಲದಂತೆ ಪುರಾಣೀಕರಿಸಿರುವುದರ ಸಾಂಸ್ಕೃತಿಕ ಹುನ್ನಾರಗಳನ್ನು ಪರಿಶೀಲಿಸಬೇಕಿದೆ. ಹಾಗೇ ಸೂಕ್ಷ್ಮವಾಗಿ ಸಾಂಸ್ಕೃತಿಕ ಶೋಧನೆ ತೊಡಗಿದರೆ ಶರಣ ಚರಿತ್ರೆಯು ಬುದ್ಧಗುರುವಿನ ಮೂಲದಿಂದಲೇ ಶುರುವಾಗುತ್ತದೆ. ಬುದ್ಧಕಾಲದ ಪಾಳಿ ಭಾಷೆಯಲ್ಲಿರುವ ಸಚ್ಚವಜ್ಜೇನ' ಎಂಬ ಪದಕ್ಕೆ ಸತ್ಯವಚನ, ಸತ್ಯಕಾಯಕ ಎಂಬ ಅರ್ಥಗಳಿದ್ದು ಅವು ಬಸವಕಾಲದ ಆಶಯವನ್ನೇ ಹೋಲುತ್ತವೆ. ಬುದ್ಧಯುಗದಿಂದ ಬಸವಯುಗಕ್ಕೆ ಸಾಮ್ಯತೆ - ಸಂಬಂಧ ಕಲ್ಪಿಸುವ ಪದ -ಪರಿಕಲ್ಪನೆಗಳೂ ಸಾಕಷ್ಟಿವೆ.

ಉದಾಹರಣೆಗೆ ಈ ಕೆಳಕಂಡ ಪಟ್ಟಿ ಗಮನಿಸಿ.

	ಬುದ್ಧಯುಗ (ಕಿ. ಪೂರ್ವ ೬ನೇ ಶತಮಾನ)	ಬಸವ ಯುಗ (ಕ್ರಿ. ಶ. ೧೨ನೇ ಶತಮಾನ)
೧)	ಸರಣ	ಶರಣ
೨)	ವಜ್ಜೇನ > ವಚನ >	ವಚನ
೩)	ಸೀಲ	ಶೀಲ
೪)	ಮೂಸಿ > ಪುಸಿ > ಬೂಸಿ	ಹುಸಿ
೫)	ತಮಧಂ > ತಮಂಧಂ >	ತಮಂಧ
೬)	ಸಚ್ಚ	ಸತ್ಯ
೭)	ಅನುಭಾವ	ಅನುಭಾವ
೮)	ಸದ್ದ	ಶಬ್ದ
೯)	ಕರಣೀಯ	ಕಲ್ಯಾಣ
೧೦)	ಮಹಂತ	ಮಹಾಂತ
೧೧)	ಪರ	ಪರ

೧೨) ಅಪರಿಮಾಣ ಅಪರಿಮಿತ

೧೩) ಸೀಲವಾ ಶೀಲವಂತ

೧೪) ಸಮಣ > ಶ್ರಮಣ ಶ್ರವಣ

೧೫) ಚಿತ್ತ ಚಿತ್ತ

ಇಷ್ಟು ಮಾತ್ರವಲ್ಲದೆ ಇಂಥ ಅನೇಕ ಉದಾಹರಣೆಗಳನ್ನು ಬುದ್ಧಕಾಲದಿಂದಲೂ ಬಸವಯುಗದ ವರೆಗೂ, ಮಾತ್ರವಲ್ಲದೆ ಇಂದಿನ ಯುಗದ ವರೆಗೂ ಪ್ರಭಾವಿಸಿರುವ ಜನ ನುಡಿ-ನುಡಿಗಳಲ್ಲಿ, ವಚನ ದರ್ಶನಗಳಲ್ಲಿ ಗುರುತಿಸಬಹುದು. ಆದುದರಿಂದ ಶರಣ ಸಾಹಿತ್ಯ-ಸಂಸ್ಕೃತಿಯ ತಾಯಿಬೇರು ಬುದ್ಧಗುರು ಎಂದು ಮನವರಿಕೆಯಾಗುತ್ತದೆ. ಕ್ರಿಸ್ತಪೂರ್ವದಲ್ಲೇ ಬುದ್ಧ ತನ್ನ ಅನುಭವಗಳನ್ನು ಕೊಟ್ಟ ನಡೆ-ನುಡಿಯ ವಚನಗಳನ್ನು ಮುಂದಿನ ಕಾಲಗಳಲ್ಲಿ ಅನೇಕ ಧರ್ಮ ಬೋಧಕರು ಪ್ರಚಾರ ಪಡಿಸುತ್ತ ಪಾಲಿಸುತ್ತ ಬಂದರು. ೧೨ನೇ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ಬಸವಪೂರ್ವದ ಅನೇಕ ಶರಣರೂ ಬಸವಯುಗದ ಅನೇಕ ಶರಣರೂ ಬುದ್ಧ ಮೂಲದಿಂದ ವಚನ ಪರಂಪರೆಯನ್ನು ಪಾಲಿಸಿ, ಪ್ರಚಾರ ಪಡಿಸಿದರು. ಇದೊಂದು ರೀತಿಯ ಬೌದ್ಧ ಶರಣ ಧಮ್ಮ ಪ್ರಚಾರ ಯಾತ್ರೆಯೂ ಆಗಿ ಧರ್ಮಪಾಲನಾಯಾತ್ರೆಯೂ ಸಾಂಸ್ಕೃತಿಕ - ಸಾಹಿತ್ಯಿಕ ಕ್ರಾಂತಿಯೂ ಆಗುತ್ತದೆ. ಬುದ್ಧಯುಗದಲ್ಲಿ ವಚನಗಳು ಅಂದಿನ ಜನ ಭಾಷೆಯಾದ ಪಾಳಿಯಲ್ಲಿ ಬೋಧಿಸಲ್ಪಟ್ಟರೆ, ಬಸವಯುಗದಲ್ಲಿ ವಚನಗಳು ಸಂಸ್ಕೃತ ವಿರೋಧಿ ಕ್ರಾಂತಿಕನ್ನಡ ಮೊದಲಾದ ದಕ್ಷಿಣದ ಜನಭಾಷೆಗಳಲ್ಲಿ ಬೋಧಿಸಲಾಯಿತು. ಆದರೆ, ದಯೆಯ ಧರ್ಮವನ್ನು ಬೋಧಿಸಿ- ಬದುಕಿದ ಬುದ್ಧಾದಿ ಬಸವಾದಿ ಶರಣ ಚೇತನಗಳನ್ನು ಕಾಲಾನುಕ್ರಮದಲ್ಲಿ ಅನೇಕ ಅಪಮೌಲಿಕರಣ ವೈದಿಕೀಕರಣಗಳಿಗೆ ಒಳಗು ಮಾಡಿ ಮೂಲ ಸತ್ವಗಳನ್ನು ಮರೆಸಲಾಗಿದೆ. ಇಂಥ ಸಾಂಸ್ಕೃತಿಕ ಸ್ಮೃತಿ-ವಿಸ್ಮೃತಿಯ ಬೇರುಗಳ ಆಳ- ಅಗಲ, ಏಳು - ಬೀಳು, ಎತ್ತರ-ಬಿತ್ತರಗಳನ್ನು ಸೂಕ್ಷ್ಮವಾಗಿ ನಾವಿಂದು ಸಂಕುಚಿತರಾಗದೆ ಜಾತ್ಯತೀತರಾಗಿ ಅರ್ಥೈಸಿಕೊಳ್ಳಬೇಕಿದೆ. ಈ ಮೂಲಕ ನಿಜಶರಣತ್ವದ ಮೂಲ ಚರಿತ್ರೆಯನ್ನು ಶರಣತತ್ವ ಸಂಚಲನಾತ್ಮಕ ಪ್ರಕ್ರಿಯೆಗಳನ್ನು ಮರುಶೋಧಿಸಿಕೊಂಡು ಈ ನೆಲದ 'ವಚನ ದರ್ಶನ'ವನ್ನು ಪುನರ್ ನಿರ್ಮಿಸಿಕೊಳ್ಳಬೇಕಿದೆ.

ಒಂದು ಆಶ್ಚರ್ಯಕರ ಸಂಗತಿಯೆಂದರೆ, ಪ್ರಸ್ತುತ ಸಿನಿಮಾದಲ್ಲಿ ಹಲವು ದೃಶ್ಯಗಳಲ್ಲಿ ಬುದ್ಧ ಮೂರ್ತಿಯ ದರ್ಶನವೂ ಆಗುತ್ತದೆ. ಕಲ್ಯಾಣ ರಾಜ್ಯದ ಬಿಜ್ಜಳ ರಾಜನ ರಾಣಿ ನಿವಾಸದಲ್ಲಿ ನಡೆಯುವ ಕೌಟುಂಬಿಕ ಚರ್ಚೆ, ಬಸವಣ್ಣನ ವಚನಗಾಯನ - ಬೋಧನೆ, ಬಸವ - ಬಿಜ್ಜಳ-ರಾಣಿ - ಮಗು ಇವರ ನಡುವಿನ ಸಂವಾದದ ದೃಶ್ಯಗಳಿಂದ ಆರಂಭಿಸಿ ಅರಮನೆಯೊಳಗೆ ಬಿಜ್ಜಳರಾಜನನ್ನು ಕೊಲ್ಲಲು ಬಂದ ಶರಣರು ಹಾಗೂ ಬಿಜ್ಜಳನ ನಡುವೆ ಯುದ್ಧ ನಡೆಯುವ ಸಂದರ್ಭದಲ್ಲಿನ (ಚಲನ ಚಿತ್ರ ಸಮಯ: ೫೬ನಿ. : ೩೨ ಸೆ.ನಿಂದ ೨ ಗಂ. ೩೧ ನಿ. : ೩೦

ಸೆ. ವರೆಗೆ) ಪ್ರತೀ ದೃಶ್ಯದಲ್ಲೂ ಬ್ಯಾಕ್ ಗ್ರೌಂಡ್‌ನಲ್ಲಿ ಹಲವು ಬಾರಿ ಧ್ಯಾನಸ್ಥ ಬುದ್ಧ ಮೂರ್ತಿಯು ಗೋಚರವಾಗುತ್ತದೆ. ಆರಂಭದಿಂದಲೇ ಶಿವಲಿಂಗ ದರ್ಶನವುಳ್ಳ ಈ ಸಿನಿಮಾದಲ್ಲಿ ಬುದ್ಧ ಮೂರ್ತಿ ಕಾಣುವುದೆಂದರೆ ವಿರೋಧಾಬಾಸವೇ. ಚಲನಚಿತ್ರವು ಕಪ್ಪು ಬಿಳುಪು ಆಗಿರುವುದರಿಂದ ಬುದ್ಧ ಮೂರ್ತಿಯು ಲಿಂಗದೆದುರಿಗಿನ ಶರಣಧ್ಯಾನದಂತೆಯೂ ಕಾಣುತ್ತದೆ? ಆದರೆ, ಸೂಕ್ಷ್ಮವಾಗಿ ನೋಡಿದರೆ ಅದು ಸಂಪೂರ್ಣ ಬುದ್ಧಗುರುವಿನ ಧ್ಯಾನಸ್ಥ ಭಂಗಿಯ ಮೂರ್ತಿಯೇ ಎಂಬುದು ಯಾರಿಗಾದರೂ ಅರಿವಾಗುತ್ತದೆ. ಇದರ ಉದ್ದೇಶ ಮತ್ತು ಸತ್ಯಾಸತ್ಯತೆಗಳನ್ನು ಈ ಸಿನಿಮಾದ ನಿರ್ಮಾತೃಗಳಲ್ಲಿ ಕಾಯಕ ಜೀವಿಗಳಲ್ಲಿ ಯಾರಾದರೂ ಇಂದು ಇದ್ದರೆ ಅವರನ್ನೇ ಕೇಳಿ ಸ್ಪಷ್ಟಪಡಿಸಿಕೊಳ್ಳ ಬಹುದಿತ್ತು. (ಅಥವಾ ಈಗ ಯಾರಾದರೂ ಇದ್ದವರು ತಿಳಿಸಿ ಸ್ಪಷ್ಟಪಡಿಸಿದರೆ ತುಂಬಾ ಸಂತೋಷ. ಇರಲಿ. ಬಹುಶ: ಅದು ಸಂಪೂರ್ಣ ಬುದ್ಧಗುರುವಿನ ಧ್ಯಾನಸ್ಥ ಭಂಗಿಯ ಮೂರ್ತಿಯೇ ಆಗಿರುವುದಕ್ಕೆ 'ಕಾಲ'ವೂ ಕಾರಣವಿರಬೇಕೆನಿಸುತ್ತೆ. ಸಿನಿಮಾ ನಿರ್ಮಾಣಗೊಂಡು ಪ್ರದರ್ಶನಗೊಂಡ ಕಾಲ ೧೯೫೬. ಅಂದರೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಬಹುಜನರ ಮೂಲ ದಮ್ಮವಾದ ಬೌದ್ಧ ಧಮ್ಮಕ್ಕೆ 'ಮರಳಿ ಮನೆಗೆ ಬುದ್ಧನೆಡೆಗೆ' ನಡೆದ ಕ್ರಾಂತಿಯ ಹೆಜ್ಜೆಯ ಕಾಲ. ಈ ಸಂದರ್ಭದಲ್ಲಿ ತೆರೆಕಂಡ ಸಿನಿಮಾದಲ್ಲಿ ಬಿಜ್ಜಳನ ಅರಮನೆಯಲ್ಲಿ ಬುದ್ಧ ಮೂರ್ತಿಯ ದರ್ಶನವಾಗುವುದು ಅನೇಕ ಪ್ರಶ್ನೆಗಳಿಗೆ ಎಡೆಮಾಡಿಕೊಡುತ್ತದೆ. ಅಂಬೇಡ್ಕರ್ ಮೂಲಕ ನಡೆದ ಬಹುಜನ ಕಾಯಕಜೀವಿಗಳ ರಕ್ತರಹಿತ ನವ ಆಧ್ಯಾತ್ಮಿಕ ಕ್ರಾಂತಿಯ ಸುವರ್ಣ ಕಾಲವೂ ಆಗಿದ್ದುದರಿಂದ ಬಹುಜನರು ಪಾಲಿಸುವಂತಾದ ಈ ನೆಲದ ಚಾರಿತ್ರಿಕ ಬೋಧಿ ಧಮ್ಮ > ಶರಣ ಧಮ್ಮವನ್ನು ರಕ್ತರಹಿತ ಸಾಂಸ್ಕೃತಿಕ ಕ್ರಾಂತಿಯ ಆಶಯದ ಮಿಂಚೊಂದನ್ನು ಬಿತ್ತರಿಸುವ ಕಾರಣಕ್ಕಾಗಿ ಬುದ್ಧನ ಧ್ಯಾನ ಮೂರ್ತಿ ಯನ್ನು ಮತ್ತೆ ಮತ್ತೆ ದರ್ಶಿಸಲಾಯಿತೇ? ಬಿಜ್ಜಳನ ರಾಣಿ ಮತ್ತು ಮಗು ಇಬ್ಬರೂ ಬುದ್ಧ ಮೂರ್ತಿಯ ಮುಂದೆ ಕುಳಿತು ಪೂಜೆ, ಧ್ಯಾನಾದಿಗಳನ್ನೂ ಸಲ್ಲಿಸುವುದು (ದೃಶ್ಯ ಸಮಯ ೧ಗಂಟೆ ೧೫ ನಿಮಿಷ ೫೫ ಸೆಕೆಂಡಿನಿಂದ ೧ಗಂಟೆ ೧೭ನಿಮಿಷ ೩೭ ಸೆಕೆಂಡ್‌ವರೆಗೆ೦ ನಿಜವಾಗಿಯೂ ಕುತೂಹಲಕಾರಿಯಾಗಿದ್ದು ಕಲ್ಯಾಣದ ಅಂದಿನ ರಾಜಕುಟುಂಬ ಬೌದ್ಧ ಕುಟುಂಬವಾಗಿತ್ತೇ? ಬಸವಣ್ಣನವರು ರಾಣಿ ಹಾಗೂ ರಾಜಪುತ್ರನಿಗೆ ವಚನ ಗಾಯನ ಬೋಧನೆ ಮಾಡುವಾಗ ಬುದ್ಧಮೂರ್ತಿಯ ಎದುರಿನಲ್ಲಿ ಕುಳಿತರೂ ಮೂರ್ತಿಯತ್ತ ಒಮ್ಮೆಯೂ ನೋಡಿ ಪ್ರತಿಕ್ರಿಯಿಸುವುದಿಲ್ಲವೇಕೆ? ಬಿಜ್ಜಳನ ಕಲ್ಯಾಣ ರಾಜ್ಯ ಶಿವಶರಣರಿಂದ ಕೂಡಿದ್ದು ಬಿಜ್ಜಳನ ಕುಟುಂಬವು ಬೌದ್ಧಾನುಯಾಯಿಗಳಾಗಿದ್ದೂ ಶಿವಶರಣ ಧಾರ್ಮಿಕ ನಡೆಯನ್ನೂ ಸಹಿಷ್ಣುತೆಯಿಂದ ಕಂಡರೆ? ಶರಣ ಮೂಲದ ಬುದ್ಧ ತತ್ವವನ್ನು ಪ್ರಾಮಾಣಿಕವಾಗಿ ಅರ್ಥ ಮಾಡಿಕೊಂಡಿರುವುದರ ಸಂಕೇತವಾಗಿ ಬುದ್ಧ ಮೂರ್ತಿಯನ್ನು ಮತ್ತೆ ಮತ್ತೆ ತೋರಿಸಲಾಯಿತೇ? ಹಾಗಿದ್ದರೆ, ಸಿನಿಮಾದ ಅರಂಭದಲ್ಲಿಯೇ ಸಿಂಹಾವಲೋಕನ ಕ್ರಮದಲ್ಲಿ ಬುದ್ಧಯುಗದ ಶರಣ ಕ್ರಾಂತಿಯನ್ನೂ ಚಿತ್ರಿಸಬಹುದಿತ್ತಲ್ಲವೇ? ಆದರೆ, ಕೈಲಾಸದ ಚಿತ್ರಣದ ಮೂಲಕ ಅಪ್ರಾಮಾಣ್ಯ ಅವತಾರ ಪರಿಕಲ್ಪನೆಗೆ ಮೊರೆಹೋದುದ್ದರ ಧರ್ಮರಾಜ ಕಾರಣದ ಸತ್ಯಸತ್ಯತೆಗಳೆಷ್ಟು? ಇಂಥ ಹಲವಾರು ಪ್ರಶ್ನೆಗಳನ್ನು ಕೇಳಿಕೊಳ್ಳಲು ಅನುವು

ಮಾಡಿಕೊಟ್ಟಿರುವ ಸಿನಿಮಾ ಹಲವಾರು ಮಿತಿಗಳ ನಡುವೆಯೂ ತನ್ನ ಸಾಂಸ್ಕೃತಿಕ ಮಹತ್ವನ್ನು ಉಳಿಸಿಕೊಂಡಿದೆ.

೧೯೫೬ರಲ್ಲಿ ಪ್ರದರ್ಶನಗೊಂಡ ಈ ಸಿನಿಮಾದೊಂದಿಗೆ ಹಲವಾರು ಪ್ರಶ್ನೆಗಳನ್ನು ಇಟ್ಟುಕೊಂಡೇ ಇಂದು ಅವುಗಳನ್ನು ಬಗೆಹರಿಸಿಕೊಳ್ಳುವ ನಿಟ್ಟಿನಲ್ಲಿ ಸಾಂಸ್ಕೃತಿಕ ಜಾಗೃತಿದಾಯಕ ಕ್ರಿಯಾಶೀಲಗೊಳ್ಳಬೇಕಿದೆ. ಪ್ರಸ್ತುತ ಸಿನಿಮಾ ಮಾದರಿಯನ್ನು ಪ್ರಶ್ನಿಸಿ, ಪರಿಷ್ಕರಿಸಿಕೊಂಡು ಶರಣಪರಂಪರೆಯನ್ನು ಪುನರ್‌ದರ್ಶಿಸುವ ಅಗತ್ಯವಿದೆ. ಈ ದಿಸೆಯಲ್ಲಿ ಈಗ ನಮ್ಮ ನಡುವೆ ಇರುವ ಸಾಂಸ್ಕೃತಿಕ ಸೂಕ್ಷ್ಮ ಸಂವೇದನೆಯುಳ್ಳ ಕೆಲವು ಸಿನಿಮಾ ನಿರ್ದೇಶಕರು ಸಾಂಸ್ಕೃತಿಕ ಮರು ಅನ್ವೇಷಣೆಯ ಹಾದಿಯಲ್ಲಿ 'ಕ್ರಾಂತಿ ಜ್ಯೋತಿ ಬಸವಣ್ಣ'ನನ್ನು ಸಿನಿಮಾ ಮಾಧ್ಯಮದ ಮೂಲಕವೂ ಪುನರ್ ಪ್ರದರ್ಶಿಸುವುದು ಮಹತ್ವಪೂರ್ಣವಾದುದಾಗಿದೆ. ಈಗಾಗಲೇ ಹಲವಾರು ಕಥೆ, ಕಾದಂಬರಿಗಳನ್ನು ಜಾನಪದ ಸೃಜನ ರೂಪಗಳನ್ನು ಸಿನಿಮಾ ಮಾಧ್ಯಮದಲ್ಲಿ ವಿನೂತನವಾಗಿ ಚಿತ್ರಿಸಿ ಇತಿಹಾಸ ಸೃಷ್ಟಿಸಿರುವ ಸೂಕ್ಷ್ಮ ಕಲಾಪ್ರಾಜ್ಞರು 'ಕ್ರಾಂತಿಜ್ಯೋತಿ ಬಸವಣ್ಣ'ನ ನಿಜ ನಡೆ-ನುಡಿಯ ವಚನ ಪರಂಪರೆಯನ್ನು ವಚನ ಕಾಲಗಳ (ಬುದ್ಧ ಯುಗ - ಬಸವಯುಗ) ಸಮಾಜ ಸಂಸ್ಕೃತಿ - ಸಂಘರ್ಷ ಚಿತ್ರಣವನ್ನು 'ಜಗಜ್ಯೋತಿ ಬಸವೇಶ್ವರ' ಚಿತ್ರಕ್ಕಿಂತ ಭಿನ್ನವಾಗಿ ವಿವಿಧ ದೃಷ್ಟಿಕೋನಗಳಲ್ಲಿ ಸೆರೆ ಹಿಡಿಯಲು ಸಾಧ್ಯವಿದೆ; ಸಾಮರ್ಥ್ಯವೂ ಇದೆ. ಅದರದೇ ಆದ ಪ್ರೋಗ್ರೆಸಿವ್ ತತ್ವಚಿಂತನೆಯಲ್ಲಿ ಕ್ರಾಂತಿಜ್ಯೋತಿ ಬಸವಣ್ಣನನ್ನು ಕಟ್ಟಿಕೊಟ್ಟರೆ ಅದೂ ಸಹ ವಿಶ್ವದಾದ್ಯಂತ ಸಿದ್ಧ ಮಾದರಿಯ ಬಸವತತ್ವಗಳ ಪರಿಷ್ಕರಣೆಯಾಗಿ, ನಿಜ ಬಸವತತ್ವಗಳ ವಿಸ್ತರಣೆ ಹಾಗೂ ಪ್ರಸರಣವೂ ಆಗುತ್ತದೆ ಎಂಬುದು ನನ್ನ ಹಾಗೂ ನನ್ನಂಥವರ ಅಭಿಲಾಷೆ, ವಿನಮ್ರ ಮನವಿ ಮತ್ತು ಕನಸಾಗಿದೆ.

ಬಹುಜನರ ಅಣ್ಣನಾಗಿದ್ದ ಬಸವಣ್ಣ ಇಂದಂತೂ ಕುದುರೆ ಏರಿಸಿ ಕತ್ತಿ ಕೊಟ್ಟವರ ಕೈ ಬಂದಿಯಾಗಿದ್ದಾನೆ. ನುಡಿದರೆ ಲಿಂಗವೇ ಮೆಚ್ಚಿ ಅಹುದಹುದೆನ್ನಬೇಕೆನ್ನುವಂತೆ ಬದುಕಿದ ಬಸವನ ತತ್ವಾದರ್ಶವೂ ದುರಾಸೆಯ ಆಯಕಟ್ಟುಗಳಲ್ಲಿ ಕೇವಲ ಪೂಜಿತಗೊಳ್ಳುತ್ತಿದೆ. ನಮ್ಮಣ್ಣ ಬಸವ ಮರೆಯಾಗಿ ಶಿವನವತಾರಗೊಂಡು ಬಂದಂತೇ ವರ್ತಿಸುವ ಅನೇಕ ಜಗದ್ಗುರು ಪ್ರಣೀತರು ಮೆರೆದಾಡುತ್ತಿದ್ದಾರೆ. ಜಾತಿ ಅಹಂಗಳನ್ನು ಸುಟ್ಟ ಬಸವನನ್ನು ಇಂದು ಜಾತಿ ಗೂಟಕ್ಕೆ ನೇತು ಹಾಕಲಾಗುತ್ತಿದೆ. ಹೀಗೆ, ಬಹುಜನರ ಬುದ್ಧ-ಬಸವಾಶಯವು ನಾಶವಾಗುತ್ತಿರುವ ಹೊತ್ತಿನಲ್ಲಿ ಬಹುಜನರು ತಮ್ಮ ಬಸವಣ್ಣನನ್ನು ಹುಡುಕಿಕೊಳ್ಳಲು ವಚನ ಚರಿತ್ರೆಯ ಸತ್ಯವರಿತು ಇಂದು ಸಂಘಟಿತರಾಗಬೇಕಿದೆ. ಬಹುಜನರ ಎದೆಗಳಲ್ಲಿ ಈ ನೆಲದ ಪೂರ್ವದ ಬುದ್ಧನಂತ ಅಂತಃಕರಣವುಳ್ಳ ನಮ್ಮಣ್ಣ ಬಸವಣ್ಣ ನೆಲಮೂಲದ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಚೈತನ್ಯವಾಗಿ ಉಳಿದು ಬೆಳೆದು ಬರಬೇಕಾಗಿದೆ. ಈ ಮೂಲಕ ಮರಳಿ ಮಣ್ಣಿಗೆ ಬಹುಜನರ ಕಾಯುವ ಶರಣ ಕಿರಣಗಳು ನಿತ್ಯವೂ ಬಿತ್ತರಗೊಳ್ಳುತ್ತಿರಬೇಕಿದೆ.

●

ಟಿ. ಜಿ. ರಾಘವ ಅವರ ಕತೆ 'ಒಂಭತ್ತು / ಹನ್ನೊಂದು'

• ಬಿ.ಟಿ.ದೇಸಾಯಿ

9/11 : The conspiracy theories attribute the planning and execution of September 11 attacks to parties other than, or, in addition to Al Qaeda or claim there was advance knowledge of the attacks among the high-level government officials. Government investigations and independent scientific reviews have found no evidence for the theories. Proponents of these conspiracy theories claim there are inconsistencies in the official conclusions, or evidence which was ignored or overlooked.

The most prominent conspiracy theory is that the collapse of the Twin Towers and the World Trade Centre were the result of a controlled demolition rather than structural failure due to impact and fire. Another prominent belief is that the Pentagon was hit by missile launched by elements from inside the US Government, or that a commercial airliner was allowed to do so via an effective stand - down of the American military. Possible motives claimed by conspiracy theorists for such actions include justifying the invasions of Afganistan and Iraq as well as geostrategic interests in the Middle East, Such as pipeline planes launched in the early 1990's by Unocal and other oil companies. Other conspiracy theories revolve around authorities having advance knowledge of the attacks and deliberately ignoring or assisting the attackers. - Wikipedia

ನ್ಯೂಯಾರ್ಕ್ ಟ್ರೇಡ್ ಸೆಂಟರ್‌ನ ಅವಳಿ ಶಿಖರಗಳು ಏಕೆ ಮತ್ತು ಹೇಗೆ ಧ್ವಂಸ ಗೊಳಿಸಲ್ಪಟ್ಟವು ಎಂಬುದನ್ನು ನೀವು ಇನ್ನೊಂದು ಪರಿಪ್ರೇಕ್ಷ್ಯದಿಂದ (perspecive), ಇನ್ನೊಂದು ದೃಷ್ಟಿಕೋನದಿಂದ ನೋಡಲಪೇಕ್ಷಿಸುವಿರಾದರೆ ಸ್ವರ್ಗಸ್ಥ ಭಾಯಿ ರಾಜೀವ

ದೀಕ್ಷಿತ ಅವರ ಉಪನ್ಯಾಸವನ್ನು (You Tube site) ನಲ್ಲಿ ನೋಡಿರಿ - ಜೀ.ದೇ.

Paraonia : Paranoid personality disorder is one in which the patient views other people as hostile, devious and untrustworthy and reacts in a combative manner to disappointments or to events that he or she considers rebuffs or humiliations. Notable are a questioning of the loyalty of friends . the bearing of grudges, a tendency to read threatening meaning into benign remarks, and unfounded suspicions about the fidelity of a partner - Miller Keane Encyclopedia and Dictionary of medicine, Nursing, and Allied Health,©2003 by Saunders.

ಅನ್ವಯ ಮತ್ತು ವ್ಯತಿರೇಕ : ಈ ಎರಡು ಪದಗಳು ವೈದಿಕ ತರ್ಕದ ಪ್ರಸಂಗದಲ್ಲಿ ಉಪಯೋಗಿಸಲ್ಪಡುತ್ತವೆ. ಅನ್ವಯವೆಂದರೆ ಎರಡು ಪದಗಳ ಅಥವಾ ವಸ್ತುಗಳ ಪರಸ್ಪರ ಸಾಮಾನ್ಯ / ಸಹಜ ಹೊಂದಾಣಿಕೆ, ಒಂದನ್ನೊಂದು ಬಿಟ್ಟು ಇಲ್ಲದಿರುವಿಕೆ. ವ್ಯತಿರೇಕವೆಂದರೆ ಇದರ ವಿರುದ್ಧ. ಎರಡು ಪದಗಳು ಅಥವಾ ವಸ್ತುಗಳು ಒಂದನ್ನೊಂದು ಹೊಂದಿಕೊಂಡಿರದೆ ಪ್ರತ್ಯೇಕವಾಗಿರಬಲ್ಲ ಗುಣ ಅಥವಾ ಸ್ವಭಾವ. ವೈದಿಕ ಸಾಹಿತ್ಯದಲ್ಲಿ ಇವಕ್ಕೆ ಕೊಡುವ ಪ್ರಸಿದ್ಧ ಉದಾಹರಣೆಯೆಂದರೆ ದಾರದಿಂದ ಪೋಣಿಸಲ್ಪಟ್ಟ ಮಣಿಗಳ ಸರ. ಸರದಲ್ಲಿ ದಾರವನ್ನು ಬಿಟ್ಟು ಮಣಿಗಳಿಗೆ ಪ್ರತ್ಯೇಕ ಅಸ್ತಿತ್ವವಿದ್ದರೂ ಆ ಮಣಿಗಳೆಲ್ಲ ಕೂಡಿ ಸರವಾಗಬೇಕಾದರೆ ದಾರವು ಬೇಕೇ ಬೇಕು. ಇದು ಅನ್ವಯ. ಆದರೆ ದಾರಕ್ಕೆ ಮಣಿಗಳನ್ನು ಬಿಟ್ಟು ಪ್ರತ್ಯೇಕ ಅಸ್ತಿತ್ವವಿದ್ದೇ ಇದೆ. ಹಾಗೆಯೇ ಮಣಿಗಳಿಗೂ ಕೂಡ ದಾರವನ್ನು ಬಿಟ್ಟು ಪ್ರತ್ಯೇಕವಾಗಿರಬಲ್ಲ ಗುಣವೂ ಇದೆ. ಇದು ವ್ಯತಿರೇಕ. ವೈದಿಕ ಸಾಹಿತ್ಯದಲ್ಲಿ ಅನ್ವಯ - ವ್ಯತಿರೇಕಕ್ಕೆ ಕೊಡುವ ಇನ್ನೊಂದು ಪ್ರಸಿದ್ಧ ಉದಾಹರಣೆಯೆಂದರೆ ಬೆಂಕಿ ಮತ್ತು ಹೊಗೆ. ನಮಗ ಎಲ್ಲಿಯಾದರೂ ಹೊಗೆ ಕಾಣಿಸಿತೆಂದರೆ ಅಲ್ಲೆಲ್ಲೊ ಬೆಂಕಿ ಇದೆ ಎಂದು ತರ್ಕಿಸುತ್ತೇವೆ. ಇದು ಅನ್ವಯ. ಬೆಂಕಿ ಇದ್ದಲ್ಲೆಲ್ಲ ಹೊಗೆ ಇರಲೇಬೇಕೆಂಬ ನಿಯಮವೇನೂ ಇಲ್ಲವಲ್ಲ? ಉದಾ: ನಿಮ್ಮ ಅಡುಗೆ ಮನೆಯ ಎಲ್.ಪಿ.ಜೀ ಗ್ಯಾಸ್ ಸ್ಟೋವ್ / ಒಲೆ. ಅಲ್ಲಿ ಬೆಂಕಿ / ಉರಿ ಇದೆ, ಆದರೆ ಹೊಗೆಯೇ ಇಲ್ಲವಲ್ಲ? ಹೀಗೆ ಬೆಂಕಿ / ಹೊಗೆಯಿಂದ ಪ್ರತ್ಯೇಕವಾಗಿರಬಲ್ಲ ಗುಣ/ಸ್ವಭಾವವೇ ವ್ಯತಿರೇಕ. ಅನ್ವಯ-ವ್ಯತಿರೇಕವಾದವನ್ನು ರಾಘವ ಅವರ ಈ ಕತೆಗೆ ನಾನು ಅನ್ವಯಿಸಿದ್ದು ಹೀಗೆ ಅಮೇರಿಕಾ (ಅಥವಾ, ಯಾವುದೇ ದೇಶವಾದರೂ ಸರಿಯೇ) ದೇಶದ ಪ್ರಜೆಗಳಿಗೆ, ಅಮೇರಿಕನ್ ನಾಗರಿಕರೆನ್ನಿಸಿಕೊಳ್ಳಬೇಕಾದರೆ ಆ ದೇಶದ ಆಡಳಿತವನ್ನು ಬಿಟ್ಟರೆ ಸ್ವತಂತ್ರ ಅಸ್ತಿತ್ವವಿಲ್ಲ. ಇದು ಅನ್ವಯ. ಆದರೆ ಅಮೇರಿಕಾದ ಜನರಿಗೂ ಕೂಡ ಸರಕಾರ / ಆಡಳಿತವನ್ನು ಮೀರಿ, ಸ್ವತಂತ್ರವಾಗಿ ಇರಬಲ್ಲ ಶಕ್ತಿ ಇದ್ದೇ ಇದೆ. ಇದು ವ್ಯತಿರೇಕ.

ಟಿ. ಜಿ. ರಾಘವ ಅವರ ಈ ಒಂಭತ್ತು / ಹನ್ನೊಂದು ಕತೆಯು ಧಾರವಾಡದ ಮನೋಹರ ಗ್ರಂಥ ಮಾಲೆಯವರು ೨೦೦೫ರಲ್ಲಿ ಪ್ರಕಟಿಸಿದ ಒಂದಿಷ್ಟು ಹೊಸ ಕತೆಗಳು ಎಂಬ ಸಂಗ್ರಹದಲ್ಲಿ (ಪುಟ.. ೨೭-೪೫) ಇದೆ. ಕತೆಯು ಹೀಗೆ ಕೊನೆಗೊಳ್ಳುತ್ತದೆ:

ರೆಸ್ಟೋರೆಂಟಿನಲ್ಲಿ ನಮ್ಮನ್ನು ಖಾಲಿ ಇದ್ದ ಜಾಗದಲ್ಲಿ ಕೂರಲು ಹೇಳಿ, ಪೀಟರ್ ತಿಂಡಿ ತೀರ್ಥ ತರಲು ಹೋದ. ನಾನು ಟೇಬಲಿನತ್ತ ಕಣ್ಣು ಹಾಯಿಸಿದೆ. ಟೇಬಲಿಗೆ ಅಂಟಿಸಿದ್ದ ಮುದ್ರಿಸಿದ್ದ ಚೀಟಿಯನ್ನು ಯಾರೋ ಹರಿಯಲು ಪ್ರಯತ್ನಿಸಿದ್ದರು. ಹಾಗಾಗಿ ಅಚ್ಚಾಗಿದ್ದ ಪೂರ್ಣ ಪಾಠವನ್ನು ಓದಲು ಆಗಲಿಲ್ಲ. ಇದ್ದಷ್ಟನ್ನು ಓದ ತೊಡಗಿದೆ.

ಅನುಮಾನ ಬಂದರೆ.........

ಈ ಕೆಳಗಿನ...............

ಎಷ್ಟಾದರೂ ನಮಗೆ ನಿಮ್ಮ ಕ್ಷೇಮವೇ ಮುಖ್ಯ.............

ಮರೆಯಬೇಡಿ. ನಿಮ್ಮ ಕ್ಷೇಮವೇ

ಪೀಟರ್ ತಿಂಡಿ ಹೊತ್ತು ತರುತ್ತಿದ್ದಂತೆ ಆ ಚೀಟಿಯ ಕಡೆಗೆ ಅವನ ಗಮನ ಸೆಳೆದೆ.

ಪೀಟರ್ 'ಪ್ಯಾರಾನೋಇಯಾ' ಎಂದ.

ಈ ಕತೆಯಲ್ಲಿ ಪೀಟರ್ ಒಂದು ಮುಖ್ಯ ಪಾತ್ರ. ಕತೆಯನ್ನು ಕೊನೆಗೊಳಿಸುವ ಈ "ಪ್ಯಾರನೋಇಯ" ಶಬ್ದವು ಕತೆಯ ಕೇಂದ್ರವಷ್ಟೇ ಅಲ್ಲ, ಅದರ ಮುಖ್ಯ ಭೂಮಿಕೆಯೂ ಮತ್ತು ಹಿನ್ನೆಲೆಯೂ ಆಗಿದೆ. ಆದ್ದರಿಂದ "ಪ್ಯಾರನೋಇಯ" ಎಂಬ ಮಾನಸಿಕ ಅವಸ್ಥೆ ಮತ್ತು ೯/೧೧ರ ಘಟನೆಗಳ ಸೂಕ್ಷ್ಮ ಅರಿವು ಅವಶ್ಯವೆನ್ನುವ ದೃಷ್ಟಿಯಿಂದ ಇವೆರಡರ ಬಗ್ಗೆ ಸ್ವಲ್ಪ ವಿಸ್ತಾರವೇ ಎನ್ನಬಹುದಾದಂತೆ ಈ ಲೇಖನದ ಮುಖದಲ್ಲಿ ವಿಕಿಪೀಡಿಯದಿಂದ ಉದ್ಧರಣೆಗಳನ್ನು ಕೊಟ್ಟಿದ್ದೇನೆ.

ಈ ಕತೆಯಲ್ಲಿ ಬರುವ ಮುಖ್ಯ ಪಾತ್ರಗಳಿಷ್ಟು: ಕತೆಯ ಅನಾಮಧೇಯ ನಿರೂಪಕ, ಅವನ ಹೆಂಡತಿ ನೀರಜಾ, ಅವರ ಮಗಳು ಅನುಪಮಾ ಮತ್ತು ಅನುಪಮಾನ ಅಮೇರಿಕನ್ ಫ್ರೆಂಡ್ ಪೀಟರ್. ಕತೆ ನಡೆಯುವುದು ಮುಖ್ಯವಾಗಿ ನ್ಯೂಯಾರ್ಕ್ ಮತ್ತು ಸ್ಯಾನ್‌ಫ್ರಾನ್ಸಿಸ್ಕೋ ದಲ್ಲಿ. ನಿರೂಪಕ ಮತ್ತು ಅವನ ಹೆಂಡತಿ ಅಮೇರಿಕಾಕ್ಕೆ ಬಂದದ್ದು ತಮ್ಮ ಮಗಳು ಅನುಪಮಾನನ್ನು ನೋಡಲೆಂದು. ಅವರ ಉಪಚಾರ ಮಾಡಲಿಕ್ಕೆ ಮಗಳಿಗೆ ಸ್ವತಃ ಆಗದ್ದರಿಂದ ಆಕೆಯು ತನ್ನ ಮಿತ್ರನಾದ ಪೀಟರ್‌ನನ್ನು ಈ ಕೆಲಸಕ್ಕೆ ನಿಯೋಜಿಸಿರುತ್ತಾಳೆ. ಆದ್ದರಿಂದ ತನ್ನ ತಾಯಿ-ತಂದೆಗೆ ನಿರುಪಮಾ ಈ ರೀತಿ ಪತ್ರ ಬರೆದಿರುತ್ತಾಳೆ: ಪೀಟರ್ ವಿಮಾನ ನಿಲ್ದಾಣಕ್ಕೆ ಬರುತ್ತಾನೆ. ಏನು ಸಹಾಯ ಬೇಕಿದ್ದರೂ ಅವನನ್ನು ಸಂಕೋಚವಿಲ್ಲದೆ

ಬಾಯಿ ಬಿಟ್ಟು ಕೇಳಿ. ನೆನಪಿಟ್ಟುಕೊಳ್ಳಿ, ಇಲ್ಲಿ ಸಂಕೋಚದಿಂದ ಇದ್ದರೆ ಹೊಟ್ಟೆಗಿಲ್ಲದೆ ಇರಬೇಕಾಗುತ್ತದೆ." ನಿರುಪಮಾಳ ಈ ಮಾತು ಬಹಳ ಅರ್ಥಪೂರ್ಣವಾಗಿದೆ.

೧೧ನೇ ತಾರೀಖು ಸೆಪ್ಟೆಂಬರ್ ೨೦೧೧ ರಲ್ಲಿ ನ್ಯೂಯೋರ್ಕ್‌ನ World Trade Center ಅವಳಿಗೋಪುರಗಳು ಯಾವುದೋ ವಿಮಾನವೊಂದು ಹಾರುತ್ತ ಬಂದು ಆ ಗೋಪುರಕ್ಕೆ ಬಾಂಬು ಹಾಕಿದ್ದರಿಂದ ಅವುಗಳ ಮೇಲಿನ ಭಾಗಗಳು ಧ್ವಂಸವಾಗುತ್ತವೆ. ಈ ಘಟನೆಯಿಂದಾಗಿ ಎಷ್ಟೋ ಜೀವ ಹಾನಿಯಾಗಿದೆ. ಆದರೆ ಈ ಕತೆಯಲ್ಲಿ ಆ ವಿಧ್ವಂಸಕಾರೀ ಘಟನೆಯ ಬಗ್ಗೆ ಪ್ರತ್ಯಕ್ಷವಾಗಿ ಎಲ್ಲಿಯೂ ನಿರ್ದೇಶನವಿಲ್ಲ. ಕತೆಯ ಪಾತ್ರಗಳು ಈ ಬಗ್ಗೆ ಏನೂ ಅರಿವಿಲ್ಲದಂತೆ ಇದ್ದಾರೆ. ಅಂದರೆ ಈ ಕತೆಯನ್ನು ೯/೧೧ ರ ಈ ಘಟನೆಯು ಅಮೇರಿಕನ್ ಜೀವನದ, ಅಮೇರಿಕನ್ ಪ್ರಜೆಗಳ ಮಾನಸಿಕ ಪ್ರಜ್ಞೆಯ ಮೇಲೆ ಮಾಡಿರಬಹುದಾದ ಪರಿಣಾಮದ ಮೇಲೆ ಒಂದು ವ್ಯಾಖ್ಯಾನವಾಗಿದೆ ಎಂದಷ್ಟೇ ಇಟ್ಟುಕೊಂಡು ಓದಬೇಕು ಎಂದಂತಾಯಿತು. ನಾನು ಮಾಡಿದ್ದು ಅಷ್ಟೇ. ನೀವುಗಳು ಕೂಡ ಹಾಗೆಯೇ ಮಾಡಬೇಕು; ಅಂದರೆ ಮಾತ್ರ ಕತೆಯ ಸ್ವಾರಸ್ಯ ಹೊರಹೊಮ್ಮುತ್ತದೆ.

ಇನ್ನು ಈ ಕತೆಯಲ್ಲಿ ಬರುವ ವಿರೋಧಾಭಾಸಗಳ ನಿರೂಪಣೆಯನ್ನೇ ನೋಡಿರಿ. ಇಡೀ ಅಮೇರಿಕಾವೇ ವಿರೋಧಾಭಾಸಗಳ ಒಂದು ದೊಡ್ಡ ಸಂತೆ ಎಂಬಂತೆ ಕಾಣಿಸುತ್ತದೆ. ಇವು ದೇಶದ ಹವಾಮಾನದಿಂದ ಹಿಡಿದು ಇಲ್ಲಿಯ ಪ್ರಜೆಗಳ ಇತಿಹಾಸ, ಅವರ ನಾಗರಿಕ ಬದುಕು. ಅವರ ಕೌಟುಂಬಿಕ, ಲೈಂಗಿಕ, ಜೀವನ, ದೇಶದ ಸಾಂಸ್ಕೃತಿಕ ಪರಂಪರೆ, ಆಳರಸರು ಮತ್ತು ಆಳಿಸಿಕೊಳ್ಳುವವರ ನಡುವಿನ ಸ್ವಾಮಿ-ಸೇವಕ ತಿರಸ್ಕಾರದಿಂದೊಡಗೂಡಿದ ಭಾವ, ಸಂಬಂಧಗಳ ವರೆಗೆ ಹಬ್ಬಿವೆ. ಇಲ್ಲಿಯ ಬದುಕಿನಲ್ಲಿ ಯಾವುದಕ್ಕೂ ಸ್ಥಿರತೆಯಿಲ್ಲ. ಆದ್ದರಿಂದಲೇ ಈ ಜನರು ತಾವು ಏನೇ ಮಾಡಬೇಕಾಗಿ ಬಂದರೂ, ಏನೇ ಮಾಡಬೇಕಾದರೂ, ಏನೇ ಆಡಿದರೂ ಮಾಡಿದ ಕೆಲಸವು ಪರಿಣಾಮವಲ್ಲಾದರೂ ಸ್ಥಿರತೆಯನ್ನು ತರಬಲ್ಲದು ಎಂಬ ನಂಬಿಕೆಯಿಂದಲೋ ಏನೋ ಎಲ್ಲವನ್ನೂ ಮೊದಲೇ ಅಳೆದು - ಸುರಿದು ಮಾಡುತ್ತಾರೆ. ಅಷ್ಟೇ ಅಲ್ಲ, ಏನು ಮಾಡಬೇಕಾಗಿ ಬಂದರೂ ಆ ಕೆಲಸದ ಪೂರ್ವಾಪರಗಳನ್ನು ಪೂರ್ತಿ, ಸಾಧ್ಯವಿದ್ದಷ್ಟು ೧೦೦ ಕ್ಕೆ ನೂರರಷ್ಟು, ತಿಳಿದುಕೊಂಡೇ ಮಾಡಲೆಣಿಸುತ್ತಾರೆ. ಯಾಕೆಂದರೆ ಜೀವನದಲ್ಲಿ ಯಾವುದರಲ್ಲಿಯೂ ಅನಿಶ್ಚಿತತೆ, ಸಂದಿಗ್ಧತೆ, ಅಸ್ಪಷ್ಟತೆ ಎಂಬುದು ಇರಲೇ ಕೂಡದು ಎಂಬುದು ಇವರ ಅಪೇಕ್ಷೆ. ಉದಾ. ಕೌಟುಂಬಿಕ ಜೀವನದಲ್ಲಿ ಗಂಡ-ಹೆಂಡಿರ ಸಂಬಂಧ. ಈ ಕತೆಯ ಕೇಂದ್ರದಲ್ಲಿರುವ ಪೀಟರ್‌ನನ್ನೇ ತೆಗೆದುಕೊಳ್ಳಿರಿ. ಇವನು ಈಗ ತನ್ನ ಹೆಂಡತಿಯಾಗಿರುವ ಮೋನಿಕಾಳನ್ನು ಮದುವೆಯಾಗುವ ಪೂರ್ವದಲ್ಲಿ ತಮ್ಮ ದಾಂಪತ್ಯದಲ್ಲಿ ಸಾಮರಸ್ಯವಿರುವುದೇ, ಇಲ್ಲವೇ? ಎಂಬುದನ್ನು ಒರೆಗೆ ಹಚ್ಚಲು ಇಬ್ಬರೂ ವಿವಾಹ ಪೂರ್ವದಲ್ಲಿ ಒಂದು "ಒಂದೆರಡು ತಿಂಗಳಾಗುವ ವೇಳೆಗೆ ಮನೆಮಾಡಿ ಒಟ್ಟಿಗೆ ಇರತೊಡಗಿದರು...... ಪ್ರೀತಿಯೇ ಸ್ಥಿರವಾಗಿದೆ ಎಂದು ಇಬ್ಬರೂ ತಿಳಿಯುತ್ತಿದ್ದಂತೆ ಮದುವೆ

ಯಾವರು. .... ಅವರು ಎಷ್ಟು ಅನ್ಯೋನ್ಯವಾಗಿದ್ದಾರೆಂದರೆ ಗೆಳೆಯ (ಅವರನ್ನು) ಲವ್ ಬರ್ಡ್ಸ್ ಎಂದು ಕರೆಯುತ್ತಿದ್ದರು. ಕೆಲವರು ಛೇಡಿಸಲೆಂದೇ 'ಅವಳಿ ಶಿಖರಗಳು" ಎನ್ನುತ್ತಿದ್ದರು" ಅವಳೀ ಶಿಖರಗಳ ಈ ರೂಪಕವು ಧ್ವಂಸವಾಗಲಿರುವ ಅಥವಾ ಈಗಾಗಲೇ ಧ್ವಂಸವಾದ ನ್ಯೂಯಾರ್ಕ್ ಟ್ರೇಡ್ ಸೆಂಟರ್‌ನ ಅವಳೀ ಶಿಖರಗಳಿಗೆ ಪ್ರತೀಕವಾಗಿದೆ. ಆದರೆ ಈಗ ಪೀಟರ್ ಮತ್ತು ಮೋನಿಕಾರ ದಾಂಪತ್ಯಕ್ಕೆ ಏನೇನೊ ಅಡ್ಡಗಾಲು ಬಂದಿದೆ. ಇದು ಮನುಷ್ಯರ ಸಂಬಂಧವ ಬಗ್ಗೆ. ಆದರೆ ಪ್ರಾಕೃತಿಕವಾಗಿಯೂ ಈ ದೇಶವು ನಿಗೂಢವಾಗಿದೆ. ಕತೆಯ ಪ್ರಾರಂಭದಲ್ಲಿ ಬರುವ ಸ್ಯಾನ್‌ಫ್ರ್ಯಾನ್ಸಿಸ್ಕೋದ ಹವಾಮಾನದ ವರ್ಣನೆಯನ್ನೇ ತೆಗೆದುಕೊಳ್ಳಿರಿ.

"ಈ ಪಟ್ಟಣ ಹೆಣ್ಣಿನಂತೆ ಮೂಡಿ (Moody). ಅರ್ಥಮಾಡಿಕೊಳ್ಳುವುದು ಅಸಾಧ್ಯ. ಅರ್ಥವಾದಂತಿದ್ದರೂ ಅರ್ಥವಾಗಿರುವುದಿಲ್ಲ. ಶಾಂತ ಮಹಾಸಾಗರದಂತೆ ನಿಗೂಢ. ವಿಚಿತ್ರವಾದರೂ ತೀರದ ಆಕರ್ಷಣೆ."

ಭೌಗೋಲಿಕವಾಗಿ ಅಮೇರಿಕಾವು ಶಾಂತ ಮಹಾಸಾಗರದಿಂದ ಸುತ್ತುವರೆಯಲ್ಪಟ್ಟಿದೆ ಯಾವರೂ ಸಾಗರದಲ್ಲಿ ಕ್ಷೋಭೆಯ ಕ್ಷಣಗಳು ಇದ್ದೇ ಇರುತ್ತವಲ್ಲವೆ? ಹಾಗಾದರೆ, "ಸಮುದ್ರವಸನೇ ದೇವಿ ಪರ್ವತಸ್ತನ ಮಂಡಿತೇ, ವಿಷ್ಣು ಪತ್ನಿ ನಮಸ್ತುಭ್ಯಂ ಪಾದಸ್ಪರ್ಶ್ಯಮ್ ಕ್ಷಮಸ್ವ ಮೇ" ಎಂದು ಪ್ರಕೃತಿಯು ಈ ನಿಗೂಢವು ಅರ್ಥದ ಅಳತೆಗೋಲನ್ನು ಮೀರಿದ್ದೆಂದು ಅರಿತುಕೊಂಡು ಅದರ ಬಗ್ಗೆ ಪೂಜ್ಯ ಭಾವನೆಯಾದರೂ ಬೇಡವೇ? ಇಲ್ಲ ಬದಲಾಗಿ, ಪ್ರಕೃತಿಯ ಸ್ಥಿತ್ಯಂತರಗಳನ್ನು ಮನುಷ್ಯನ ಕಾಮಕ್ಕೆ ಅಳವಡಿಸಿಕೊಳ್ಳುತ್ತಾರೆ. ಹೇಗೆ ಎಂಬುದಕ್ಕೆ ಸಾಕ್ಷಿಯಾಗಿ ಸ್ಯಾನ್‌ಫ್ರ್ಯಾನ್ಸಿಸ್ಕೋದ ಅವಳಿ ಶಿಖರಗಳ ಬಗ್ಗೆ ಪೀಟರ್ ಹೇಳುವ ಸ್ಥಳ ಪುರಾಣವನ್ನೇ ಕೇಳಿರಿ:

"ಇಲ್ಲಿಯ (Red) ಇಂಡಿಯನ್ ರ ಜನಪದ ಕತೆಯ ಪ್ರಕಾರ ಈ ಅವಳೀ ಶಿಖರಗಳು ಮುಂಚೆ ಒಂದೇ ಆಗಿದ್ದುವಂತೆ., ಅವು ಪ್ರೇಮಿಗಳು. ಒಂದೇ ಜೀವ, ಒಂದೇ ದೇಹ; ಮುಂದೆ ಗಂಡ ಹೆಂಡರಾದುವು. ಅವರಿಬ್ಬರಲ್ಲಿ ಮತ ಬೇಧ ಹುಟ್ಟಿ ಇಬ್ಬರೂ ಒಂದೇ ಸಮನೆ ವಾದ ಮಾಡಹತ್ತಿದರು. ವಾದ ನಿಲ್ಲಲಿಲ್ಲ. ಸಿಟ್ಟಿಗೆದ್ದ ದೇವರು ಮಿಂಚು ಖಡ್ಗದಿಂದ ಅವರನ್ನು ಸೀಳಿದ. ಈಗ ಅವರಿಬ್ಬರೂ ಬೇರೆಯಾಗಲು ನೋಡುತ್ತಿದ್ದಾರೆ ಗೊತ್ತಾ?.... ಗಂಡ ಹೆಂಡಿರ ಕತೆ ಹೇಳಿದ ಪೀಟರ್ ನಿಟ್ಟುಸಿರಿಟ್ಟು ಮೌನಿಯಾದ... ಅವನ ಮಾತಿನ ಧಾಟಿಯಲ್ಲಿ ಒಂದು ರೀತಿಯ ಭ್ರಮನಿರಸನ ವಿಷಾದವಿತ್ತೇ? ಕೊನೆಗೆ ಇಷ್ಟೇ ಎಂಬ ಧೋರಣೆಯಿತ್ತೇ?"

ಪೀಟರ್ ಹೇಳಿದ ಈ ಸ್ಥಳ ಪುರಾಣಕ್ಕೂ ಅವನ ದಾಂಪತ್ಯ ಜೀವನಕ್ಕೂ ಇರುವ ಹೋಲಿಕೆ ಸ್ಪಷ್ಟವೇ ಇದೆ. ಇಲ್ಲಿಯ ಗಂಡು ಹೆಣ್ಣಿನ ನಡುವಿನ ಲೈಂಗಿಕ ಜೀವನವಾದರೂ ಎಂಥದು?

ಎಲ್ಲರ್ಗೂ ಮುಕ್ತಸ್ಥಾನವಾದ ಈ ಜೀವನದಲ್ಲಿ ಪ್ರಕೃತಿ ಸಹಜ ಆಸೆ ಅಪೇಕ್ಷೆ ಕ್ರಿಯೆಗಳಿಗೆ ಇಲ್ಲಿ ಕಿಮ್ಮತ್ತಿಲ್ಲ.

"ಇದು ಕ್ಯಾಲಿಫೋರ್ನಿಯಾ, ಅದಕ್ಕೆ ನಮ್ಮಂಥವರು ಗೇ (Homosexuals) ಅತಿಯಾಗಿ ತಲೆ ಉಪಯೋಗಿಸುವವರು, ವಕ್ರರು, ತಲೆ ಹಿಡುಕರು, ಪುಂಡರು, ಎಲ್ಲರೂ ಸಂಯುಕ್ತ ಸಂಸ್ಥಾನವೆಲ್ಲಾ ಕ್ಯಾಲಿಫೋರ್ನಿಯಾ ಆಗುವ ಕನಸು ಕಾಣುತ್ತೇವೆ." ಅವನ (ಅಂದರೆ ಪೀಟರ್‌ನ) ಮಾತಿನಲ್ಲಿ ಗೇಗಳ ಬಗ್ಗೆ ವ್ಯಂಗ್ಯವಿತ್ತೇ ಎಂಬುದು ನನಗೆ ಇಂದಿಗೂ ಒಗಟು."

ಅಮೇರಿಕನ್ನರ ಈ ವಿಕೃತಿಗೆ ಇನ್ನೊಂದು ನಿದರ್ಶನವೆಂದರೆ ಕವಿ ಅಲನ್ ಗಿನ್ಸ್‌ಬರ್ಗ್‌ನನ್ನು ಹೇಗೆ ತಮ್ಮ ಸಂಸ್ಕೃತಿಯ ಪ್ರತೀಕವಾಗಿಸಿಕೊಂಡಿದ್ದಾರೆ ಎಂಬುದು. ಗಿನ್ಸ ಬರ್ಗ್‌ನು (೧೯೨೬-೧೯೯೭) ಬೀಟ್ಸ್ ಜನಾಂಗ ಮತ್ತು ಮುಂದೆ ಬಂದ ಪ್ರತಿ ಸಂಸ್ಕೃತಿಯ ಪ್ರತೀಕವಾಗಿ ಮೆರೆದ ಕವಿ. ಮಿಲಿಟರಿ ದಬ್ಬಾಳಿಕೆ, ಆರ್ಥಿಕ ಸಂಸ್ಕೃತಿಯ ವಿರುದ್ಧ ಮತ್ತು ಲೈಂಗಿಕತೆ ಸಮಾನತೆ ಇವುಗಳಿಗಾಗಿ ಹೋರಾಡಿದವ. ಅವನು ೧೯೫೬ರಲ್ಲಿ ಪ್ರಕಟಿಸಿದ (Howls) (ಒದರು- ಚೀರು, ನಾಯಿಯಂತೆ ಬೊಗಳು, ಇತ್ಯಾದಿ) ಎಂಬ ಕವನದಿಂದ ಪ್ರಸಿದ್ಧಿಗೆ ಬಂದ. ಈ ಕವಿತೆಯಲ್ಲಿ ಆತನು ಇನ್ನೂ ಹಲವು ವಿಷಯಗಳ ಜೊತೆಗೆ ಅಮೇರಿಕನ್ ಸರಕಾರದ ವಿಧ್ವಂಸಕ ಮಿಲಿಟರೀ ಪ್ರವೃತ್ತಿಯನ್ನೂ ಬಂಡವಾಳಶಾಹೀ ಆರ್ಥಿಕ ವ್ಯವಸ್ಥೆಯನ್ನೂ ಖಂಡಿಸಿದ್ದಾನೆ. ಈ ಕವಿತೆಯಿಂದಾಗಿ ಅಶ್ಲೀಲತೆಯ ಆರೋಪದ ಮೇರೆಗೆ ಅವನು ಕೋರ್ಟಿನ ಕಟ್ಟೆಯನ್ನು ಹತ್ತ ಬೇಕಾಯಿತು. ಏಕೆಂದರೆ ಏಕೆಂದರೆ ಆ ಕವಿತೆಯಲ್ಲಿ ಅವನು ಸಲಿಂಗರತಿಯನ್ನು ಪುಷ್ಟೀಕರಿಸಿದ್ದ. ಆಗ ಅಮೇರಿಕೆಯಲ್ಲಿ ಸಲಿಂಗರತಿಯು ಇನ್ನೂ ಕಾಯದೆ ಪ್ರಕಾರ ಶಿಕ್ಷಾರ್ಹವಾಗಿದ್ದಿಲ್ಲ. ಗಿನ್ಸ್ ಬರ್ಗ್‌ನು ಸ್ವತಃ ಹೋಮೋಸೆಕ್ಸುವೆಲ್ ಆಗಿದ್ದ. ಈ ಕವಿಯ ಕಾವ್ಯವೈಖರಿಯ ಸ್ಯಾಂಪಲ್ ಎಂದು ಅಮೇರಿಕಾದಲ್ಲಿಯೇ ಜಗತ್ ಪ್ರಸಿದ್ಧವಾದ ಅವನ Howl ಕವಿತೆಯ ಪ್ರಾರಂಭವಾದ ಈ ಕೆಲವು ಸಾಲುಗಳನ್ನು ನಿಮ್ಮ ಆಸ್ವಾದನೆಗಾಗಿ ಈ ಕೆಳಗೆ ಕೊಟ್ಟಿದ್ದೇನೆ.

> (I) saw the best minds of my generation destroyed by mad ness, starving hysterical naked.
>
> dragging themselves through the negro streets at dawn, looking for an angry fix,
>
> Angel - headed hipsters burning for the ancient heavenly connection to the starry dynamo in the machinery of night.

ಈ ಬಂಡಾಯ ಕವಿಯು ಅಮೇರಿಕಾದಲ್ಲಿ ಸಾಂಸ್ಕೃತಿಕವಾಗಿ ಎಷ್ಟು ಮಹತ್ವದವನಾಗಿದ್ದ ನೆಂದರೆ ಅವನು ಜೀವಮಾನವೆಲ್ಲ ತನ್ನ ಅಧೋರೋಮಗಳನ್ನು ಚೀಲದಲ್ಲಿ ತುಂಬಿ, ತುಂಬಿ ಕೂಡಿಸಿಟ್ಟುಕೊಂಡಿದ್ದನು. "ಆ ಚೀಲ ಮತ್ತೆ ಅವನ ಇತರ ವಸ್ತುಗಳು ಈಗ ಸ್ಟ್ಯಾನ್ ಫರ್ಡ್ ವಿಶ್ವವಿದ್ಯಾನಿಲಯದ ಆರ್‌ಕೈವ್ಸ್‌ನಲ್ಲಿ (ಸಂಗ್ರಹಾಲಯದಲ್ಲಿ)ವೆ!! ಸಾಂಸ್ಕೃತಿಕ ವಿಕೃತಿಗೆ ಇದಕ್ಕಿಂತ ಬೇರೆ ಉದಾಹರಣೆ ಇನ್ನೇನು ಬೇಕು?

ಅಮೇರಿಕಾ ಸರಕಾರವು ತನ್ನ ಪ್ರಜೆಗಳಿಗೆ ಎಲ್ಲ ರೀತಿಯ ಸ್ವಾತಂತ್ರ್ಯವನ್ನು ಕೊಟ್ಟಿದೆ. ಅದೊಂದು ಮುಕ್ತದೇಶವೆನ್ನುವುದು ಎಷ್ಟರ ಮಟ್ಟಿಗೆ ಖರೇ ಎನ್ನುವುದನ್ನು ತಿಳಿಯಲಪೇಕ್ಷಿಸುವಿರಾ?

ಮನೆಯ ಹತ್ತಿರ ಕಾರಿನಿಂದ ಇಳಿವಾಗ ಪೀಟರ್ ಮನೆಯ ಬೀಗದ ಕೈ ನನ್ನ ಕೈಗೆ ಕೊಟ್ಟು "ನಾಳೆ ಒಂದು ಬೃಹತ್ ಪೀಸ್ ಮಾರ್ಚ್ ಇದೆ. ನಿಮಗೆ ಬೇರೆ ಅವಸರದ ಕೆಲಸವಿಲ್ಲದಿದ್ದರೆ ಬನ್ನಿ ಹೋಗೋಣ" ಎಂದ.

"ಶಾಂತಿ ಯಾತ್ರೆ ಎಂದರೆ?" ಎಂದೆ.

"ಒಂದು ರೀತಿಯ ಪ್ರತಿಭಟನೆ ಎಂದಿಟ್ಟುಕೋ. ಪ್ರತಿಭಟನೆ ಎಂಬ ಪದ ನಾವು ಉಪಯೋಗಿಸುವುದಿಲ್ಲ. ಶಾಂತಿಗಾಗಿ ಎನ್ನುತ್ತೇವೆ" ಎಂದ.

ಅಮೇರಿಕೆಯ ಇನ್ನೊಂದು ವಿಪರ್ಯಾಸವನ್ನು ಈ ಪ್ರವಾಸಿ ದಂಪತಿಗಳು ಅನುಭವಿಸುತ್ತಾರೆ. ಅದೇ, ಅಮೇರಿಕಾದ ಆಳರಸರ ಸ್ವಾತಂತ್ರ್ಯದ ಪರಿಕಲ್ಪನೆ! ನ್ಯೂಯಾರ್ಕ್‌ದ ಮ್ಯಾನ್‌ಹ್ಯಾಟನ್‌ದ ಸಮುದ್ರ ತೀರದಲ್ಲಿ The Statue of Liberty (Liberty Enligtenin, the World) ಎಂಬ ಪ್ರಸಿದ್ಧ ಪ್ರತಿಮೆ ಇದೆ. ಅದು ಫ್ರೆಡರಕ್ ಆಗಸ್ಟ್ ಬಾರ್ತೋಲ್ಡಿ ಎಂಬ ಪ್ರಖ್ಯಾತ ಫ್ರೆಂಚ್-ಇಟ್ಯಾಲಿಯನ್ ಶಿಲ್ಪಿಯ ಕಲಾಕೃತಿ. ರೋಮನ್ ಸ್ವಾತಂತ್ರ್ಯ ದೇವತೆಯಾದ La Libertas ಪ್ರತಿಮೆ. ಪ್ರತಿಮೆಯ ಬಲಗೈಯಲ್ಲಿ ಸ್ವಾತಂತ್ರ್ಯದ ಸಂಕೇತವಾದ ದುಂದಿ ಇದೆ. ಎಡಗೈಯಲ್ಲಿ ಸ್ವಾತಂತ್ರ್ಯವನ್ನು ಘೋಷಿಸಿದ ದಿನಾಂಕ (ಜುಲೈ ೪, ೧೭೭೬) ತೋರಿಸಿದ ಲೇಖನವಿದೆ. ಪ್ರತಿಮೆಯ ಕಾಲಲ್ಲಿ ಹರಿದ ಸರಪಳಿಯೊಂದು ಇದೆ. ಒಟ್ಟಿನಲ್ಲಿ, ಈ ಪ್ರತಿಮೆಯು ಸಂಯುಕ್ತ ರಾಷ್ಟ್ರದ ಸ್ವಾತಂತ್ರ್ಯ ಮತ್ತು ವಿದೇಶದಿಂದ ಈ ದೇಶದಲ್ಲಿ ನೆಲೆಸಲು ಬರುವವರಿಗೆ ಮುಕ್ತದ್ವಾರದ ಸಂಕೇತವೂ ಆಗಿದೆ. ಈ ನಮ್ಮ ಕತೆಯಲ್ಲಿ ಬರುವ ಭಾರತೀಯ ದಂಪತಿಗಳು ಈ Liberty Statusನ ನೋಡಲು ಹೋದಾಗಿನ ಅವರ ಅನುಭವವೇನು? ಅದನ್ನು ಆ ಗೃಹಸ್ಥ ಪೀಟರ್‌ಗೆ ಹೀಗೆ ಬಣ್ಣಿಸುತ್ತಾನೆ.

"ಪೀಟರ್, ನಿನಗೆ ಗೊತ್ತ? ಸ್ವಾತಂತ್ರ್ಯ ಪ್ರತಿಮೆ ನೋಡಲು ಹೋಗಿದ್ದೆವು. ಅದು ನಿಜವಾಗಿ ಒಂದು ವ್ಯಂಗ್ಯದ ಸಂಕೇತ ಎನಿಸಿತು. ಹೆಸರು ಸ್ವಾತಂತ್ರ್ಯ ಪ್ರತಿಮೆ, ನೋಡಲು ಬರುವವರನ್ನು ಕೈದಿಗಳನ್ನು ತಲಾಷು ಮಾಡುವಂತೆ ತಲಾಷು ಮಾಡುತ್ತಾರೆ. ಅವರ ಸ್ವಾತಂತ್ರವನ್ನು ಅಪಹರಿಸಿ ದೈನ್ಯರನ್ನಾಗಿಸಿದ ಮೇಲೆ ನೋಡಲು ಬಿಡುತ್ತಾರೆ" ಎಂದೆ.

"ನೀನು ಹೇಳಿದ್ದು ಸರಿ. ಅದು ಈಗ ನಮ್ಮ ದೇಶವನ್ನೇ ಪ್ರತಿನಿಧಿಸುವ ದೊಡ್ಡ ವ್ಯಂಗ್ಯವಾಗಿ ಬಿಟ್ಟಿದೆ" ಎಂದ ಪೀಟರ್.

ಪೀಟರ್‌ನು ಸಾರ್ವಜನಿಕ ಘಟನೆಗಳ ಸಾಕ್ಷಿಚಿತ್ರ ತಯಾರಿಸುವುದನ್ನು ತನ್ನ ಹವ್ಯಾಸವಾಗಿಸಿಕೊಂಡಿದ್ದಾನೆ. ಅವನು ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ನಡೆದ ಬೃಹತ್ ಪ್ರತಿಭಟನಾ ಪ್ರದರ್ಶನದ ಸಾಕ್ಷ್ಯ ಚಿತ್ರವೊಂದನ್ನು ತಯಾರಿಸಿದ್ದ. ಚಿತ್ರ ತಯಾರಿಸಿದ ಮಾರನೆಯ ದಿನದ ಪತ್ರಿಕೆಯಲ್ಲಿ ಬಂದ ವರದಿ: ಜನ ಪೋಲೀಸರ ಮೇಲೆ ಹಲ್ಲೆ ಮಾಡಿದ್ದರಿಂದ ಗುಂಪನ್ನು ಚದುರಿಸಲು ಪೋಲೀಸರು ಲಾಠಿ ಪ್ರಹಾರ ಮಾಡಿದರು. ಒಟ್ಟು ನಲವತ್ತು ಗಲಭೆಕೋರರನ್ನು ಬಂಧಿಸಲಾಗಿದೆ. ಪೀಟರ್ ಈ ವರದಿಯನ್ನು ಸಾಕ್ಷ್ಯ ಚಿತ್ರದ ಕೊನೆಯಲ್ಲಿ ಸೇರಿಸಿದ್ದ.

ಇನ್ನೂ ಒಂದು ವೈಚಿತ್ರ್ಯವನ್ನು ನೋಡಿರಿ. ರ್‍ಯಾಲಿಗೆ ಪೀಟರ್, ಮತ್ತು ಈ ಭಾರತೀಯ ದಂಪತಿಗಳು ಹೊರಡುತ್ತಾರೆ ಒಂದು ಬಸ್ಸಿನಲ್ಲಿ.

ಬಸ್ಸಿನಲ್ಲಿ ಕೂತು ಅತ್ತಿತ್ತ ಕಣ್ಣಾಡಿಸುತ್ತಿದ್ದಾಗ ಪೀಟರ್ ನನ್ನ ಗಮನವನ್ನು ಎದುರು ಸೀಟಿನ ಮೇಲ್ಭಾಗದಲ್ಲಿ ಅಂಟಿಸಿದ್ದ ಪೋಸ್ಟರಿನತ್ತ ಸೆಳೆದ... "ನಿಮ್ಮ ಯೋಗಕ್ಷೇಮ ನಮಗೆ ಮುಖ್ಯ" ಎಂದಿತ್ತು. ಓದಿದ ಮೇಲೆ ಪೀಟರ್‌ನತ್ತ ನೋಡಿದೆ. ಪೀಟರ್ ಕಣ್ಣು ಮಿಟುಕಿಸಿ(ದ) ... ನಾವು ಬಸ್ಸಿನಿಂದ ಇಳಿದು ಒಂದಿಷ್ಟು ದೂರ ನಡೆದು ಪಾರ್ಕಿಗೆ ಬಂದೆವು. ಪೀಟರ್ ಪಾರ್ಕಿನ ಗೇಟು ದಾಟುತ್ತಿದ್ದಂತೆಯೇ ಎಡಬದಿಯ ಕಾಲುದಾರಿಯಲ್ಲಿ ಮುಂದುವರೆದ. ಅಲ್ಲಿ ಕಾಲುದಾರಿಯ ಬದಿಯಲ್ಲಿ ಹಸಿರು ಹುಲ್ಲಿನ ಮೇಲೆ ಮಲಗಿ, ನಿಂತು ಕುಂತು ಸಿಗರೇಟು ಸೇದುತ್ತ, ಹರಟುತ್ತ ಬಂದವರ ಬಳಿ ಮುಖ ನೋಡಿದೊಡನೆ "ಒಂದು ಡಾಲರ್ ಪ್ಲೀಸ್" ಎನ್ನುತ್ತ, ಅವರ ಮುಂದೆ ಹೋದರೆ 'ಬಹುಶಃ ಮುಂದಿನ ಸಾ(ಬಾ)ರಿ " ಎನ್ನುತ್ತ ತಮ್ಮ ಲೋಕದಲ್ಲಿ ಲೀನವಾದವರು. ಚಳಿ, ಮಳೆ ಗಾಳಿಗೆ ಮೈಯೊಡ್ಡಿದವರು, ಯಾರಿಗೂ ಬೇಡವಾದವರು. ಹೋಮ್ ಲೆಸ್ ಎಂದು ಕರೆಸಿಕೊಳ್ಳುವ ಈ ಜನ ತಮ್ಮ ದೇ ಪ್ರಪಂಚ ನಿರ್ಮಿಸಿಕೊಂಡವರು ಗಾಳಿಯಲ್ಲಿ ಎಲ್ಲೆಲ್ಲೂ ಮ್ಯಾರಿವಾನದ ವಾಸನೆ.

"ಕೊಳಕು ಗಬ್ಬು" ಎಂದಳು ನೀರಜಾ. ತಟ್ಟನೆ ಪೀಟರ್ ನನ್ನತ್ತ ತಿರುಗಿ "ಇವರೆಲ್ಲ ಹೋಮ್ ಲೆಸ್ ಆಗಿರುವುದು ಸ್ವಂತ ಆಯ್ಕೆಯಿಂದ.(by choice) ಎಂದ.

ನನ್ನಲ್ಲಿ ಸಹಜವಾಗಿ ಮೂಡಿದ ಪ್ರತಿಕ್ರಿಯೆ 'ನಾನ್‌ಸೆನ್ಸ್'.

ಒಂದು ಕ್ಷಣ ಮೌನವಾಗಿದ್ದ ಪೀಟರ್ ನಗುತ್ತ "ಅದು ನನ್ನ ಅಭಿಪ್ರಾಯ ಖಂಡಿತಾ ಅಲ್ಲ. ನಮ್ಮ ದೇಶದ ಅಧ್ಯಕ್ಷರಾಗಿದ್ದವರೊಬ್ಬರ ನುಡಿಮುತ್ತು" ಎಂದ.

"ಅಧ್ಯಕ್ಷರು ಅಷ್ಟು ದಡ್ಡರಾಗಿರುತ್ತಾರ"? ಎಂದೆ.

“ಯಾಕೆ, ನಿಮ್ಮ ದೇಶದಲ್ಲಿ ಇಲ್ಲವೆ?” ಎಂದ . ಹೌದಲ್ಲ, ನಾನೇಕೆ ಇಷ್ಟು ದಡ್ಡ ಪ್ರಶ್ನೆ ಕೇಳಿದೆ ಎನಿಸಿತು”

ಕತೆಗಾರ ರಾಘವ ಅವರ ನಿರಪೇಕ್ಷಭಾವವು ನಿಜವಾಗಿಯೂ ಮೆಚ್ಚಬೇಕಾದದ್ದೇ!

ಅಮೇರಿಕಾದ ಖಾಸಗೀ ಮತ್ತು ಸಾರ್ವಜನಿಕ ಜೀವನದಲ್ಲಿ ಅಷ್ಟೊಂದು ವಿರೋಧಾಭಾಸ ಗಳಿದ್ದರೂ ಅಲ್ಲಿಯ ಜನರು ತಮ್ಮ ಜೀವನದಲ್ಲಿ ಹಲವು ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದಾರೆ. ಈ ರ್‍ಯಾಲಿಗೆ ಬಂದವರಲ್ಲಿ ಒಬ್ಬನು ಕಥಾನಿರೂಪಕನ ಹೆಂಡತಿಯನ್ನು ಕೇಳುತ್ತಾನೆ.

‘ಇಂಡಿಯಾದಿಂದ’?

‘ಹೌದು’ ಎಂದಳು.

“ನಿಮ್ಮ ಲ್ಲೂ ಬಾಂಬ್ ಸ್ಫೋಟ, ವಿಮಾನ ಅಪರಹಣ ಆಗಿದೆ ಎಂದು ಕೇಳಿದ್ದೇನೆ. ದೇಶದ ಭದ್ರತೆಯ ನೆವದಲ್ಲಿ ಸ್ವಾತಂತ್ರ್ಯ ಹರಣ ಆಗಿಲ್ಲವೇ?” ಎಂದ.

‘ವಿಮಾನ ನಿಲ್ದಾಣದಲ್ಲಿ ಮಾತ್ರ’ ಎಂದೆ.

“ಹಾಗಾದರೆ ಅದಿನ್ನೂ ಔಟ್ ಸೋರ್ಸ್ (Out source) ಆಗಿಲ್ಲ. ಸಂತೋಷ ” ಎಂದವನೇ ಅಲ್ಲಿಂದ ಸರಿದ”.

ಈಗ ಕತೆಯ ಮುಖ್ಯ ಉದ್ದೇಶವನ್ನು ನಿರೂಪಿಸುವ ಈ ಕೆಳಗಿನ ಪರಿಚ್ಛೇದವನ್ನು ಪರೀಕ್ಷಿಸಿರಿ.

ಈ ರ್‍ಯಾಲಿಯಲ್ಲಿ “ಮೊದಲು ಎದುರಾದದ್ದು ನಾಲ್ಕಾರು ಸರತಿ ಸಾಲುಗಳು. ನಡುವೆ ಹೆಂಗಸರ ಸಾಲು ಒಂದಿತ್ತು. ಎಲ್ಲರೂ ಸಾವಧಾನದಿಂದ ತಮ್ಮ ತಮ್ಮ ಸರದಿಗಾಗಿ ಸ್ವಲ್ಪ ದೂರದಲ್ಲಿದ್ದ ತಾತ್ಕಾಲಿಕ ಮೂತ್ರಿಗಳ ಮುಂದೆ ಕಾಯುತ್ತಿದ್ದರು. ನೀರಜಾ ಗಟ್ಟಿಯಾಗಿ ನಕ್ಕಳು. “ಮೂತ್ರ ಮಾಡುವುದಕ್ಕೂ ಎಂತಹ ಶಿಸ್ತು ಕಲಿತಿದ್ದಾರೆ ಈ ಜನ. ನಮ್ಮ ಲ್ಲಿಯಾದರೆ ಅದರ ಅಕ್ಕಪಕ್ಕ, ಸುತ್ತಮುತ್ತ ಎಲ್ಲೆಂದರಲ್ಲಿ ನಿಂತು, ಕುಳಿತು ತಮ್ಮ ಜನ ಸ್ವಾತಂತ್ರ್ಯ ಮೆರೆಯುತ್ತಿದ್ದರು.” ಎಂದಳು.

“ಹೆಂಗಸರನ್ನು ನೋಡು ಎಷ್ಟು ನಿರ್ಭಿಡೆಯಿಂದ ನಿಂತಿದ್ದಾರೆ.” ಎಂದೆ.

ಪ್ರತಿಯೊಂದು ಮಳಿಗೆಯಲ್ಲೂ ಒಂದೊಂದು ದೇಶದ ಇಲ್ಲ ಒಂದೊಂದು ಉದ್ದೇಶದ, ಅಭಿಪ್ರಾಯಗಳ ಹಂಚಿಕೆ ಕರಪತ್ರಗಳು, ಗೇ ಹಕ್ಕುಗಳು, ಸ್ತ್ರೀ ವಿಮೋಚನಾ ಚಳುವಳಿ, ಸಸ್ಯಾಹಾರ, ಪರಿಸರವಾದ, ಮಾರ್ಕ್ಸ್‌ವಾದ, ನಿರೀಶ್ವರವಾದ, ದೇವರು, ಮನಶ್ಶಾಂತಿ

(Anti-Christ) ಮತ್ತು ರಾಜಕೀಯ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಚಿಲಿ ಹೈತಿ, ಪ್ಯಾಲೇಸ್ಟೈನ್ ಅಫಘಾನಿಸ್ತಾನ್ ಇರಾಕ್ ವಿಮೋಚನೆ ಇಸ್ರೇಲ್ ಅಮೇರಿಕಾ ಸರಕಾರದ ಖಂಡನೆ ಇತ್ಯಾದಿ. ಮುಖ್ಯವಾಗಿ ಪ್ರತಿಯೊಂದು ಕಡೆಯಿಂದಲೂ ಬರುತ್ತಿದ್ದಂತೆ ಸಂದೇಶವೆಂದರೆ 'ಆಕ್ರಮಣ ಸಾಕು' ಶಾಂತಿ ಬೇಕು. "ದೊಡ್ಡ ಬ್ಯಾನರೊಂದು ನನ್ನ ಗಮನ ಸೆಳೆಯಿತು. ತೆರಿಗೆ ಹಣ ಜನರ ಹಿತಕ್ಕೆ ಯುದ್ಧಯಂತ್ರಕ್ಕಲ್ಲ..."

ಈ ದೇಶದಲ್ಲಿ ಎಲ್ಲವೂ ಚೆನ್ನಿಲ್ಲ. ಎಷ್ಟೆಲ್ಲ ಪ್ರತಿಭಟನೆ. ಶಾಂತಿಗಾಗಿ ಬೇಡಿಕೆ, ಅಸಮಾಧಾನ ಸಂಕಟ. ಒಂದೇ ಎರಡೇ. ಎಲ್ಲಕ್ಕೂ ಈ ಸ್ಥಳ ವೇದಿಕೆಯಾಗಿತ್ತು. ಆದರೂ ನಾವೆಲ್ಲ (ಅಂದರೆ, ಭಾರತೀಯರು ?) **ನಮ್ಮ ಮನಸ್ಸಿನಲ್ಲಿ (ಈ ದೇಶ) ಎಂತಹ ಸುಂದರ ಸ್ವರ್ಗವೆಂಬ ಕನಸು ಕಟ್ಟಿಕೊಂಡಿದ್ದೇವೆ, ಇಲ್ಲಿಯ ನಾಗರಿಕರಾಗಲು ಬಯಸುತ್ತೇವೆ ಎನಿಸಿತು.** (ಶಬ್ದಗಳು ಎದ್ದು ಕಾಣುವಂತೆ ಮಾಡಿದ್ದು ನಾನು - ಬಿ. ಟಿ. ದೇ.)

ಬಲಗಡೆಯ ಬದಿಯಲ್ಲಿ ಒಂದಿಷ್ಟು ಪೋಲಿಸರು ನಿಂತಿದ್ದರು. ಅತ್ತಿತ್ತ ನೋಡುತ್ತ, ಫಳಾಯಿಸುತ್ತ ಒಬ್ಬ ಅಧಿಕಾರಿ ವಿಡಿಯೋ ಚಿತ್ರ ತೆಗೆಯುತ್ತಿದ್ದ. ಅಲ್ಲಿಂದ ಸ್ವಲ್ಪ ಮುಂದೆ ದೊಡ್ಡ ದೊಡ್ಡ ಕಪ್ಪು ಹಲಗೆಗಳು. ಹತ್ತಿರ ಹೋದೆ. ಅವುಗಳಲ್ಲಿ ಪೋಲೀಸ್ ದೌರ್ಜನ್ಯಕ್ಕೆ ಒಳಗಾಗಿ ಸತ್ತವರ ಹೆಸರು ವಿಳಾಸಗಳು, ವಯಸ್ಸು ಕುತೂಹಲದಿಂದ ನೋಡುತ್ತ ಹೋದೆ..... ನಮ್ಮ ದೇಶದಲ್ಲಿ ಹೀಗೆ ಪಟ್ಟಿ ಮಾಡಿ ಪೋಲೀಸರ ಮುಂದೆ ಹಾಕಲು ಸಾಧ್ಯವೇ ಎಂದೆಲ್ಲಾ ಯೋಚಿಸುತ್ತಾ ನನ್ನನ್ನ ನಾನು ಮರೆತು ನಿಂತಿದ್ದೆ. ಕಣ್ಣು ಪಟ್ಟಿಯ ಮೇಲೆ ನೆಟ್ಟಿತು. ನೀರಜಾ ನನ್ನ ಬಳಿ ಬಂದು ನಿಂತು, "ನಿಮಗೆ ಬುದ್ಧಿಯಿಲ್ಲ; ಪೋಲೀಸಿನವರು ನಿಮ್ಮ ಕಡೆಯೇ ಕ್ಯಾಮರಾ ಕೇಂದ್ರೀಕರಿಸಿ ಚಿತ್ರೀಕರಣ ಮಾಡುತ್ತಿದ್ದರು ಗೊತ್ತಾ? ಎಂದು ಉಸುರಿದಳು.

ಅಷ್ಟೇನಾ? ಎಂದೆ.

ಅರೆಸ್ಟ್ ಮಾಡಿದರೆ ಗೊತ್ತಾಗುತ್ತದೆ. ಹೇಳ ಹೆಸರಿಲ್ಲದೆ ಹೋಗಿಬಿಡ್ತೀರಾ! ಆರಾಮವಾಗಿ ದೇಶ ಸುತ್ತಿ ನಮ್ಮೂರು ಸೇರಿಕೊಳ್ಳುವುದು ಬಿಟ್ಟು ನಿಮಗೆ ಇಲ್ಲದ ಉಸಾಬರಿ" ಎಂದಳು. ಒಂದು ಕ್ಷಣ ತಡೆದು "ಥತ್ ನಾವಿಲ್ಲಿಗೆ ಬರಲೇ ಬಾರದಾಗಿತ್ತು" ಎಂದವಳೇ ತಾನು ಮೊದಲು ಕುಳಿತಿದ್ದ ಸ್ಥಳದಲ್ಲಿ ಕುಳಿತಳು.

ರಾಜಕೀಯ ಸ್ವಾತಂತ್ರ್ಯಕ್ಕಾಗಿ ಸಾರ್ವಜನಿಕವಾಗಿ ಹೋರಾಡುವ ಅಮೇರಿಕನ್ ಪ್ರಜೆಗಳು ಆಳರಸರ ತುಳಿತಕ್ಕೆ ಸಿಕ್ಕು ಒದ್ದಾಡುತ್ತಿದ್ದಾರೆಂಬುದು ಸರ್ವ ವಿದಿತ. ಸ್ಯಾನ್‌ಫ್ರಾನ್ಸಿಸ್ಕೋದ ಈ ಬೃಹತ್ ಮೆರವಣಿಗೆಯಲ್ಲಿಯ ನಡೆದ ಪ್ರಸಂಗವನ್ನು ವೀಕ್ಷಿಸಿದರೆ ಈ ದೇಶದ ಸಾಮಾನ್ಯ ಪ್ರಜೆಗಳು ತಮ್ಮ ರಾಜಕೀಯ, ಸಾಮಾಜಿಕ, ವೈಯಕ್ತಿಕ, ಸ್ವಾತಂತ್ರ್ಯಕ್ಕಾಗಿ ಅದೇಕೆ ಅಷ್ಟು

ಉದ್ವಿಗ್ನರಾಗಿದ್ದಾರೆ? ಎಂಬುದು ಗೊತ್ತಾಗುತ್ತದೆ. ಅಲ್ಲಿ ಕಪ್ಪು ಹೆಣ್ಣು ಮಗಳೊಬ್ಬಳು ತನ್ನ ಕರುಣಾಜನಕ ಕತೆಯನ್ನು ನಿರೂಪಕನಿಗೆ ಹೇಳುತ್ತಾಳೆ. ಆಕೆಯ ಮಗ ಮತ್ತು ಗಂಡ ಇಬ್ಬರೂ ಚಲನಚಿತ್ರವೊಂದನ್ನು ನೋಡಲು ಹೋಗಿದ್ದರಂತೆ. ಆ ಚಿತ್ರವು ಮಾರ್ಟಿನ್ ಲೂಥರ್ ಕಿಂಗ್‌ನ ಭಾಷಣಗಳಿಂದ ಪ್ರೇರಿತನಾದ ಯುವಕನೊಬ್ಬನು ತನ್ನ ಜನರ ಹಕ್ಕುಗಳಿಗೆ ಹೋರಾಡಿ ಯಾವನೋ ದುಷ್ಕರ್ಮಿಯೊಬ್ಬನ ಗುಂಡಿಗೆ ಬಲಿಯಾದ ಕತೆ. ತಂದೆ, ಮಗ ಇಬ್ಬರೂ ಚಿತ್ರಮಂದಿರದಲ್ಲಿ ಇನ್ನೂ ಕುಳಿತಿರುವಾಗಲೇ ಪೋಲೀಸರು ಬಂದು ಅಲ್ಲಿ ಕುಳಿತಿದ್ದ ಎಲ್ಲರನ್ನೂ ಬಂಧಿಸಿ ತೆಗೆದುಕೊಂಡು ಹೋಗಲು ಬರುತ್ತಾರೆ. ಈ ಹುಡುಗ ಮಾತ್ರ ಪೋಲೀಸರ ಮಾತಿಗೆ ಬಗ್ಗದೆ ಕುಳಿತೇ ಇರುತ್ತಾನೆ. ಪೋಲೀಸರು ಹೆದರಿಸಿ ಎಬ್ಬಿಸಲು ಪ್ರಯತ್ನಿಸಿದ್ದಕ್ಕೆ ಇವನು ಅವಾಚ್ಯ ಶಬ್ದಗಳಿಂದ ಬೈಯುತ್ತಾನೆ. ಪೋಲೀಸರಿಗೆ ಇಷ್ಟೇ ಸಾಕು. ಹುಡುಗನನ್ನು ಪಿಸ್ತೂಲಿನಿಂದ ಹೊಡೆದು ಕೊಂದುಬಿಡುತ್ತಾರೆ. ಈ ಘಟನೆಯಿಂದಾಗಿ ಆ ಹುತುಗನ ತಂದೆ ಸ್ಮೃತಿ ಭ್ರಷ್ಟನಾಗುತ್ತಾನೆ. ಅವನ ಹೆಂಡತಿ, ಆ ಕಪ್ಪು ಹೆಣ್ಣುಮಗಳು *"ಇವನನ್ನು ನೋಡು. ಅಂದಿನಿಂದ ಹೀಗೆ ಸತ್ತಿದ್ದಾನೆ. ಹೀಗೇ ಇರುತ್ತಾನೆ. ಊಟ, ತಿಂಡಿ, ನಿದ್ದೆ, ಜಲಭಾದೆಯೆಲ್ಲ ಕನಸಿನಲ್ಲಿಯಿಂತೆ ಮಾಡುತ್ತಾನೆ. ಯಂತ್ರ, ಬರೀ ಯಂತ್ರ, ನನ್ನ ದೇಶದ ಪೋಲೀಸರಷ್ಟು ಕ್ರೂರಿಗಳು ಇಲ್ಲ, ಎಲ್ಲೂ ಇಲ್ಲ......"*

ನಾನು "ಎಲ್ಲ ದೇಶಗಳಲ್ಲೂ ಪೋಲೀಸರು ಒಂದೇ, ಅವರ ಹೇಯ ಕೃತ್ಯಗಳು ಕೂಡ ಒಂದೇ. ...... ನೋಡು, ನಾನು ಇಂಡಿಯಾದಿಂದ ಬಂದವನು. ನನ್ನ ದೇಶಕ್ಕೆ ಹಿಂತಿರುಗಿದ ಮೇಲೆ ನಿನಗಾದ ಅನ್ಯಾಯದ ಕತೆಯನ್ನು ಆದಷ್ಟು ಜನರಿಗೆ ಹೇಳುತ್ತೇನೆ. ಪತ್ರಿಕೆಗಳಿಗೆ ಬರೆಯುತ್ತೇನೆ."

ಆದರೆ ವಿಮರ್ಶಕನಾಗಿ ನಾನು ಕೇಳುವುದೆಂದರೆ ತನ್ನ ದೇಶದ ನಾಗರಿಕರನ್ನು ಆ ಅಮೇರಿಕಾವು - ಕರಿಯರೇ ಇರಲಿ, ಬಿಳಿಯರೇ ಇರಲಿ, ಅವರನ್ನು ಹತ್ತಿಕ್ಕಿ, ದಬ್ಬಾಳಿಕೆ ನಡೆಸಲು ಈ ಬಿಳಿಯ ಅಮೇರಿಕನ್ ಸರಕಾರಕ್ಕೆ ಇಷ್ಟೊಂದು ದಾರ್ಢ್ಯ ಬಲ ಹೇಗೆ ಮತ್ತು ಎಲ್ಲಿಂದ ಬಂತು? ನನಗನ್ನಿಸುವಂತೆ, ಇದಕ್ಕೆ ಎರಡು ಮೂಲ ಕಾರಣಗಳಿವೆ ೧) ಬಿಳೀ ಜನರ ಸಂಖ್ಯಾಬಲ, ೨) ಐತಿಹಾಸಿಕ ಸಮರ್ಥನೆ ೩) ಅಧಿಕಾರ ಬಲ. ಇದಕ್ಕೆ ಆಧಾರವೆಂದು ಈ ಕೆಳಗೆ ಕೆಲವು ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದೇನೆ. (ವಿಕಿಪೀಡಿಯದಿಂದ)

೨೦೦೪ರ ಗಣತಿಯ ಪ್ರಕಾರ ಯು. ಎಸ್. ಐ. ಒಟ್ಟು ಜನಸಂಖ್ಯೆ - ೩೨೦.೨೯ ಮಿಲಿಯ. ೨೦೦೩ರ ಗಣತಿ ಪ್ರಕಾರ ಒಟ್ಟು ಜನಸಂಖ್ಯೆಯಲ್ಲಿ ಬಿಳಿಯರ ಸಂಖ್ಯೆ ೭೭.೭ ಶೇಕಡಾ. ಕೃಷ್ಣವರ್ಣೀಯರ ಪ್ರತಿಶತ ಸಂಖ್ಯೆ ೧೩-೨ ಶೇಕಡಾ.

ಅಮೇರಿಕನ್ ಇಂಡಿಯನ್ ಅಥವ ರೆಡ್ ಇಂಡಿಯನ್ ಎಂದು ಕರೆಸಿಕೊಳ್ಳಲ್ಪಡುವ ಮೂಲ ನಿವಾಸಿಗಳು (ಈಗ ಅವರಲ್ಲಿ ಬಹಳಷ್ಟು ಜನರನ್ನು ಪ್ರತ್ಯೇಕ ಪ್ರದೇಶ (Reservation) ಗಳಲ್ಲಿ ಇಟ್ಟಿದ್ದಾರೆ.

ಏಷಿಯಾ ಖಂಡದಿಂದ ಬಂದು ನೆಲೆಸಿದವರು ೫.೩ ಶೇಕಡಾ

ಇನ್ನಿತರರು, ಅಂದರೆ ಹವಾಯಿಯರು, ಸ್ಪ್ಯಾನಿಶ್ ಜನರು, ಲ್ಯಾಟೀನ್ ಅಮೇರಿಕನ್ ಇತ್ಯಾದಿಗಳು. ೧೯.೭ ಶೇಕಡಾ

ಬಿಟ್ಟಿನ ತಲೆಯ ಮೇಲೆ, ಈ ದೇಶದಲ್ಲಿ ಬಿಳಿಯ ಅಮೇರಿಕನ್‌ರು ಸಂಖ್ಯಾಬಲದಲ್ಲಿ ಉಳಿದೆಲ್ಲರಿಂತ ಮೇಲೆ ಇದ್ದಾರೆ.

ಐತಿಹಾಸಿಕವಾಗಿ ನೋಡಿದರೆ. ಅಮೇರಿಕಾ ಭೂ ಖಂಡವನ್ನು ಯಾರು ಶೋಧಿಸಿದರು? ಅದೇ ಇಟಲಿಯ ಅಮೇರಿಗೋ ವೆಸ್ಪುಚ್ಚಿ ಎಂಬ ನಾವಿಕ. ಅವನು ಶೋಧಿಸಿದ್ದೇನೆಂದರೆ, ಕೊಲಂಬಸ್‌ನು ಆ ಮೊದಲು ಕಂಡು ಹಿಡಿದ ಬ್ರಝಿಲ್ ಮತ್ತು ವೆಸ್ಟ್ ಇಂಡೀಜ್ ಭೂಖಂಡಗಳು ಏಷಿಯಾದ ಪೂರ್ವಭಾಗಗಳಲ್ಲ; ಇವನ್ನೂ ಮೀರಿ ಒಂದು ಪ್ರತ್ಯೇಕ ಖಂಡವಿದೆ, ಅದೇ ಇಂದು ನಾವು ಅಮೇರಿಕಾ ಎಂದು ಕರೆಯುವ ಭೂಪ್ರದೇಶ, ಎಂದು ಅಮೆರಿಗೋ ವೆಸ್ಪುಚ್ಚಿಯಿಂದಾಗಿ ಈ ಭೂಖಂಡಕ್ಕೆ ಅಮೇರಿಕಾ ಎಂದು ನಾಮಕರಣವಾಯಿತು. ಅಂದಿನಿಂದ ಯೂರೋಪ್ ದೇಶೀಯರು ಈ ಭೂಖಂಡಕ್ಕೆ ಸಮುದ್ರಮಾರ್ಗವಾಗಿ ಬಂದು ನೆಲೆಸಿ ಪ್ರದೇಶದ - ರೆಡ್ ಇಂಡಿಯನ್ ಎಂದು ಯೂರೋಪಿಯನ್‌ರಿಂದ ಹೆಸರಿಸಲ್ಪಟ್ಟ ಮೂಲ ನಿವಾಸಿಗಳನ್ನು ತಮ್ಮ ಬಂದೂಕು ಇತ್ಯಾದಿ ಆಯುಧ ಸಾಮಗ್ರಿಗಳ ಮೂಲಕ ಹಿಂದಕ್ಕೆ ಹಿಂದಕ್ಕೆ ಒತ್ತುತ್ತ ಬಂದಿದ್ದಾರೆ. ಈಗ ಆ ಮೂಲ ನಿವಾಸಿಗಳು ಅಲ್ಪಸಂಖ್ಯೆಯಲ್ಲಿದ್ದಾರೆ. ಇವರಲ್ಲಿ ಕೆಲವರನ್ನು ಬಿಟ್ಟರೆ, ಉಳಿದವರನ್ನು ಗೆಟ್ಟೋಜ್ ರಿಸರ್ವೇಶನ್ಸ್ ಎಂಬ ಕೋರಂಟಿಗಳಲ್ಲಿ ಇಟ್ಟಿದ್ದಾರೆ. ಅಧಿಕಾರ ಮತ್ತು ಆರ್ಥಿಕ ಬಲದಿಂದ ಸಮಕಾಲೀನ ಬಿಳಿಯರು ಅದು ಹೇಗೆ ದೇಶದ ಪ್ರಜೆಗಳನ್ನು ನಿಯಂತ್ರಿಸುತ್ತಿದ್ದಾರೆ ಎಂಬ ಬಗ್ಗೆ ವಿಶೇಷ ಮಾಹಿತಿ ದೊರಕಿಸಬೇಕೆಂಬ ಅಪೇಕ್ಷೆ ನಿಮಗಿದ್ದರೆ ಜಾನ್ ಪರ್ಕಿನ್ಸ್ (John Perkins) ಎಂಬ ಅಮೇರಿಕನ್ ಅರ್ಥಶಾಸ್ತ್ರಜ್ಞನ Confessions of an Economic Hitman ಮತ್ತು the secret History of the American Empire ಎಂಬ ಪುಸ್ತಕಗಳನ್ನು ನಿಮ್ಮ ಕಂಪ್ಯೂಟರ್ ದವೆಬ್ ಸೈಟ್‌ನಲ್ಲಿ ನೋಡಿರಿ. ಇದೇ ಸಂದರ್ಭದಲ್ಲಿ ರೆಡ್ ಇಂಡಿಯನ್ಸ್ ಮತ್ತು ಬಿಳಿಯ ಜನರ ಸಂಬಂಧವನ್ನ ಮೂಲದ್ರವ್ಯವಾಗಿಟ್ಟುಕೊಂಡು ಡಿ. ಎಚ್. ಲಾರೆನ್ಸ್ ಬರೆದ The woman who rode away ಎಂಬ ಅದ್ಭುತ ಕತೆಯನ್ನೂ ಓದಬಹುದು.

ಈ ವರೆಗೆ ನಾನು ಅಮೇರಿಕನ್ ಬಗ್ಗೆ ಹೇಳಿದ್ದೆಲ್ಲಕ್ಕೂ ನಮಗೂ ಏನು ಸಂಬಂಧ? ಎಂದು ನಿಮ್ಮ ಮನಸ್ಸಿನಲ್ಲಿ ಪ್ರಶ್ನೆ ಹುಟ್ಟಬಹುದು. ಹೌದು, ಮಹರಾಯರೇ / ಮಹಾಭಾರತೀಯರೇ, ಮೋ. ಕ. ಗಾಂಧಿಯುಂಬ ಒಬ್ಬ ವ್ಯಕ್ತಿ ಮತ್ತು ಇನ್ನೂ ಅನೇಕ ಸ್ವಾತಂತ್ರ್ಯ ಸಂಗ್ರಾಮಿಗಳು ಮಹಾತ್ಮರು ಈ ಭಾರತದ ಪುಣ್ಯ ಭೂಮಿಯಲ್ಲಿ ಹುಟ್ಟದಿದ್ದಲ್ಲಿ ಈ ದೇಶದಲ್ಲಿ ಹುಟ್ಟಿ

ಬೆಳೆದ ನಮಗೆ ಇದು ನಮ್ಮ ದೇಶವೆಂಬ ಅರಿವು ಇರುತ್ತಿತ್ತೇ? ಯಾಕೆಂದರೆ ೧೯೪೭ನೇ ಇಸವಿ ಪೂರ್ವದಲ್ಲಿ ನಮಗೆ ಬ್ರಿಟಿಷರು ಎಷ್ಟೆಲ್ಲ ಮಾಡಿದ್ದಾರಲ್ಲಾ! ಎಂಬುದನ್ನು ನಮಗೆ ನೆನಪು ಮಾಡಿಕೊಳ್ಳಲು ಅನೇಕ ಜನರಿದ್ದರು. ಅವರಲ್ಲಿ ಕ್ಯಾಥರಿನ್ ಮೇಯೋ ಎಂಬ ಒಬ್ಬ ಅಮೇರಿಕೆಯ ಮಹಿಳಾಮಣಿಯೂ ಇದ್ದಾಳೆ. ಆಕೆ ೧೯೨೭ರಲ್ಲಿ ಪ್ರಕಟಿಸಿದ ಭಾರತದ ಪ್ರವಾಸಿ ಪುಸ್ತಕ Mother India ದಲ್ಲಿ ಅಂದದ್ದೇನು? ಬ್ರಿಟಿಷರು ನಮ್ಮ ದೊರೆಗಳಾಗಿ ಬರದಿದ್ದರೆ ಈ ದೇಶವು ಇನ್ನೂ ಅನಾಗರಿಕ ಅಸಂಸ್ಕೃತ ದೇಶವಾಗಿಯೇ ಉಳಿಯ ಬೇಕಾಗುತ್ತಿತ್ತು ಎಂದು. ಇದನ್ನು ಮೇಯೋ ಬಾಯಿಯ ಮಾತಿನಲ್ಲಿಯೇ ಕೇಳೋಣ.

" Meantime the British Government, in administering the affairs of India, would seem to have reached a set rate of progress, which, if it be not seriously interrupted, might fairly be forecast decade by decade. So many schools constructed, so many hospitals; so many furlongs of highway laid, so many bridges built; so many hundred miles of irrigation canal dug; so many markets made available; so many thousand acres of wasteland brought under homestead cultivation; so many wells sunk; so much rice and wheat and millet and cotton added to the country's food and trade resources.... This pace of advance, compared to the huge needs of the country, or compared to like movements in the United States or in Canada, is slow. To hasten it materially, one single element would suffice - the hearty, hard working and intelligent devotion to the practical job itself, of the educated Indian. Today, however, few signs appear, among Indian Public men, of concern for the status, of the masses, while they curse the one power (meaning the British Government in India) which, however little to their liking, is doing practically all of whatever is done for the comfort of sad old Mother India....... The population of all India is reckoned in round numbers, to be 319,000,000. Setting aside Indian States used ruled by Indian princes, that of British India is 247,000,000. Among these peoples live fewer than 200,000

Europeans counting every man, woman and child in the land, from the Viceroy down to the haberdasher's baby. The British personnel of the Army. including all ranks, number fewer than 60,000 men The British Civilian cadre, inclusive of the Civil Service. the medical men, the engineers, foresters, railway administrators, mint, assay, educational, agricultural and veterinary experts, etc., etc., totals 3,432 men. Of the Indian Police Service, the British membership approximates 4,000. This last figure excludes the subordinates and provincial services, in which the number of Europeans is however, negligible. (The Indian Year Book, Times Press Bombay, 1926, p.13) .... Representing the British man power in India today. You therefore have these figures.

Army	60,000
Civil Services	3,432
Police	4,000
Total	67,432

This is the entire local strength of the body to whose oppressive presence the Indian attributes what he himself describes as the "Slave mentality' of 247,000,000 human beings.

ಈ ಪುಸ್ತಕದಲ್ಲಿ ಮೇಯೋ ಮ್ಯಾಡಮ್ ಮುಖ್ಯವಾಗಿ ಇಲ್ಲಿಯ ಜನರ, ಅಜ್ಞಾನ, ಅಂಧ ಶ್ರದ್ಧೆ, ಹೊಲಸು, ಕೊಳಕು, ಗಂದಾ ಜೀವನ ಇವುಗಳ ಬಗ್ಗೆಯೇ ಹೇಳಿದ್ದಾಳೆ. ಪುಸ್ತಕವನ್ನು ಓದಿ ಬಾಪೂ ತಮ್ಮ ಹರಿಜನ ಪತ್ರಿಕೆಯಲ್ಲಿ ಬರೆದದ್ದೇನು? ಇದೊಂದು ಗಟಾರ ಗುಂಡಿಗಳ ಇನ್ಸ್‌ಪೆಕ್ಟರ್‌ರ ವರದಿಯಾಗಿದೆ, ಎಂದು. ಕುಮಾರಿ ಮಯೋಗೆ ಈ ದೇಶದ ಪ್ರಾಚೀನ ಸಂಸ್ಕೃತಿ. ಇಲ್ಲಿಯ ಕಲೆ, ತತ್ವಶಾಸ್ತ್ರ ಇದು ಯಾವುದೂ ಕಾಣಿಸಲಿಲ್ಲ. ಯಾಕೆಂದರೆ ಅವಳಿಗೆ ಪ್ರಾಮುಖ್ಯವಾದದ್ದು, ಬ್ರಿಟಿಷ್ ರಾಜ್ಯವು ಭಾರತದಲ್ಲಿ ಮುಂದುವರೆಯುವುದು ಎಷ್ಟು ಮುಖ್ಯ ಎನ್ನುವ ಮಾತು. ಭಾರತವು ಬ್ರಿಟಿಷ್ ಹಿಡಿತದಿಂದ ಮುಕ್ತವಾಗಿ ಆರು ದಶಕಗಳ ಮೇಲೆ ಆಗಿದೆ. ಅದರೂ ನಮ್ಮ ದೇಶದ ಸಂಸ್ಕೃತಿ, ಆಚಾರ ವಿಚಾರಗಳ ಮೇಲೆ ದಾಳಿ ನಡೆಸಿದ

ಬುದ್ಧಿಜೀವಿಗಳು ಕೇವಲ ಹೊರಗಿನವರಷ್ಟೇ ಅಲ್ಲ, ನಮ್ಮ ಒಳಗಿನವರೂ - ಇದ್ದಾರೆ. ಈಗ ಕೆಲ ವರ್ಷಗಳ ಹಿಂದೆ ವೆಂಡಿ ಡೂನಿಗರ್ ಎಂಬ ಅಮೇರಿಕನ್ ಮಹಿಳೆಯೊಬ್ಬಳು ಭಾರತದ ಇತಿಹಾಸವನ್ನು ಹೊಸ ದೃಷ್ಟಿಕೋನದಿಂದ ನೋಡಲಪೇಕ್ಷಿಸಿ ಒಂದು ಪುಸ್ತಕವನ್ನು ಪ್ರಕಟಿಸಿದ್ದಳು. ಹೆಸರು The Hindus : An Alternative History. ಈ ಪುಸ್ತಕದ ಬಗ್ಗೆ ಶಿಕ್ಷಾ ಬಚಾವೋ ಅಂದೋಲನದ ದೀನಾನಾತ್ ಬಾತ್ರಾರವರು ತೀವ್ರವಾಗಿ ಪ್ರತಿಕ್ರಿಯಿಸಿದರು. ಬಾತ್ರಾರವರು ಈ ಪುಸ್ತಕದ ಬಗ್ಗೆ ಹೇಳಿದ್ದೆಂದರ, : "Her (Wendy Doninger's) intention is bad, the content is anti-national and the language is abusive. Her agend is to malign Hinduism and hurt the feeling of Hindus" ಮುಂದುವರೆದು ಬಾತ್ರಾ ಅವರ ಹೇಳಿದ್ದೇನೆಂದರೆ. "We are not against modernity, but we are aganist westernization. Max Mueller once said that they (i. e. Westerns) conquered Indian once and that they will do it again but thorugh education. Through westernization, there's a renewed effort to enslave our country.Hindus all over the world should stand up against this. In the tiny world we live, we have to try and create heaven out of hell" ಪುಸ್ತಕದ ಬಗ್ಗೆ ದೇಶದಲ್ಲಿ ತೀವ್ರ ಗಲಭೆಯಾದ್ದರಿಂದ ಪುಸ್ತಕದ ಪ್ರಕಾಶಕರಾದ ಪೆಂಗ್ವಿನ್ ಅದನ್ನು ಹಿಂತೆಗೆದುಕೊಂಡರು. ಇದು ನಡೆದದ್ದು ೧೪ ಫೆಬ್ರವರಿ ೨೦೧೪ರಲ್ಲಿ. ಈ ಘಟನೆಯ ಬಗ್ಗೆ ಆಗ ಕೇಂದ್ರ ಮಂತ್ರಿಯಾಗಿದ್ದ ಜಯರಾಮ್ ರಮೇಶ್ ಅವರ ಪ್ರತಿಕ್ರಿಯೆ ಏನು ಗೊತ್ತೇ? "This is an atrocious decision as the book is not blasphemous by any means.... The organisation that demanded Penguin take such action is clearly some Taliban - type outfit. It is distorting and destroying our liberal traditions." ವಾಹ್ ದೇಶದ ಒಳಗಿನ ಮತ್ತು ಹೊರಗಿನ vested interests ಗಳು ಹೀಗೆ ದೇಶವನ್ನು ಇಂದಿಗೂ, ಈದಿನ ಈ ಕ್ಷಣದ ವರೆಗೂ ಪಾಶ್ಚಾತ್ಯೀಕರಣ, ಅಮೇರಿಕೀಕರಣವನ್ನು ಹರಿದುಂಬಿಸುತ್ತಲೇ ಇದ್ದಾರೆ. ಈಗ ದಿನದಿನ, ಟಿವಿ. ಸಿನಿಮಾ. ಟೀವೀ, ಜಾಹೀರಾತುಗಳಲ್ಲೂ. ವೃತ್ತಪತ್ರಿಕೆಗಳಲ್ಲಿ ನಾವು ನೋಡುತ್ತಿರುವುದು ಇನ್ನೇನು? ಆದ್ದರಿಂದ ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ನಮ್ಮ ಸದ್ಯದ ಪರಿಸ್ಥಿತಿಯ ಬಗ್ಗೆ ಈ ಕತೆಯ ಮೂಲಕ ತೀವ್ರ ವ್ಯಂಗ್ಯ ಪ್ರತಿಕ್ರಿಯೆಯೊಂದನ್ನು ನೀಡಿದ್ದಕ್ಕೆ ಟಿ. ಜಿ. ರಾಘವ ಅವರಿಗೆ ಕೃತಜ್ಞತೆ ಸಲ್ಲಿಸೋಣ.

●

ಸುಲಭವಲ್ಲ

● ವಾಸುದೇವ ಶೆಟ್ಟಿ

ಈಗ ಕವನ ಬರೆಯುವುದು
ಸುಲಭವಲ್ಲ ಗೆಳೆಯ
ಏಕೆಂಬೆಯಾ

ಏಕೆಂದರೆ ಕವನ
ಬರೆಯುವುದೆಂದರೆ ಸತ್ಯವನ್ನು
ಹೇಳಬೇಕು, ಕವನ
ಬರೆಯುವುದೆಂದರೆ ಮಾಡಿದ್ದನ್ನೇ
ಮಾಡಿದ್ದೇನೆ ಎನ್ನಬೇಕು

ಕವನ ಬರೆಯುವುದೆಂದರೆ
ಜಗಮೆಚ್ಚಿ ಅಹುದಹುದು
ಎನಬೇಕು.

ಆದರೆ
ಸತ್ಯ ಹೇಳುವುದು
ಅಷ್ಟು ಸುಲಭವಲ್ಲ
ಮಾಡಿದ್ದನ್ನೆಲ್ಲ ಹೇಳಿ
ಬೆತ್ತಲಾಗುವ ಎದೆ
ಗಾರಿಕೆ ಇಲ್ಲ
ಇನ್ನು ಜಗ ಎಲ್ಲಿ ಮೆಚ್ಚಬೇಕು ಹೇಳು,
ಅದಕ್ಕೇ ಕವನ ಬರೆಯುವುದು
ಈಗ ಸುಲಭವಲ್ಲ.

●

ಇಂದಿರಾ ಲಂಕೇಶ್ ಅವರ 'ಹುಳಿಮಾವು ಮತ್ತು ನಾನು'

• ಎಚ್. ಶಶಿಕಲಾ

"ಲಂಕೇಶರು ಕೂಡ ರಾಮನಂತಹ ಗಂಡನಾಗಿರಲಿಲ್ಲ. (ಅಲ್ಲ, ಪದೇ ಪದೇ ಕಾಡಿಗೆ ಅಟ್ಟುವ ರಾಮನಂತಹ ಗಂಡ ಬೇಕೆಂದು ಯಾಕೆ ಮಹಿಳೆಯರು ಆಶಿಸುತ್ತಾರೆ ಎಂಬುದೇ ನನಗೆ ಅರ್ಥವಾಗುತ್ತಿಲ್ಲ.) ಲಂಕೇಶರು ಆದರ್ಶ ಪತಿಯೂ ಆಗಿರಲಿಲ್ಲ. ಆದರೆ ತಮ್ಮ ಎಲ್ಲ ಮಿತಿಗಳ ಮತ್ತು ದುಮ್ಮಾನಗಳ ನಡುವೆಯೂ ಅವರು ತಮ್ಮಿಂದ ಸಾಧ್ಯವಾದದ್ದನ್ನು ನನಗೆ ಕೊಟ್ಟರು. ಸ್ವಾತಂತ್ರ್ಯ ಮತ್ತು ಗೌರವ ಕೊಟ್ಟರು. ಕಾಳಜಿ ವಹಿಸಿದ್ದರು. ಕಷ್ಟ ಎದುರಾದಾಗ ನನ್ನೊಂದಿಗಿದ್ದರು. ಒಬ್ಬ ಪತಿಯಿಂದ ಓರ್ವ ಹೆಂಡತಿಗೆ ಅದಕ್ಕಿಂತ ಇನ್ನೇನು ಬೇಕು? (ಹುಳಿಮಾವು ಮತ್ತು ನಾನು, ೨೦೧೩, ಪುಟ : ೧೬೯)

"ಹಲವೊಮ್ಮೆ ಯೋಚಿಸುತ್ತೇನೆ. ನನ್ನಂತೆ ಇತರೆ ಸಾಹಿತಿಗಳ ಹೆಂಡತಿಯರೂ ತಮ್ಮದೇ ಆದ ಪ್ರತ್ಯೇಕ ಬದುಕನ್ನು ರೂಪಿಸಲು ಯತ್ನಿಸಿದರೆ ಅವರ ಗಂಡಂದಿರು ಸುಮ್ಮನಿರುತ್ತಿದ್ದರೆ ಎಂದು. ಈ ಪ್ರಶ್ನೆ ಯಾಕೆಂದರೆ ಲಂಕೇಶರು ಎಂದೂ ನನ್ನನ್ನು ಪ್ರಶ್ನಿಸಲಿಲ್ಲ. ನನ್ನನ್ನು ತಡೆಯಲು ಯತ್ನಿಸಲಿಲ್ಲ. ಬದಲಾಗಿ ಸ್ತ್ರೀವಾದಿಯಾಗಿದ್ದ ಲಂಕೇಶರು ನಾನು ನನ್ನತನವನ್ನು ಕಂಡುಕೊಳ್ಳಲು ನನ್ನನ್ನು ಬಿಟ್ಟರು. ಅವರು ನನಗೆ ಎಲ್ಲ ರೀತಿಯ ಸ್ವಾತಂತ್ರ್ಯವನ್ನು ಕೊಟ್ಟರು. ಅದರ ಬಗ್ಗೆ ನನಗೆ ತುಂಬಾ ಮೆಚ್ಚುಗೆ ಇದೆ" (ಪುಟ : ೧೬೮).

■

ಇಂದಿರಾ ಲಂಕೇಶ್ ಅವರ "ಹುಳಿಮಾವು ಮತ್ತು ನಾನು", ಲಂಕೇಶ್ ಮತ್ತು ಇಂದಿರಾ ಅವರ ಸಂಬಂಧವನ್ನು ಕುರಿತು ಬಿಚ್ಚಿಡುವ ಕೃತಿ. ಒಂದು ಸಂಕೀರ್ಣ, ಸೃಜನಶೀಲ, ಪ್ರಸಿದ್ಧ ವ್ಯಕ್ತಿಯೊಂದಿಗಿನ ಸಹಬಾಳ್ವೆಯ ಸ್ವರೂಪ ಎಂತಹದ್ದು ಎಂಬುದನ್ನು ಶ್ರೀಮತಿ ಇಂದಿರಾ ಅವರು ಈ ಪುಸ್ತಕದ ಮೂಲಕ ತೆರೆದಿಟ್ಟಿದ್ದಾರೆ.

ಕೃತಿಯ ಆರಂಭ ಹಾಗೂ ಅಂತ್ಯವು, ಲಂಕೇಶರ ಜೊತೆಗಿನ ಸಂಬಂಧ ಆರಂಭದಿಂದ ಹಾಗೂ ಅವರ ಸಾವಿನೊಡನೆ ಕೊನೆಗೊಳ್ಳುತ್ತದೆ. ಅವರಿಬ್ಬರ ಸಂಬಂಧಗಳು ಪಡೆದುಕೊಂಡ ವಿವಿಧ ತಿರುವುಗಳಲ್ಲಿ ಇಂದಿರಾ ಅವರೊಳಗಿನ ಹುಡುಗಿ ಹೆಣ್ಣಾಗುತ್ತಾ ಹಣ್ಣಾಗುತ್ತಾ ಸಾಗುತ್ತಾಳೆ. ಹುಳಿಮಾವಿನ ಹುಳಿಯನ್ನು ತೆಗೆಯುವ ಅಸಾಧ್ಯ ಪ್ರಯತ್ನಕ್ಕಿಂತ ಹುಳಿಮಾವಿನ

ರುಚಿಯನ್ನೇ ಒಪ್ಪಿಕೊಳ್ಳುವುದರಲ್ಲಿ ತನ್ನೊಳಗಿನ ಸಾರವನ್ನು ಒರೆಗೆ ಹಚ್ಚುವ, ಅದರಿಂದಲೇ ಗಟ್ಟಿಯಾಗುವ ನೆಲೆಗೆ ಹೊರಳುವುದು ಕಾಣಸುತ್ತದೆ. 'ಹುಳಿಮಾವು' ತನ್ನ ಹುಳಿಯನ್ನು ಕಂಡುಕೊಳ್ಳುವ, ಅದಕ್ಕೆ ಮುಖಾಮುಖಿಯಾಗಿಸುವ ದಿಸೆಯಲ್ಲಿ ಹೊರಳು ದಾರಿಯನ್ನು ಹಿಡಿದಿರುವುದೇ ಕಾಣಬರುತ್ತದೆ.

ಸಂಬಂಧಗಳು, ಅದರಲ್ಲೂ ಒಂದು ಗಂಡು ಮತ್ತು ಹೆಣ್ಣಿನ ನಡುವಿನ ಸಂಬಂಧವು ಎಂದೂ ನಿರ್ದಿಷ್ಟ ವ್ಯಾಖ್ಯೆಗೆ ಸಿಗುವಂತಹದಲ್ಲ; ಆದ್ದರಿಂದಲೇ ಅದೊಂದು ನಿರಂತರ ಹುಡುಕಾಟದ ವಸ್ತು, ಅಂತೆಯೆ ಸೃಜನಶೀಲವಾದುದು ಹಾಗೂ ಕುತೂಹಲಕಾರಿಯಾದದ್ದೂ ಹೌದು. ಈ ಸಂಬಂಧದ ವೈ ಮನಗಳ ಸುಳಿಯಲ್ಲಿ ಯಾವುದರ ಕೈ ಮೇಲಾಗುತ್ತದೆಯೋ ಅದಕ್ಕೆ ತಕ್ಕಂತೆ ವ್ಯಾಖ್ಯೆಯ ಸ್ವರೂಪವೂ ಬದಲಾಗುತ್ತದೆ. ಆದರೆ ಒಂದಾದ ನಂತರ ಇನ್ನೊಂದರ ಅನುಭವದ ಸುಳಿಗೆ ಸಿಲುಕುವುದರ ಹಿಂದೆ ಇರುವ ಅನುಭವದ ಪಯಣವನ್ನು ಈ ಕೃತಿಯಲ್ಲಿ ಹಿಡಿಯಲು ಇಂದಿರಾ ಲಂಕೇಶ್ ಯತ್ನಿಸಿದ್ದಾರೆ.

ಕನ್ನಡ ಸ್ತ್ರೀಸಂವೇದನೆಯ ಸ್ವರೂಪವು ಪಾಶ್ಚಾತ್ಯ ಸ್ತ್ರೀವಾದಿ ನೆಲೆಗಿಂತ ಭಿನ್ನವಾಗುವ ದಿಸೆಯಲ್ಲಿ ಈ ಕೃತಿಯ ಪ್ರಾಮುಖ್ಯತೆ ಇದೆ. ಅನೇಕ ಚಳುವಳಿಗಳ ಕಾರಣದಿಂದ ವ್ಯಕ್ತಿತ್ವದ ಎಚ್ಚರವು ಸಮಾಜದಲ್ಲಿ ಈಗಾಗಲೇ ಗಟ್ಟಿಯಾಗಿ ನೆಲೆಯೂರಿರುವ ಅನೇಕ ತಾರತಮ್ಯಗಳ ವಿರುದ್ಧ ಮೂಡಿಬರುತ್ತಿದೆ. ಈ ಎಚ್ಚರದ ಸಂವೇದನೆಯ ಸ್ವರೂಪವು ನೇರವಾಗಿ ಪ್ರತಿಭಟನೆಯ ಮಾದರಿಯಲ್ಲಿ ಮೂಡಿ ಬಂದು ಬದುಕನ್ನು ಹೋಳಾಗುವಂತೆ ಮಾಡುತ್ತಿದೆ. ಇದು ಬಹಳ ಸುಲಭ ಹಾಗೂ ತತ್‌ಕ್ಷಣದ ತೀರ್ಮಾನಗಳ ನೆಲೆಯಲ್ಲಿ ಸರಳವಾದ ಪರಿಹಾರದ ಮಾರ್ಗವಾಗಿ ಕಂಡುಬರುತ್ತಿದೆ. ಆದರೆ, ಮುಂದಿನ ಹಂತದಲ್ಲಿ ದ್ವೀಪಗಳಾಗುವ ನಡುಗಡ್ಡೆಗಳಾಗುವ ಏಕಾಂಗಿತನದ ಸಂಕಟಗಳ ಕಲ್ಪನೆ ಇಂತಹ ತೀರ್ಮಾನಗಳ ಸಂದರ್ಭಗಳಲ್ಲಿ ಮುಖ್ಯವಾದುದಾಗುವುದಿಲ್ಲ. ಅಥವಾ ಬದುಕಿನ ಸ್ವಾತಂತ್ರ್ಯವು ತಂದು ಕೊಡುವ ಒಂಟಿತನದ ನೆರಳು ಅಲ್ಲಿ ಸುಳಿಯುವುದಿಲ್ಲ. ಆದರೆ "ಹುಳಿಮಾವು ಮತ್ತು ನಾನು" ಎಂಬ ಕೃತಿಯು ಇಂದಿರಾ ಮತ್ತು ಲಂಕೇಶರ ಸಂಬಂಧದ ಗಾಥೆಯಲ್ಲಿ ಪಡೆಯುವ ತಿರುವುಗಳು ಸಂಬಂಧದ ಹೊಸ ಭಾಷ್ಯವನ್ನೂ ಬರೆಯುತ್ತದೆ. ಆದರೆ ಇದೊಂದು ಕಡುಕಷ್ಟದ ಅಂತೆಯೇ ಇಂದಿರಾ ಅಂತಹವರು ಲಂಕೇಶರಂತಹ ಪ್ರತಿಭೆಗಳು ಬದುಕಿನ ಸಂದರ್ಭದಲ್ಲಿಯೇ ಹುಡುಕಿಕೊಂಡ ಸಂಬಂಧದ ಹೊಸ ವ್ಯಾಖ್ಯೆ. ಆದರೆ ಈ ವ್ಯಾಖ್ಯೆಯನ್ನು ಬರೆಯುವಲ್ಲಿ ಸಂಪ್ರದಾಯದ ಹೊಂದಾಣಿಕೆಯ ನೆಲೆಯಲ್ಲಿ ನಿಲ್ಲದ ಬಗೆಯಾಗಿದೆ. ಇದರಲ್ಲಿ ಈ ಕೃತಿಯ ಸಾಮರ್ಥ್ಯವಿದೆ.

ಮದುವೆಯ ಆರಂಭದ ಆಕರ್ಷಣೆಯು ಮಕ್ಕಳಲ್ಲಿ ಫಲ ಬಿಟ್ಟ ನಂತರ, ಲಂಕೇಶರ ಬದುಕಿನಲ್ಲಿ ಇಂದಿರಾ ಹೆಣ್ಣಾಗಿ ನಂತರ ತಾಯಿಯಾಗಿ ಗುರುತಿಸಲ್ಪಟ್ಟಿರುವುದು ವೇದ್ಯವಾಗುತ್ತದೆ. ಇದು ಇವರಿಬ್ಬರ ಬದುಕಿನಲ್ಲಿ ದಾಂಪತ್ಯ ಗೀತವು ಮುಗಿದು ಸಹಬಾಳ್ವೆಯ ಆರಂಭದ ಹಂತ. ಇಂದಿರಾ ಅವರೇ ಹೇಳಿಕೊಳ್ಳುವಂತೆ ಇದು ಅವರ ಬದುಕಿನ ಅತ್ಯಂತ ಸಂಕಟದ ಕಾಲ. ಲಂಕೇಶರಿಗೆ ಅವರ ವ್ಯಕ್ತಿತ್ವದ ಹುಡುಕಾಟವೆಂಬುದು ಅನೇಕ ಪ್ರಯೋಗಶೀಲತೆಗಳಿಗೆ ತಮ್ಮನ್ನು ಒಡ್ಡಿಕೊಂಡ ಕಾಲ. ಲಂಕೇಶರ ಪ್ರತಿಭೆಯ ಹಲವು ಮುಖಗಳಲ್ಲಿ ಸಾಹಿತ್ಯ, ನಾಟಕ, ಸಿನಿಮಾ, ಪತ್ರಿಕೋದ್ಯಮಗಳಾಗಿ ಹೊರಹೊಮ್ಮಿದ ಕಾಲ. ಆದರೇ ಇದೇ ಸಂದರ್ಭದಲ್ಲಿಯೇ ಲಂಕೇಶರ ವ್ಯಕ್ತಿತ್ವವೂ ಹಲವಾರು ಸಂಬಂಧಗಳ ನೆರಳಿನಲ್ಲಿ ಆಶ್ರಯವನ್ನು ಪಡೆದಿರುವುದು ಇಂದಿರಾ ಅವರ ನಿರೂಪಣೆಯ ಮೂಲಕವೇ ತಿಳಿಯುತ್ತದೆ. ಈ ಸಂದರ್ಭವು ಇವರಿಬ್ಬರ ಸಂಬಂಧವು ನಿರ್ಣಾಯಕ ತಿರುವನ್ನು ಪಡೆಯುತ್ತಿದ್ದ ಮಹತ್ವದ ಕಾಲ. ಒಂದೆಡೆ ಉಕ್ಕುಕ್ಕಿ ಹರಿಯುವ ವ್ಯಕ್ತಿತ್ವ ಹುಡುಕಾಟ ಲಂಕೇಶರಿಗಾದರೆ, ಇಂದಿರಾ ಅವರಿಗೆ ಒಡ್ಡನ್ನು ಹರಿದು ಅಡ್ಡಾದಿಡ್ಡಿಯಾಗಿ ಚೆಲ್ಲಾಪಿಲ್ಲಿಯಾಗುತ್ತಿದ್ದ ಬದುಕಿನ ಪ್ರವಾಹವನ್ನು ಒಂದೆಡೆ ತಿರುಗಿಸುವ ಅನಿವಾರ್ಯ ಸ್ಥಿತಿ. ಈ ಸಾಹಸದಲ್ಲಿ ಇಬ್ಬರೂ ಬೇರ್ಪಡುವ ಸಾಧ್ಯತೆಗಳು ಅಪಾರವಾಗಿದ್ದರೂ, ಇಬ್ಬರನ್ನೂ ಬೇರ್ಪಡದಂತೆ ತಡೆದದ್ದು ಗಂಡು ಹೆಣ್ಣಿನ ಸಂಬಂಧದ ಫಲಿತಗಳು, ಅಂದರೆ ಮಕ್ಕಳು. ಮುಂದಿನ ಸಂತಾನದ ಬೆಳವಣಿಗೆಯ ಜವಾಬ್ದಾರಿಯು ಅವರನ್ನು ಸಹಬಾಳ್ವೆಗೆ ನೂಕಿರುವುದನ್ನು ಇಂದಿರಾ ಅವರ ಹೇಳಿಕೆಗಳು ಸ್ಪಷ್ಟಪಡಿಸುತ್ತವೆ.

ಯಾವುದೇ ಪಾರ್ಟಿಗೆ ಹೋದರೂ 'ನಾನೂ ನನ್ನ ಮಕ್ಕಳು ಹೋಗಿದ್ದೆವು; ದೆಹಲಿಗೆ ಪ್ರಶಸ್ತಿ ಸ್ವೀಕಾರ ಸಮಾರಂಭಕ್ಕೆ ನಾನೂ ನನ್ನ ಮಕ್ಕಳು ಹೋಗಿ, ನಂತರ ಲಂಕೇಶರು ದೆಹಲಿಯಿಂದ ಮರಳಿ ಬಂದರೂ ನಾವು ದೆಹಲಿ, ಆಗ್ರಾ ಎಲ್ಲವನ್ನೂ ನೋಡಿಕೊಂಡು ಬಂದೆವು". ಇತ್ಯಾದಿ ವಿವರಗಳು ಇದನ್ನು ಸ್ಪಷ್ಟಪಡಿಸುತ್ತವೆ. ಆದರೆ ಇವರ ಒಡಲಿನಲ್ಲಿಯೇ, ಒಂದು ಹೆಣ್ಣಾಗಿ ಲಂಕೇಶರ ಪ್ರತಿಭೆ ಪ್ರಯೋಗಶೀಲತೆಗಳ ಅನುಷ್ಠಾನಕ್ಕೆ ತನ್ನಿಂದಾದ ನೆರವನ್ನು ಚಾಚಿರುವುದೂ, ಆದರೆ ಅದಕ್ಕೆ ಸಿಕ್ಕ 'ಬಳುವಳಿ' ಇವೆಲ್ಲವೂ ಇಂದಿರಾ ಅವರದ್ದೇ ಏಕೆ ಯಾವುದೇ ಹೆಣ್ಣಿನ ಕರುಳು ಕತ್ತರಿಸುವ ಸನ್ನಿವೇಶಗಳು. ಆದರೆ ಇದೇ ಸಂದರ್ಭದಲ್ಲಿ ಲಂಕೇಶರ ಪ್ರತಿಭೆ ಹೊರಹೊಮ್ಮುವಿಕೆಗೆ ಅನುಭವಿಸುತ್ತಿದ್ದ ಸಂಕಟ, ಆ ಸಂಕಟದ ಬಿಡುಗಡೆಗಾಗಿ ಪಡೆಯುತ್ತಿದ್ದ ಆಶ್ರಯವೂ ಅನೂಹ್ಯ; ಹೀಗಾಗಿ, ಒಂದು ಸಾಂಪ್ರದಾಯಿಕ ಚೌಕಟ್ಟಿನಲ್ಲಿ 'ಇವರ ಬದುಕು ಹೀಗಿದೆ, ಹೀಗಾಗಿದೆ. ಹೀಗಿರ ಬೇಕಿತ್ತು" ಎಂದು ಹೇಳುವುದಕ್ಕೆ ಬದಲಾಗಿ ವ್ಯಕ್ತಿತ್ವಗಳು

ತಮ್ಮ ಅಭಿವ್ಯಕ್ತಿಗಾಗಿ ಹಣಗುತ್ತಿರುವ ಮಾರ್ಗದಲ್ಲಿ, ತಮ್ಮ ಬದುಕಿನ ಸಂಗಾತಿಯನ್ನು ಹೇಗೆ ಒಂದು ಸಂಪ್ರದಾಯದ ಚೌಕಟ್ಟಿನಾಚೆ ಸಹಿಸಿಕೊಂಡು ತಮ್ಮ ಜವಾಬ್ದಾರಿಯನ್ನು ನಿಭಾಯಿಸಿದವು ಎಂಬುದು ಮುಖ್ಯವಾಗುತ್ತದೆ. ಏಕೆಂದರೆ, ವ್ಯಕ್ತಿತ್ವದ ಹೊರಹಾಕುವಿಕೆಯಲ್ಲಿ ಒಂದೆಡೆ ನಾನು, ನನ್ನದು ಎಂಬ ಸ್ವಕೇಂದ್ರಿತ ವ್ಯಕ್ತಿತ್ವದ ಅನಾವರಣಕ್ಕೆ ನಡೆಸುವ ಹೋರಾಟದಲ್ಲಿ, ಇತರರ ಬಗೆಗಿನ ಎಚ್ಚರವೇ ಇಲ್ಲವಾಗುವ ಸ್ಥಿತಿಯದು; ಅಂತಹ ಸಂದರ್ಭದಲ್ಲಿ ನಾನು ಎಂಬುದನ್ನು ಕಳೆದುಕೊಳ್ಳುವ ಹಂತದಲ್ಲಿ ವ್ಯಕ್ತಿತ್ವದ ಸಂಕಟಗಳನ್ನು ಊಹಿಸಲು ಅಸಾಧ್ಯ. ಬಹುಶಃ ತನ್ನ ಸಂಗಾತಿಯ ಬಗೆಗಿನ ಅಸಹನೆ ಕೋಪ ತಾಪಗಳು ಇಂತಹ ಸಂದರ್ಭದಲ್ಲಿ ವ್ಯಕ್ತಿತ್ವದ ಹೊರಹೊಮ್ಮುವಿಕೆಯ ಹಂತದಲ್ಲಿನ ಅಸಹನೆಗಳು. ಇಂತಹ ಅಸಹನೆಯನ್ನು 'ಸಂಬಂಧಗಳಲ್ಲಿ' ಅದರಲ್ಲಿಯೂ ಅತ್ಯಂತ ವೈಯಕ್ತಿಕ ಸಂಬಂಧಗಳಾದ ಗಂಡ ಹೆಂಡತಿಯ ಸಂಬಂಧದಲ್ಲಿ ಹೇಗೆ ನಿಭಾಯಿಸಲಾಗುತ್ತದೆ ಎಂಬುದು ಆಯಾ ವ್ಯಕ್ತಿತ್ವಗಳ ಸಾಮರ್ಥ್ಯಕ್ಕೆ ಬಿಟ್ಟಿದ್ದು. ಇಂತಹ ಕ್ಷಣಗಳಲ್ಲಿ ಸಂಬಂಧಗಳು ಹೊಸ ಸ್ವರೂಪವನ್ನು ಪಡೆದುಕೊಳ್ಳುವ ಹಾದಿಯಲ್ಲಿರುತ್ತವೆ. ಹಾಗೆಯೇ ಸಂಬಂಧಗಳನ್ನು ಕಡಿದುಕೊಳ್ಳುವ, ಹರಿದುಕೊಳ್ಳುವ ಕಾಲವು ಇದೇ ಆಗಿರುತ್ತದೆ.

ಆದರೆ ಇಂದಿರಾ ಮತ್ತು ಲಂಕೇಶ್ ಇಂತಹ ಸಂದರ್ಭದಲ್ಲಿ ಇಬ್ಬರೂ, ಒಂದು ಗಂಡಾಗಿ, ಒಂದು ಹೆಣ್ಣಾಗಿ ಮಾತ್ರವೇ ತಮ್ಮನ್ನು ನೋಡಿಕೊಳ್ಳದೇ ಕೇವಲ 'ಸ್ವಕೇಂದ್ರಿತ' ವ್ಯಕ್ತಿತ್ವದ ಅನಾವರಣಕ್ಕೆ ಮಾತ್ರ ತಮ್ಮನ್ನು ಸೀಮಿತಗೊಳಿಸಿಕೊಳ್ಳದೆ, ಜವಾಬ್ದಾರಿಯುತ ಮಕ್ಕಳ ಪೋಷಕರಾಗಿ ಉಳಿದುಕೊಂಡು ತಮ್ಮ ಸಂಬಂಧವನ್ನು ಸಹಬಾಳ್ವೆಯ ಜೀವನದ ಕಡೆ ಕೊಂಡ್ಕೊಯ್ದಿರುವುದು ಸಂಬಂಧಗಳಲ್ಲಿರುವ ಜವಾಬ್ದಾರಿಯುತ ನಡವಳಿಕೆಯನ್ನು ಸೂಚಿಸುತ್ತದೆ. ಇಂತಹ ನಡವಳಿಕೆಯನ್ನು ದಾಖಲು ಮಾಡುತ್ತಿರುವುದರಲ್ಲಿಯೇ ಈ ಕೃತಿಯ ಮಹತ್ವವಿದೆ ಎಂದು ತಿಳಿಯುತ್ತೇನೆ. ತಾನು, ತನ್ನತನ ಎನ್ನುವುದನ್ನು ಕಳೆದುಕೊಳ್ಳುವ ಕ್ಷಣಗಳಲ್ಲಿ ತಮ್ಮ ತಮ್ಮ ವ್ಯಕ್ತಿತ್ವಗಳ ಆಚೆಗೆ ಇನ್ನೊಂದರೊಡನೆ ಇರುವ ತಮ್ಮಿಬ್ಬರ ಸಂಬಂಧವನ್ನು ಗುರುತಿಸಿಕೊಂಡು ಸಂಬಂಧವನ್ನು ಉಳಿಸಿಕೊಳ್ಳುವ ಜವಾಬ್ದಾರಿಯನ್ನು ಇಂದಿರಾ ಹಾಗೂ ಲಂಕೇಶರು ಸಮರ್ಥವಾಗಿ ನಿಭಾಯಿಸಿದ್ದಾರೆ. ಇದರಿಂದಾಗಿ ಸಂಬಂಧವು ಕಡಿದು ಹೋಗದೆ, ಸಂಬಂಧವು ಇಲ್ಲವಾಗದೆ, ಇಬ್ಬರ ನಡುವಿನ ಸ್ವಾತಂತ್ರ್ಯವನ್ನು ಉಳಿಸಿಕೊಂಡು, ಸಂಬಂಧವು ಮುಂದುವರಿಯಲು ಅನುವು ಮಾಡಿಕೊಟ್ಟಿದೆ.

•

ಇದೇ ಸಂದರ್ಭದಲ್ಲಿ ಸ್ತ್ರೀ ಸಂವೇದನೆಯ ಮುಖದಿಂದ ನೋಡಿ ಈ ಕೃತಿಯನ್ನು 'ಹೆಣ್ಣಿಗೆ

ತನ್ನ ಬಗೆಗಿನ ಎಚ್ಚರ, ಅದು ಅವಳ ಅಸ್ತಿತ್ವವನ್ನು ಕಟ್ಟಿಕೊಳ್ಳುವ ಬಗೆ' ಇತ್ಯಾದಿ ನೆಲೆಯಲ್ಲಿ ಹೇಳಿಬಿಡಬಹುದು. ಆದರೆ, ಸ್ತ್ರೀಗೆ ತನ್ನ ಬಗೆಗಿನ ಎಚ್ಚರವು ಮೂಡುವುದು ಅವಳ ಬದುಕಿನ ಸವಾಲಿನ ಸಂದರ್ಭದಲ್ಲಿ. ಇಂತಹ ಸವಾಲಿನ ಸಂದರ್ಭಕ್ಕೆ ಅವಳು ಸ್ಪಂದಿಸಿ ಹೇಗ ತನ್ನ ಬದುಕಿನ ಭಾಷ್ಯವನ್ನು ಬರೆಯುತ್ತಾಳೆ ಎಂಬುದು ಮುಖ್ಯವಾಗುತ್ತದೆ. ಏಕೆಂದರೆ ಹೆಣ್ಣಿಗೆ ತನ್ನ ಬಗೆಗಿನ ಎಚ್ಚರವೆಂಬುದು ಎಂದೂ ಪ್ರತಿಭಟನೆಯಲ್ಲಿ ಸಂಬಂಧವನ್ನು ಹರಿದು ಕೊಳ್ಳುವುದರಲ್ಲಿಯೇ ಕೊನೆಗೊಳ್ಳುತ್ತವೆ ಎಂದು ಹೇಳಲಾಗುವುದಿಲ್ಲ. ಇವು ಬಹಳ ಸರಳವಾದ ಉತ್ತರಗಳು. ಭಿನ್ನ ಭಿನ್ನ ಬಗೆಯಲ್ಲಿ ಸಂಬಂಧಗಳನ್ನು ಕಟ್ಟಿಕೊಳ್ಳುವುದೂ ಇರುತ್ತದೆ. ಇಂತಹವದ್ದರಲ್ಲಿ ಇಂದಿರಾ ಹಾಗೂ ಲಂಕೇಶ ಕಟ್ಟಿಕೊಂಡ ಸಂಬಂಧ ಸ್ವರೂಪ ಮುಖ್ಯವಾಗುತ್ತದೆ.

ಇಂದು ಗಂಡು ಹೆಣ್ಣಿನ ಸಂಬಂಧದಲ್ಲಿ ಪ್ರಧಾನವಾಗಿ ಉದ್ಭವಿಸಿರುವ ಸಿಂಗಲ್ ವುಮೆನ್, ಸಿಂಗಲ್ ಮದರ್, ಪರಿಕಲ್ಪನೆಗಳು ಬಹಳ ಸರಳವಾದುದು ಹಾಗೂ ಸುಲಭವಾದವು, ಅಂತೆಯೆ ಇನ್ನೊಂದು ಎಡೆಯಿಂದ ಸಿಂಗಲ್ ಪೇರೆಂಟ್ ಅಥವಾ ಸಿಂಗಲ್ ಮೆನ್ ಆಗಿ ಉಳಿಯುವುದೂ ಸಹ ಇದರದ್ದೆ ಇನ್ನೊಂದು ರೂಪ. ಇವುಗಳಲ್ಲಿ ಸಂಬಂಧಗಳಿಂದ ಹೊರಬಂದು ದೊರಕಿಸಿಕೊಳ್ಳುವ ಸ್ವಾತಂತ್ರ್ಯ ಮುಖ್ಯವಾದ ಭಿತ್ತಿಯಾಗುತ್ತದೆ. ಇವು ಆರೋಗ್ಯಪೂರ್ಣವಾದ ಸಮಾಜ ಕಟ್ಟುವಿಕೆಯಲ್ಲಿ ದಾರಿದೀಪವಾಗಬಲ್ಲವೇ ಹಾಗೆಯೇ ವ್ಯಕ್ತಿತ್ವದ ಒಂಟಿತನಕ್ಕೆ ಉತ್ತರವಾಗಬಲ್ಲವೇ ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಆದರೆ ಒಲ್ಲದ ಸಂಬಂಧಗಳಾಚೆ ಒಲಿಯುವ, ಒಲಿಸಿಕೊಳ್ಳುವ ಕ್ರಿಯೆಯ ದಾರಿಯು ಸುಗಮವಲ್ಲ; ಅಂತೆಯೇ ಸರಳವೂ ಅಲ್ಲ; ಇಂದಿರಾ ತುಳಿದದ್ದು ದುರ್ಗಮ, ಸಾಹಸದ ಬದುಕು. ಅಂತೆಯೇ ವಿಶಿಷ್ಟವಾದದ್ದೂ ಹೌದು. ಒಂದು ವ್ಯಕ್ತಿತ್ವವು ಸಾಹಸದಿಂದ ತನ್ನ ಬದುಕನ್ನು ರೂಪಿಸಿಕೊಂಡದ್ದು ಎಂಬುದಾಗಿ ಹೇಳಬಹುದಲ್ಲದೆ, ಯಾವುದೇ ವಾದದ ನೆರಳು, ಅದರಲ್ಲಿಯೂ ಸ್ತ್ರೀವಾದದ ನೆರಳಿಗೆ ಇದನ್ನು ಸೀಮಿತಗೊಳಿಸಿಬಿಟ್ಟರೆ ಇಂದಿರಾ ಅವರ ಬದುಕಿನ ಗ್ರಹಿಕೆಯನ್ನು ಮಿತಿಗೆ ಒಡ್ಡಿ ಬಿಡುತ್ತದೆ. ಏಕೆಂದರೆ ಯಾವುದೇ ತಾತ್ವಿಕತೆಗಿಂತ, ಬರಹಕ್ಕಿಂತ ಮಿಕ್ಕಿ ಮೀರಿದ್ದು ಬದುಕು. ಇಂತಹ ಪ್ರಯತ್ನದ ಹಂತದಲ್ಲಿಯೇ ಇಂದಿರಾ ಅವರು ಸಂಬಂಧದಲ್ಲಿರುವ ಸಂಕೀರ್ಣ ಮುಖದ ಕಡೆಗೆ ನಮ್ಮನ್ನು ಸೆಳೆದೊಯ್ಯುತ್ತಾರೆ. ಇದರ ಮೂಲಕವೇ ಸಂಬಂಧಗಳಿಗೆ ಹೊಸ ಭಾಷ್ಯವನ್ನು ಬರೆಯುತ್ತಾರೆ. ಮನೆಯೆಂಬ ಬದುಕಿಗೆ ಕಟ್ಟುವ ಹಸಿರು ತೋರಣದ ಪ್ರೀತಿ ಉಳಿದರೆ ಮಾತ್ರ ಬದುಕು ಬೆಳಗಬಲ್ಲದು. ಅದನ್ನು ಇಂದಿರಾ ಮಾಡಿದ್ದಾರೆ.

•

ಇದೇ ಸಂದರ್ಭದಲ್ಲಿ ವ್ಯಕ್ತಿತ್ವಗಳು ಕಟ್ಟಿಕೊಂಡಿರುವ ಜವಾಬ್ದಾರಿಯುತ ಸಂಬಂಧಕ್ಕೆ ಇರುವ ವಿಭಿನ್ನ ಮುಖಗಳೂ ಅರಿವಿಗೆ ಬರುತ್ತವೆ. ಎರಡೂ ವ್ಯಕ್ತಿಗಳ ಬಯಕೆಗಳು ಪೂರೈಸಿಕೊಳ್ಳುವ ಸ್ವಾತಂತ್ರ್ಯವನ್ನು ಪಡೆದಿದ್ದಾಗ ಮಾತ್ರ ಇಂತಹದೊಂದು ಸಂಬಂಧದ ಸ್ವರೂಪವು ಅರಳಲು ಸಾಧ್ಯ: ಇಲ್ಲವಾದಲ್ಲಿ ಸಾಂಪ್ರದಾಯಿಕವಾಗಿ ಅದು ಗಂಡಿನ ದಬ್ಬಾಳಿಕೆಯಲ್ಲಿ ನಲುಗುವ ಹೆಣ್ಣಿನ ದುರಂತದ ಚಿತ್ರಣವಾಗುತ್ತದೆ. ಒಂದು ವ್ಯಕ್ತಿತ್ವವು ಇನ್ನೊಂದು ವ್ಯಕ್ತಿತ್ವವನ್ನು ಗೌರವಿಸುವುದೆಂದರೆ, 'ಇನ್ನೊಂದು ವ್ಯಕ್ತಿತ್ವವೂ ತನ್ನಂತೆ' ಎಂಬುದನ್ನು ತಿಳಿದು, ಇನ್ನೊಂದು ವ್ಯಕ್ತಿತ್ವಕ್ಕೆ ನೀಡುವ ಸ್ವಾತಂತ್ರ್ಯ; ಆಧುನಿಕ ಬದುಕಿನ ಅನೇಕ ಅವಕಾಶಗಳು ಹೆಣ್ಣು ಮತ್ತು ಗಂಡು ಇಬ್ಬರಿಗೂ ತಮ್ಮ ತಮ್ಮ ವ್ಯಕ್ತಿತ್ವಗಳ ಅನಾವರಣಕ್ಕೆ ಅವಕಾಶದ ಬಾಗಿಲನ್ನು ತೆರೆದಿಟ್ಟಿವೆ. ಪರಸ್ಪರರು ಒಬ್ಬರ ನೆರಳಿನಲ್ಲಿ ಇನ್ನೊಬ್ಬರು ಇದ್ದುಕೊಂಡೇ ತಮ್ಮ ತಮ್ಮ ವ್ಯಕ್ತಿತ್ವದ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಜೀವನದ ಅನೇಕ ಸಾಧ್ಯತೆಗಳನ್ನು ಹುಡುಕಿಕೊಳ್ಳಬಲ್ಲರು ಎಂಬುದಕ್ಕೆ ಇವರ ಬದುಕೊಂದು ಮಾದರಿಯಾಗಿದೆ. ಇಂದಿರಾ ಅವರೇ ಹೇಳುವಂತೆ, 'ನಾನು ಅಂಗಡಿಗೆ ಸೀರೆಗಳನ್ನು ಕೊಂಡುಕೊಳ್ಳುವ ಹೋಗುವ ಸಂದರ್ಭದಲ್ಲಿ ಲಂಕೇಶರಿಗೆ ಹೇಳಿ ಹೋಗುತ್ತಿರಲಿಲ್ಲ. ಯಾವಾಗ ಬರುತ್ತೇನೆಂಬುದನ್ನು ತಿಳಿಸುತ್ತಿರಲಿಲ್ಲ.' ಇಂತಹ ಹತ್ತು ಹಲವು ಸಂಗತಿಗಳನ್ನು ಪ್ರಸ್ತಾಪಿಸುವುದಕ್ಕಿಂತ, ಇಂದಿರಾ ಅವರ ಸ್ವಾತಂತ್ರ್ಯವನ್ನು ಲಂಕೇಶ್ ಗುರುತಿಸಿದ್ದರು, ಅಥವಾ ಇಂದಿರಾ ಅಂತಹ ಸ್ವಾತಂತ್ರ್ಯವನ್ನು ತಮ್ಮ ಸಾಮರ್ಥ್ಯದಿಂದಲೇ ಪಡೆದಿದ್ದರು. ಇಂತಹ ಸ್ವಾತಂತ್ರವನ್ನು ಇಬ್ಬರೂ ಪಡೆದಿದ್ದರಿಂದಲೇ ಇವರಿಬ್ಬರ ಸಂಬಂಧವು ಎಚ್ಚರದಿಂದ ಕಾಪಿಟ್ಟುಕೊಂಡ, ಸಂಪ್ರದಾಯದ ಗಂಡ-ಹೆಂಡತಿ ಸಂಬಂಧದಾಚೆ ಉಳಿದೂ ಸಾಗಿ ಬಂದ ಸಹಬಾಳ್ವೆಯಾಗಿದೆ.

•

ಈ ಕೃತಿಯು ಆತ್ಮಕಥನದ ಮಾದರಿಯಲ್ಲಿ ಬರೆಯಲ್ಪಟ್ಟಿರುವ ಬರಹ: ಲಂಕೇಶ್ ಅವರ ಜೊತೆಗೆ ಕಳೆದ ಬದುಕಿನ ಸಹಬಾಳ್ವೆಯನ್ನು ಮಾತ್ರ ಕೇಂದ್ರವಲ್ಲಿಟ್ಟುಕೊಂಡಿರುವ, ಅವರ ಬಗ್ಗೆ ಮಾತ್ರ ಮಾತನಾಡುತ್ತಿರುವ ಒಂದು ಪ್ರಯತ್ನ. ಈ ಪ್ರಯತ್ನದಲ್ಲಿ ಇಂದಿರಾ ಸಾಕಷ್ಟು ಮೌನವನ್ನೂ ವಹಿಸಿದ್ದಾರೆ. ಆ ಮೌನವು ಸಾಲುಗಳ ನಡುವಿನ ಮೌನವಲ್ಲ; ಬದಲಾಗಿ ಲಂಕೇಶ ಮತ್ತು ಇಂದಿರಾ ಅವರ ಸಂಬಂಧದಾಚೆ ಉಳಿಯುವ ಮೌನ. ಇದು ಹೆಣ್ಣೊಬ್ಬಳ ಅಂತರಂಗದ ಮೌನವೂ ಹೌದು. ಅವಳಿಗೇ ತಿಳಿಯದ, "ಅರಿತೆನೆಂದರೆ ಅರಿಯದೀ ಮಾಯೆ"ಯ ಮೌನ.

•

ಕಣ್ಮರೆಯಾದ ಕವಿ : ಶಂಕರ ಕಟಗಿ

● ರಾಜಶೇಖರ ಮಠಪತಿ (ರಾಗಂ)

"ಬೀಜದೊಳಗಿನ ವೃಕ್ಷವಂತೆ ವಿಸ್ಮಯದ ಕಾವ್ಯ ಪ್ರಪಂಚವನ್ನು 'ಬದುಕು' ನನಗೆ ಕಟ್ಟಿ ಕೊಡತೊಡಗಿದೆ" ಎಂದು ತನ್ನ ಆತ್ಮದ ಚೆಲುವಿಗೆ ತಾನೆ ಬೆರಗಾಗಿ ಹಾಡಿ, ಸಾವಿನೊಳಗಿನ ಜೀವದಂತೆ ನನ್ನ ಕಾವ್ಯದ ಓಂದಿನ ಶಕ್ತಿಯಾಗಿ ಸದಾ ಮೀಟುತ್ತಿದ್ದ ಹಿರಿಯ ಕವಿಮಿತ್ರ ಶಂಕರ ಕಟಗಿಯ ಲೋಕಸಿರ್ಗಮನದ ಕುರಿತು ಬಹಳ ತಡವಾಗಿ ಸ್ಪಂದಿಸುತ್ತಿದ್ದೇನೆಂಬ ಭಾವವಿಲ್ಲ ನನ್ನಲ್ಲಿ. ಯಾಕೆಂದರೆ, ಬದುಕಿನ ಸತ್ಯಗಳು ರಸ್ತೆದಲ್ಲಿ ಸುಮ್ಮನೆ ಒಂದಾಗಿ ಬಿಡುವುದಿಲ್ಲ. ನಿತ್ಯ ಪಿಸುಗುಡುವ ಕಾಲದಲ್ಲಿ ಮತ್ತು ನೆನಪುಗಳಲ್ಲಿ ಸಾವೂ ಒಂದು ಸತ್ಯ. ವ್ಯತ್ಯಾಸ ವಿಷ್ಟೆ: ಶಂಕರ ಕಟಗಿಯ ಸಾವು ನಾವು ಸಾಕ್ಷಿಯಾದ ಸತ್ಯ. ಅದು ಒಳಗಾಗುವ, ತಿಳಿಯಾಗುವ, ತಿಳುವಳಿಕೆಯಾಗುವ ಒಂದು ಘಟ್ಟವಿತ್ತೇನೊ. ಈಗ ಆ ಸಾವು ಈ ಶಬ್ದಗಳಲ್ಲಿ ಜೀವವಾಗಿ ಸುಧಾರಿಸಿಕೊಳ್ಳುತ್ತಿದೆ. ನಿಮ್ಮ ನೆನಪುಗಳ ಹೆಗಲು ಸಿಕ್ಕರೆ ಫಳ್ಳನೆ ಬೆಳಕಿನಂತೆ ಜೀವ ತಳೆಯ ಬಹುದು.

ಯಾಕೆಂದರೆ,ಕವಿ ಶಂಕರ ಕಟಗಿ ಮತ್ತು ಆತನ ಕಾವ್ಯವೆಂದರೆ ನನಗೆ ಒಂದು ನಾದದ ಬೀಜ, ಹಗಲ ಹಾದಿಯ ಬದಿಗೆ ಕೊಯ್ದಿಟ್ಟ ಬಿಸಿಲು, ಕೊಳೆತ ಕಾಲದ ಗುಂಟ ಮೊಳೆತ ಹೂವಿನ ದಂಟ, ಸಂತೆಯೊಳಗಿನ ಪರಿಮಳ, ಹಸಿದ ಜನರ ಕೂಗು, ಅವನೊಬ್ಬ ಕರುಳ ಮೀಟಿ ಕಣಿ ಹೇಳುವ ಭಕುತಿ ತುಂಬಿದ ಪಕ್ಷಿ.

ಬಂಡುಕೋರನಂತೆಯೇ ಬರೆಯುತ್ತಲೇ ಕವಿ ಕಟಗಿ ಸದಾ ಹಂಬಲಿಸಿದ್ದು ಪ್ರೀತಿಗಾಗಿ. ಪಾಪದ ಲೇಪವಿಲ್ಲದ ಆತನ ನೇರು ಮಾತುಗಳಿಗೆ ನೀವು ಮುನಿಸಿಕೊಂಡಿದ್ದರೆ ಒಬ್ಬ ಪ್ರತಿಭಾನ್ವಿತ ಪ್ರೀತಿಯ ಕವಿಯನ್ನು ಜಗಳಗಂಟ ಗೆಳೆಯನನ್ನು ಅನುಭವಿಸದೆ ಉಳಿದಿರಿ ಎಂದೇ ಅರ್ಥ.

> "ಅನುಕ್ಷಣ ಕಾಯದಲಿ
> ಅನುಗಾಲ ಕಾಡುವುದು
> ಪ್ರೀತಿ
> ಹಸಿವಿನಂತೆ.... ಸಾವಿನಂತೆ"

ಎಂದು ಸದಾ ಸಂತಸಂತೆಯೇ ಬರೆಯುತ್ತಿದ್ದ ನಮ್ಮ ಕವಿ ಕಟಗಿ, ಶಬ್ದ ಸಂತೆಯ ಮಹಾ ಗಯ್ಯಾಳಿ ಹೆಂಗಸನ್ನು ಅದೆಷ್ಟೋ ಬಾರಿ ಬಾಯಿ ಮುಚ್ಚಿಸುವುದರಲ್ಲಿ ಸೋಲುತ್ತಿದ್ದ. ವಿನಾ ಕಾರಣ ಸಣ್ಣವರು - ದೊಡ್ಡವರು, ಪೀಠದವರು - ಆಟದವರು, ಯೋಗ್ಯರು - ಅಯೋಗ್ಯರು ಎಂದೇನೇನೊ, ಯಾರ್‍ಯಾರ ಬಗೆಗೂ ಮಾನದಂಡಗಳನ್ನಿಟ್ಟುಕೊಂಡು ಕೆಂಡಾಮಂಡಲ ವಾಗುತ್ತಿದ್ದ. ಕೆಲವೊಮ್ಮೆ ಇವನ ನೋಡಿದರೆ.

*"ಹೊಟ್ಟಾಗ ಹೊಸ ಗಾಳಿ
ಹೊಕ್ಕಂಗಾಗ್ಲಿ
ಅವ್ವವ್ವ...
ಅಂಜಿಕಿ ಅವುಕ್ಕಂತು"*

ಎಂದು ಎಳೆಯರಾದ ನಮಗೆ ಅನ್ನಿಸದೆ ಇರುತ್ತಿರಲಿಲ್ಲ.

ಬಾಗಲಕೋಟೆಯ ಎಳೆಯ ಗೆಳೆಯನೊಬ್ಬ ತನ್ನ ಮೊದಲ ಕಾವ್ಯ ಸಂಕಲನ ಪ್ರಕಟಿಸಿ ಬಿಡುಗಡೆಗೆ ಯಾರನ್ನು ಕರೆಯುವುದು? ಎಂದು ನನ್ನನ್ನು ಕೇಳಿದಾಗ ಕವಿ ಶಂಕರ ಕಟಗಿಯವರನ್ನು ಸೂಚಿಸಿದೆ. ಪ್ರೀತಿಯಿಂದಲೇ ಒಪ್ಪಿಕೊಂಡು ಸಮಾರಂಭಕ್ಕೆ ಬಂದಿದ್ದ ಶಂಕರ 'ಉರಿವ ಕೆಂಡದ ಕನಸು' ಎಂಬ ಈ ಕಾವ್ಯ ಸಂಕಲನದ ಶೀರ್ಷಿಕೆಯನ್ನೇ ಮುಂದಿಟ್ಟುಕೊಂಡು 'ಉರಿವ ಕೆಂಡ, ಉರಿಯುದ ಕೆಂಡ ಎಂದು ಎರಡು ಕೆಂಡಗಳಿರುತ್ತವೆಯೇ? ಉರಿಯುವುದಲ್ಲವೂ ಕೆಂಡವೆ, ಕೆಂಡಗಳೆಲ್ಲವೂ ಉರಿಯುತ್ತಲೇ ಇರುತ್ತವೆ' ಎಂದೆಲ್ಲ ಮಾತಾಡಿ, ಕವಿಯ ಮೊದಲ ತೊದಲನ್ನೆ ತಣ್ಣಗಾಗಿಸಿಬಿಟ್ಟ. ಇನ್ನೊಮ್ಮೆ ನನ್ನ 'ಶಬ್ದಸೂತಕದಿಂದ' ವಿಮರ್ಶೆ ಸಂಕಲನ ಓದಿ ಕುರ್ತುಕೋಟಿಯವರ ಬಗೆಗಿನ ನನ್ನ ತಕರಾರುಗಳನ್ನು ಪ್ರಶ್ನಿಸಿ ತೆಪ್ಪಗಿರಲು ಸೂಚಿಸಿದ. ಮತ್ತೊಬ್ಬ ಆತ್ಮೀಯ ಗೆಳೆಯರ ಕೃತಿ ಬಿಡುಗಡೆಗೆ ಹೋಗಿ 'ಇನ್ನು ನೀನು ಯಾವುದೇ ಕೃತಿ ಬರೆಯದಿರುವುದು ಉತ್ತಮ' ಎಂದು ಫರ್ಮಾನ್ ಹೊರಡಿಸಿದ. ಹೀಗೆ ಕಟಗಿ ಎಂದರೆ ಜಗಳ, ಸ್ವಲ್ಪ ದುರಹಂಕಾರ ಮತ್ತು ಅಸಡ್ಡೆ. ಆದರೆ, ಕುತಂತ್ರವಲ್ಲ. ಖಂಡಿತವಾಗಿಯೂ ಆತ ವ್ಯಕ್ತಪಡಿಸುತ್ತಿದ್ದ ವಿಚಾರಗಳು ಬುಡರಹಿತವಾಗಿರಲಿಲ್ಲ. ಆದರೆ ಮನುಷ್ಯತ್ವದ ಕನಿಷ್ಠ ಸೌಜನ್ಯದ ಬಡತನದಿಂದ ಅವು ನರಳುತ್ತಿದ್ದವು.

ಪ್ರಪಂಚದಲ್ಲಿ ಇದುವರೆಗೆ ಕೊಲೆಯಾದ, ಗಡಿಪಾರುಗೊಂಡ ಲೇಖಕರ ಜೀವನಾಧಾರಿತ ನನ್ನ 'ಕಾವ್ಯಕ್ಕೆ ಉರುಳು' ಕೃತಿ ಬಿಡುಗಡೆ ದಿನ (೨೮-೦೯-೨೦೧೪) ನಮ್ಮ ಪ್ರೀತಿಯ ಕವಿ ಶಂಕರ ಕಟಗಿ ಈ ಲೋಕವನ್ನು ನಿರ್ಗಮಿಸಿದ. ಅದು ಶ್ರೀಮತಿ ರಾಜೇಶ್ವರಿ ದೊಡ್ಡರಂಗೇಗೌಡ ತೀರಿದ ದಿನವೂ ಕೂಡ. ಬೆಂಗಳೂರಿನ ಕ. ಸಾ. ಪದ ಸಭಾಭವನದಲ್ಲಿ ಕಟಗಿಯಿಂದ ನನ್ನವರೆಗೆ ಕನ್ನಡದಲ್ಲಿ ಸಾಲು ಸಾಲು ಕವಿಗಳ ಬೆಳೆಸಿದ ಚಂಪಾ ಈ ನಿಧನದ ವಾರ್ತೆಯನ್ನು ಸಭೆಗೆ ತಿಳಿಸಿ ಮೌನ ಆಚರಿಸುವಾಗ ಸತ್ತ ಮಗನ ಹೆಣ ಮುಂದಿಟ್ಟುಕೊಂಡು ಮಾತಿಗೆ ಪರದಾಡಿ ಸೋತು ಮೌನಕ್ಕೆ ಶರಣಾದ ತಾಯಿಯ ನೆನಪಾಗುತ್ತಿತ್ತು. ಶಂಕರ ಕಟಗಿ ತನ್ನ ಎಂ. ಎ. ಓದಿನ ದಿನಗಳಲ್ಲಿ ಇದೇ ಚಂಪಾ ಎಂಬ ದೀವಟಿಗೆಯಿಂದ ತನ್ನ ಕಾವ್ಯದ ಕನಸು ಮತ್ತು ಆ ಕ್ಷಣದ ಬದುಕನ್ನು ಕಡ ಪಡೆದು ಮುಂದೊಮ್ಮೆ ಬೆಳಕಿನ ಒಡಲಾದವನು. ತನ್ನ ಅಗಾಧ ಕಾವ್ಯ ಕೃಷಿಯ ಪ್ರಬುದ್ಧತೆಯಿಂದ ಕಡ ಕೊಟ್ಟ ಒಡಲೂ ನಿಬ್ಬೆರಗಾಗಿ ನಿಲ್ಲುವಂತೆ ಮಾಡಿದವನು. ಈ ಕವಿಗೆ ಬೇಲಿಯಾಗಿ ಅಂದು ಬೆಳೆಸಿದ ಹಿರಿಯ ಜೀವ, ಇಂದು ಜನರ ಮುಂದೆ ಬಂದು ನಿಧನ ವಾರ್ತೆ ಹೇಳುವಾಗ ನನಗೆ ನೆನಪಾದದ್ದು ಕವಿ ಕಟಗಿಯ 'ದೀಪದ ನದಿ'ಯ ಕೊನೆಯ ಸಾಲುಗಳು'-

"ಹೊತ್ತು ನಂದಿ ಕತ್ತಲಾದರೂ
ಹರಿದು ಬರಲಿಲ್ಲ ದೀಪದ ನದಿ
ಹರವಿದೆ ಆ ಸೆರಗಿನ ಮರೆಗೆ"

ನಿಸ್ಸಂಶಯವಾಗಿ ಕಟಗಿಯ ಕಾವ್ಯಕ್ಕೆ ಸಮನಾಗಿ ನಿಲ್ಲುವ ಸಮಕಾಲೀನ ಕವಿಯೊಬ್ಬನಿಲ್ಲ. ತನ್ನೆಲ್ಲ ವಾರಿಗೆಯವರಿಗಿಂತ ಭಿನ್ನವಾದ, ಪ್ರಜಾಸತ್ತಾತ್ಮಕವಾದ ನಿಲುವಿತ್ತು ಅವರ ಕಾವ್ಯದಲ್ಲಿ. ಅಲ್ಲಮನ ಬೆಡಗು, ಜನಪದರ ನುಡಿಗಟ್ಟು, ಸಾರ್ವಕಾಲಿಕ ಸಾಮಾಜಿಕ ಬದ್ಧತೆಗಳನ್ನೂ ಮರಿಹೊಡೆದು ಹಣ್ಣುಹಣ್ಣಾದ ಹೆಣ್ಣಿನ ಭಾಷೆಯಲ್ಲಿ ಬರೆಯುತ್ತಿದ್ದ ಶಂಕರ ಕಟಗಿ ತಣ್ಣನೆಯ ಮನುಷ್ಯನಲ್ಲ.

ಮರಳ ಕಿಚ್ಚಿನ ಒಲೆ ಹೂಡಿ
ನೆಲವ ಬಾಂಡಲೆ ಮಾಡಿ
ಅರಗಿನ ಹುಟ್ಟ ತಿರುವಿ"

ಕಲ್ಲ ಗುಗ್ಗರಿ ಕುದಿಸುವ ಕನಸು ಕಾಣುತ್ತಿದ್ದ ಈ ಕವಿ, ಸದಾ ಕಸಿವಿಸಿಯಿಂದ ನರಳಿದವನು. ಸಿಕ್ಕಷ್ಟೇ ಬದುಕಿನ ಕಳಿತ ಅನುಭವ ಹಾಗೂ ಅನುಭಾವವನ್ನು ಕಾವ್ಯಾಸಕ್ತರಿಗೆ ಉಣಬಡಿಸಿದ ಶಂಕರ ಕಟಗಿ, ತನ್ನ ಕಾವ್ಯ - ಕಥೆಗಳ ಮೂಲಕ ಮತ್ತೆ ಮತ್ತೆ ಕಟ್ಟಿಕೊಂಡದ್ದು ಭೂ-ತತ್ವವನ್ನು. ತಾಯಿಯನ್ನು ನಿರಂತರ ಕನವರಿಸಿ ಉಲಿದದ್ದು ನೆಲದ ಹಾಡನ್ನು. ಅವನ ಕಾವ್ಯಕ್ಕೆ ಪಂಥ-ಪಂಗಡಗಳ ಗಡಿ ಇರಲಿಲ್ಲ. ಹಾಗೆಯೇ ಅದಕ್ಕೊಂದು ನಿರಂತರತೆಯ ನಡಿಗೆಯೂ ಇರಲಿಲ್ಲ. ಅತ್ಯಂತ ಪ್ರಖರವಾಗಿ ಹೊಮ್ಮಿಯೂ ನಿಖರವಾದುದೇನನ್ನೂ ಗರ್ಭೀಕರಿಸಿಕೊಳ್ಳಲಾಗದ ಅವನ ಕಾವ್ಯ ನನ್ನಂತವರನ್ನು ಕಾಡುವುದು ಪ್ರಶ್ನೆ ಕೇಳುವ ಹುಡುಗನಂತೆ. 'ಸಾಗರ ಉಕ್ಕಿದ ಹಾಗೆ, ನಭ ನಕ್ಕ ಹಾಗೆ' ನುಡಿನೃತ್ಯಗೈದ ಕಟಗಿ ಸಾಹಿತ್ಯ ಅಂತಿಮವಾಗಿ ಏನನ್ನು ನೀಡಿತು ನಮಗೆ? ಎಂದು ಕೇಳಿಕೊಂಡರೆ ಸಿಗುವ ಉತ್ತರ 'ಬಯಲು'.

"ಕುದಿಗಣ್ಣ ಹುಡುಗ
ನಾದದೊಳಗೊಂದು ರಾಗವಾಗಿ
ಅನ್ನಮಯ ಕಾಯ ಬಿಟ್ಟು
ಬಯಲ ಆತ್ಮ ವೂ ಆಗಿ
ತಾನೇ ಬಯಲಾದಂತೆ"

ಜಾತಿ ವಾಸನೆ ಇಲ್ಲದ ಮಹಾ ಜಂಗಮ ಕಟಗಿ ಕಾವ್ಯ. ಎರಡು ಮೂರು ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿದ್ದರೂ ಅದರ ಗತಿ ಮಾತ್ರ ಕಾವ್ಯದ್ದೆ. ಇಂದಿಗೂ ನನ್ನ ಪ್ರಶ್ನೆ, ಶಂಕರ ಕಟಗಿಯ 'ಸಂಪಿಗೆ ತಾಯವ್ವ' ಗದ್ಯವೊ? ಪದ್ಯವೊ? ಆತನ 'ಗಣೆಯ ನಾದ' ವಚನಗಳ ವಿಸ್ತೃತ ಅವತಾರವೊ ಅಥವಾ ತತ್ವಪದಗಳ ಅರ್ಥವಿನ್ಯಾಸವೊ? ನನಗಂತೂ ಅವನ ಕಾವ್ಯದ ಕದಳಿ ಕಾಡ ಪಯಣದಲ್ಲಿ ಅಕ್ಕ ಮಹಾದೇವಿ, ಶರೀಫಜ್ಜ, ಬುದ್ಧ, ಮಂಡೇಲಾ, ಗಾಂಧಿ,

ಬೋದಿಲೇರ್, ಲಂಕೇಶರುಗಳು ತಮ್ಮ ಛಂಕೆಯಿಲ್ಲದ ಅನುಭವಗಳ ಬುತ್ತಿ ಅಲ್ಲಲ್ಲಿ ಬಿಚ್ಚಿಟ್ಟುಕೊಂಡು ಕುಳಿತ ಅನುಭವವಾಗಿದೆ.

ತೀರುವ ಮೊದಲು ನಾಲ್ಕಾರು ಬಾರಿ ನಾವು ಮಾತಾಡಿಸಿ, ಮುಂದಿನ ಬರಹದ ಬಗ್ಗೆ ಕೇಳಿದಾಗ ಆತ ಕೊಟ್ಟ ಉತ್ತರ ಒಂದೇ: 'ನಮ್ಮವ್ವಗ ಭಾಳ ವಯಸ್ಸಾಗ್ಯಾದ. ಆಕಿದು ಸಂತಿ ಮುಗಿದದ. ಇಂದೊ ನಾಳಿಯೊ ಹೊಂಟ ನಿಂತಾಳ. ಅವಳು ನಿಶ್ಚಿಂತ್ಯಾಗಿ ನೆಲ ಸೇರುವ ತನಕ ನಾ ಏನೂ ಬರೀಬಾರದು ಅಂದುಕೊಂಡಿದ್ದೀನಿ.' ಅವ್ವನನ್ನು ಹಾಡಿದ ಲಂಕೇಶ್ ಒಂದೆಡೆಯಾದರೆ ಅವಳ ಧ್ಯಾನಿಸಿದ ಕಟಗಿ ಇನ್ನೊಂದೆಡೆ. ಇಂದು ಸಾಯುತ್ತಾಳೆ, ಅಂದು ಸಾಯುತ್ತಾಳೆ ಎಂದು ತನ್ನೊಳಗಿನ ಒಂಟಿತನಕ್ಕೆ ಕಾವ್ಯದ ಜೋಡಿಯನ್ನು ಗಂಟು ಹಾಕಲು ಕಾಯ್ದ ಕಟಗಿಗೆ ಆ ಅವಕಾಶ ಮತ್ತೆ ಸಿಗಲೇ ಇಲ್ಲ. 'ಅವ್ವ' ಸತ್ತಳು ಎಂಬ ಸತ್ಯ ದಕ್ಕಿಸಿಕೊಳ್ಳುವುದರಲ್ಲಿಯೇ ಸಾಕಷ್ಟು ಸಮಯ ಉರುಳಿತ್ತು. ನನ್ನ ಅವನ ಕೊನೆಯ ಭೇಟಿ ಮುಧೋಳದ ರನ್ನ ಸಭಾಂಗಣದಲ್ಲಿ. ಅವ್ವನನ್ನು ಧ್ಯಾನಿಸಿ ಅವಳ ಮೈಗೇ ಕನಸುಗಳ ಅನಿಸಿ ತಾನೂ ಅವಳಂತೆಯೇ ಹಣ್ಣಾಗಿದ್ದ. ಒಂದು ತರಹದ ಬೇಸರವಿತ್ತು, ಮೌನವಿತ್ತು. ಆದರೆ ಜೀವನ ಸಮಾಧಾನವಿರಲಿಲ್ಲ. ಆದರೆ ನನ್ನ ಬರಹದ ಪಾಲಿಗೆ ಸದಾ ತಾಯಿಯ ಕಕ್ಕುಲಾತಿ ಇತ್ತು. ನನ್ನ ಧ್ವನಿ ಧಿಮಾಕಿನ ಮೋಹಕ್ಕೆ ಮೈಮರೆತು ಅಂದು ಕೂತಿದ್ದ ನೆನಪಾದರೆ ಕಣ್ಣು ಒದ್ದೆಯಾಗುತ್ತವೆ.

ಸೃಜನ ಲೋಕದ ಜಿಲ್ಲಾ- ತಾಲ್ಲೂಕು, ಜಾತಿ, ರಾಜಕಾರಣ ಗುಂಪುಗಾರಿಕೆಗಳಿಂದ ಬೇಸತ್ತು ಒಂಟಿಯಾಗಿದ್ದ ಕಟಗಿ ಕುಡಿತದಿಂದಲೂ ಬಳಲಿ ಹೋಗಿದ್ದ. ತಾನು ಬರೆಯಬೇಕೆಂದಿದ್ದ ಕೃತಿಯ ಬಗ್ಗೆ ಮಾತಾಡುತ್ತ, ಡಬ್ಬಿದಂಗಡಿಗೆ ನನ್ನೊಂದಿಗೆ ಬಂದು, ಶುಗರ ಕಾಯಿಲೆಯ ಮಧ್ಯದಲ್ಲೂ ಸಕ್ಕರೆ ಬೆರೆಸಿದ ಚಹಾವನ್ನೇ ಕುಡಿದು, ಸಾಲದಕ್ಕೆ ಕುಳಿತುಕೊಂಡು ಅಂದು ಫೋಟೋ ಬೇರೆ ತೆಗೆಸಿಕೊಂಡೆವು. ಅದೇ ಕೊನೆ. ಕವಿತೆಯ ಗಂಟು ಹೊತ್ತುಕೊಂಡು ನಿನ್ನೂರಿಗ ಬರ್ತೀನಿ, ಜಾರ್ಮಾಡಿಯೊಳಗ ಹಾಡು ಹೇಳುತ್ತ ಕಾಡುಸುತ್ತೋಣ ಎಂದ ಕಟಗಿ ನೆಲದ ಋಣ ತೀರಿಸಿ ಗೋಣು ಚೆಲ್ಲಿದ. ತಲೆಯ ಮೇಲಿನ ಹಾಡಿನ ಹೆಡಿಗೆ ಎಲ್ಲಿ ಬಿತ್ತೊ, ಈಗ ಅದ್ಯಾರ ಸೊತ್ತೊ ಕಾಲವೇ ಉತ್ತರಿಸಬೇಕು.

ಕಟಗಿ ಕಣ್ಮರೆಯಾದ. ಆದರೆ ನಮ್ಮ ನಮ್ಮ ನೆನಪುಗಳ ಆಪರೇಷನ್ ಥೇಟರ್‌ನಲ್ಲಿ ಈ ಕಪಿ ಕಾವ್ಯದ ಪೋಸ್ಟ್ ಮಾರ್ಟಮ್ ನಡೆದೇ ಇದೆ. ಮೌನ ಹೇಳುತ್ತದೆ -

“ಕವಡೆ ಒಡಲಿಗೆ ಕಡಲನು
ಕಾಳ ರಾತ್ರಿಗೆ ಬೆಳಗನು
ಬಿಡಿಸುವ ಒಬ್ಬ ಕಲೆಗಾರನಿದ್ದ”

ಅವನೀಗ ಹೊರಟು ಹೋದ ಬುದ್ಧ. ಆದರೆ, ನಮ್ಮ ಬುದ್ಧಿ ಕೇಳುವುದಿಲ್ಲ. ಭಾವ ತಡೆಯುವುದಿಲ್ಲ, ಮಾತುಗಳಿಗೆ ಶಬ್ದ ಮೂಡದಿದ್ದರೂ ಸುಮ್ಮನಿರಲಾಗುವುದಿಲ್ಲ, ಅಲ್ಲವೆ?

●

ಮತ್ತೆ ಮೂಡದ ನಕ್ಷತ್ರ*

• ದೊಡ್ಡಣ್ಣ ಬಜಂತ್ರಿ

ಕಪ್ಪು ಜನದ ಕತ್ತಲ ಗುಡಿಲಿಗೆ
ಹೆಪ್ಪು ಗಟ್ಟಿದ ಮಡಿಲ ನಡುವೆ
ಅಕ್ಷರದ ದೀವಿಗೆ ಹಚ್ಚಿ, ತುಸು
ನಸು ನಗುತ ಸಾಗಿದ ಬೆಳಕೆ!

ನೆಲದ ನಾಲಗೆ ಮೇಲೆ
ಗಣೆಯ ನಾದವ ನುಡಿಸಿ
ಕಾವ್ಯ ಕನ್ಯೆಗೆ ದಟ್ಟದಾವಣೆಯುಡಿಸಿ
ಸಂಪಿಗೆ ತಾಯವ್ವಗೆ ಮರುಗವನೇರಿಸಿ ನಕ್ಕ ಚಿಕ್ಕೆಯೆ!

ಶಬ್ದ ಗಾರುಡಿಯಲಿ ಕಟ್ಟಿ ಗಟ್ಟಿಕವನ
ಮುಳ್ಳು ಬೇಲಿಯ ಮೇಲೆ, ಮಲ್ಲಿಗೆ ಬೀರಿದ ಗಮಲು
ನಿಸರ್ಗ ಪ್ರೀತಿಗೆ ಮನಸೋತ ಕಾವ್ಯದ ಅಮಲು
ಬದುಕನ್ನೇ ಒಂದು ಮಹಾಕಾವ್ಯವಾಗಿಸಿ ಮಾಯವಾದ ಪಾತ್ರನೆ!

ನಿನ್ನ ಬದುಕಿನಾ ದಾರಿ ತುಂಬ
ಗೊಳಗೊಳಕೆ ಡಬಗಳ್ಳಿ ಸಾಲು
ಅಳುಕದೆ ನಡೆದೆ ಬನದ ಕರಡಿಯ ಹಾಗೆ
ಕಾವ್ಯ ಕಟ್ಟುವ ಕಕ್ಕುಲತೆಗೆ ರಾತ್ರಿ
ಹಗಲಾಗಿತ್ತು, ಹಗಲು ರಾತ್ರಿಯಾಗಿತ್ತು
ಮುಸ್ಸಂಜೆಯ ಮುಸುಕಿನಲಿ ಮರೆಯಾಗಿ ಹೋದ ಚಂದ್ರನೆ!

ನಡೆ ನುಡಿ ಗಜ ಗಾಂಭೀರ್ಯ
ನುಡಿದದ್ದೇ ಕಾವ್ಯ, ನಡೆದದ್ದೇ ಕಥೆ
ಹಾಡು ಪಕ್ಕಿಯಾಗಿ ಉಲಿದದ್ದೇ ಹೊಸ ಹೊಸ ಹಾಡು.
ಮುಸ್ಸಂಜೆಯ ಮುಸುಕಿನಲಿ ಕರಗಿದ ನಕ್ಷತ್ರವೇ!
ಓ! ಶಂಕರ, ಕಾವ್ಯ ಕಿಂಕರ
ಇದೊ ಹಾಕುವೆ ನುಡಿನಮನದ ಮುತ್ತಿನ ಹಾರ.

•

* ಕವಿ ಶಂಕರ ಕಟಗಿಯ ನೆನಪಿನಲ್ಲಿ

ವೈಚಾರಿಕತೆ

● ಮುತ್ತುರಾಜು

ಹಾದಿ ಬದಿಗಳಲಿ ಕುಳಿತು
ಕಳೆದ ಬಹಿರ್ದೆಸೆಯ ದುರ್ವಾಸನೆ
ಎದೆಗು ಮೀರಿ ಹೆಮ್ಮರವ ತಲುಪಿದರು
ಜಾತಿ ಭೇದಗಳಿಗೆ ಮುಪ್ಪಿನ ಮರಣವಿಲ್ಲ

ಬೊಗಳೆ ಬೆಂಬಿಡದ ಜಿಗಣೆ ರೂಪುಗಳ
ಪೂಜೆ ಪುನಸ್ಕಾರಗಳಿಗೆ ಸುನಾಮಿ
ಭೂಕಂಪ ಜ್ವಾಲಾಮುಖಿ ಬಿರುಗಾಳಿ
ಬಂದರೂ ಕೇಡಿಲ್ಲ

ಜ್ಞಾನ ವಿಜ್ಞಾನಗಳು ಮಂಗಳವ ದಾಟಿದರು
ಮಂಗಳಾರತಿ ತಣಿಗೆಗೆ ಕ್ಷಯವಿಲ್ಲ
ಮನೆ ಮಹಲು ಹುಚ್ಚೆದ್ದು ಕೊಚ್ಚಿ ಹೋದರೂ
ವಾಸ್ತು ಶಾಸ್ತ್ರದ ಅಜ್ಞಾನಕ್ಕೆ ಬದಲೆಂಬುದಿಲ್ಲ

ಜಳ್ಳು ನುಡಿಗಳ ದಳ್ಳುರಿಯ ಜ್ಯೋತಿಷಿಗಳಿಗೆ
ಮೈ ಒಡ್ಡಿ ಒದ್ದಾಡಿದ ಮಂಗಳೆಯರ ನೆನಪಿದ್ದರೂ
ಕೈ ಚಾಚುವ ಚಂಚಲದ ಮಂಕು ಮಣಿಗಳಿಗೆ
ಕೊನೆ ಮೊದಲು ಮೊದಲೇ ಇಲ್ಲ.

ಮಸಣದಲ್ಲಿ ಕುಳಿತು ಅನ್ನವುಣ್ಣುವ
ವಿಜ್ಞಾನದಣ್ಣರಿಗೆ ಬೆಂಬಲದ ಬಲವಿಲ್ಲ
ಹೊನ್ನು ಒಡವೆ ಹಣಗಳನಿತ್ತು ದೈವೋಲಿಸುವ
ಪರಿಗೆ ಅಂತ್ಯವೆನ್ನುವ ಮುಕ್ತಾಯವಿಲ್ಲ

ಮಂಕು ಮುಗಿಯದ ತನಕ
ಮರುಳು ಬೆವರದ ತನಕ
ವೈಚಾರಿಕ ನಿಲುವು ನಿಲುಕದಲ್ಲ
ಅವೈಚಾರಿಕತೆ ಮಸಣದಲಿ ಮಣ್ಣಾಗದಲ್ಲ

●

ಬದುಕು ಸಾವಿನ ಮಧ್ಯೆ

• ಕರುಣಾಕರ ಎನ್. ಶೆಟ್ಟಿ

ಸಾವು ಬದುಕಿನ ಹಿಂದೆ ಓಡುತ್ತಿರುತ್ತೇವೆ
ಸಾವು ನಮ್ಮ ಬೆನ್ನ ಹಿಂದೆ
ಹೊಂಚು ಹಾಕುತ್ತಿದ್ದೆಯೆಂಬುದನ್ನು
ಅರಿತು ಕೊಂಡಿದ್ದರೂ
ಬದುಕಿನ ಹಿಂದೆಯೆ ಸಾಗುವ ನಮಗೆ
ಸಾವು ನಿಶ್ಚಿತವೆನ್ನುವ ಮಾತಿನ
ನೆನಪೆ ಇರುವುದಿಲ್ಲ
ನಮ್ಮ ಬೆನ್ನ ಹಿಂದೆ ಸಾವು
ಗಾಳ ಹಾಕುತ್ತಲೇ ಇರುತ್ತದೆ
ಉಸಿರು ಒಳಗೆ ಹೊರಗೆ ಹೋಗುತ್ತಿದ್ದರೂ
ಅದು ಯಾವ ಕ್ಷಣದವರೆಗೆ
ಹೇಳಲು ಸಾಧ್ಯವೇ ಇಲ್ಲ
ಬದುಕು ಸಾವಿನ ಮಧ್ಯೆ
ನಿರಂತರ ಓಟ ನಡೆದೆ ಇರುತ್ತದೆ
ಸಾವು ಬಾಗಿಲು ಬಡಿದ ತಕ್ಷಣ
ಇದ್ದದ್ದನ್ನು ಇದ್ದಲ್ಲಿಯೆ ಬಿಟ್ಟು
ತೊಟ್ಟ ಬಟ್ಟೆಯಲ್ಲೆ
ದೂರ ದೂರ ಹೋಗಲೇ ಬೇಕಾಗುತ್ತದೆ
ಎನ್ನುವ ಈ ಕಟು ಸತ್ಯ
ನಮ್ಮವರಿಗೆ ಅದೇಕೆ
ಬರುವುದೇ ಇಲ್ಲ....?

•

೨೦೧೪ರ ಪ್ರಕಟನೆಗಳು

೧೪೭. **ಕಣ್ಣೊಳಗೆ ಕುಳಿತ ಚೆಲುವ (ಕಾವ್ಯ)** : ಪ್ರೇಮಾ ನಡುವಿನಮನಿ
ಪಾರ್ವತಿ ಪ್ರಕಾಶನ, ಧಾರವಾಡ ರೂ. ೧೦೦

೧೪೮. **ಒಕ್ಕಲಿಗರು- ಪ್ರಭೇದಗಳು** : ಎಂ. ಎಚ್. ನಾಗರಾಜು
ಶ್ರಮ ಸಂಸ್ಕೃತಿ ಪ್ರಕಾಶನ, ತುಮಕೂರು ರೂ. ೨೫

೧೪೯. **ನಮ್ಮೂರು - ನಮ್ಮ ಮಠ** : ಗುರು ಬಸವ ಸ್ವಾಮಿಗಳು
ತೋಂಟದಾರ್ಯ ಮಠ, ಶಿರೋಳ (ಗದಗ) ರೂ. ೧೫೦

೧೫೦. **ಬೆಳೆಯುವ ಪೈರು** : ಯೋಗೇಶ್ ಮಾಸ್ಟರ್
ರಾಜ ಮಾರ್ಗ ಸಾಹಿತ್ಯ ಸಂಸ್ಕೃತಿ, ಬೆಂಗಳೂರು - ೫೬ ರೂ. ೧೫೦

೧೫೧. **ನಮ್ಮ ಮೆಚ್ಚಿನ ಕವಿಗಳು** : ಸಂ. ಗೌರಿ ಸುಂದರ
ಸುಂದರ ಪ್ರಕಾಶನ, ಬೆಂಗಳೂರು- ೧೯ ರೂ. ೧೭೦

೧೫೨. **ಹನಿವಾಹಿನಿ** : ಎಚ್. ಡುಂಡಿರಾಜ
ಅಂಕಿತ ಪುಸ್ತಕ, ಬೆಂಗಳೂರು - ೪ ರೂ. ೯೫

೧೫೩. **ನೆನೆಯಿಟ್ಟ ನೆನಪು (ಕಾವ್ಯ)** : ಶಿವಾನಂದ ಪೂಜಾರಿ
ಗಿರಿಜಾ ಪ್ರಕಾಶನ, ಬಾಗಲಕೋಟೆ ರೂ. ೭೫

೧೫೪. **ಬಯ್ಗಳ** : ಸಿ. ಪಿ. ನಾಗರಾಜ
ನಾಗು ಸ್ಮಾರಕ ಪ್ರಕಾಶನ, ಬೆಂಗಳೂರು - ೪೦ ರೂ. ೯೦

೧೫೫. **ದೇವರ ಜಾತ್ರೆ (ಸಣ್ಣ ಕತೆ)** : ನರಸಿಂಹಮೂರ್ತಿ ಹೂವಿನಹಳ್ಳಿ
ಪ್ರೇರಣ ಪ್ರಕಾಶನ, ಬೆಂಗಳೂರು - ೪೦ ರೂ. ೧೬೦

೧೫೬. **ದಿಲ್ಲಿ ಡೈರಿಯ ಪುಟಗಳು** : ರೇಣುಕಾ ನಿಡಗುಂದಿ
ಅಪರ್ಸಿರಿ ಪ್ರಕಾಶನ, ಶಿವಮೊಗ್ಗ ರೂ. ೧೪೦

೧೫೭. **ಅಮರ ರಾಮಾಯಣ** : ವಿದುಷಿ ಸರೋಜಾ ಶ್ರೀನಾಥ
ಅಭಿಜಿತ್ ಪ್ರಕಾಶನ, ಶಿವಮೊಗ್ಗ ರೂ. ೧೫೦

೧೫೮. **'ಜೇವಿ' ಸಾಹಿತ್ಯ ಸಮಗ್ರ ದರ್ಶನ** : ಜಿ. ಎನ್. ಉಪಾಧ್ಯ
ಕನ್ನಡ ಅಧ್ಯಯನ ವಿಭಾಗ, ಮುಂಬೈ ವಿ.ವಿ. ಮುಂಬೈ ರೂ. ೩೦೦

೧೫೯. **ಕುಮಾರ ವ್ಯಾಸ ಭಾರತ ಸಮೀಕ್ಷೆ** : ಕುಂ. ಬಾ. ಸದಾಶಿವಪ್ಪ
ಕೆ. ನಾಗರಾಜ / ಕೆ. ನಾಗರತ್ನ, ಹರಪನಹಳ್ಳಿ ರೂ. ೧೫೦

೧೬೦. **೬೬ ಹಳ್ಳಿಯ ಒಡತಿ ಗ್ರಾಮದೇವತೆ** : ಹೀ. ಗೂ. ದುಂಡ್ಯಪ್ಪ
ಕುಂಬೇಶ್ವರ ಪ್ರಕಾಶನ, ಹರಿಹರ ರೂ. ೪೦

೧೬೧. **ದೇವರು ಹೀಗಿದ್ದಾನೆ!!!** : ಎಸ್. ಓಂಕಾರಯ್ಯ ತವನಿಧಿ
ವೇದಗಂಗಾ ಪ್ರಕಾಶನ, ದಾವಣಗೆರೆ ರೂ. ೨೦೦

೧೬೨. **ಸಂವಾದ ಸಂಪದ** : ಸಂ. ಶಾಮಸುಂದರ ಬಿದರಕುಂದಿ
(ವಾಮನ ಬೇಂದ್ರೆ ಅಭಿನಂದನ ಗ್ರಂಥ)
ಆಲೋಚನ ಪ್ರಕಾಶನ, ಹುಬ್ಬಳ್ಳಿ ರೂ. ೨೦೦

೧೬೩. **ಬಾಗಲಕೋಟ ಜಿಲ್ಲಾ ಸಂಸ್ಕೃತಿ** : ಸಂ. ವಿ. ಕಟಗಿಹಳ್ಳಿಮಠ
ಜಿಲ್ಲಾ ಕ. ಸಾ. ಪ., ಬಾಗಲಕೋಟ ರೂ. ೨೦೦

೧೬೪. **ವಿಷ್ಣುನಾಯ್ಕ ಸಾಹಿತ್ಯ ಕೃತಿ ಸಮೀಕ್ಷೆ** : ಸಂ. ಜೆ. ಪ್ರೇಮಾನಂದ
ಪರಿಮಳ, ಅಂಬಾರಕೊಡ್ಲ, ಅಂಕೋಲಾ (ಉ.ಕ.) ರೂ. ೩೦೦

೧೬೫. **ಬಾಂದಳದ ಬೆಳಕು (ಪ್ರಬಂಧ)** : ಶಂಭುಲಿಂಗ ಕಾಮಣ್ಣ
ಪೂರ್ಣಿಮಾ ಪ್ರಕಾಶನ, ಭಾಲ್ಕಿ (ಬೀದರ) ರೂ. ೭೫

೧೬೬. **ಹಳಗನ್ನಡ ಲಿಪಿ, ಲಿಪಿಕಾರ, ಲಿಪಿ ವ್ಯವಸಾಯ** : ಷ. ಶೆಟ್ಟರ್
ಅಭಿನವ ಪ್ರಕಾಶನ, ಬೆಂಗಳೂರು - ೪೦ ರೂ. ೬೦೦

•

ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್ : ಬೆಂಗಳೂರು

೧೬೭. **ಅರಿವಿನ ಹಾಡುಗಳು** : ಸಂ. ರುದ್ರಪ್ಪ ಹನಗವಾಡಿ ರೂ. ೨೩೦

೧೬೮. **ಅವಳ ಹೆಜ್ಜೆಯ ಹಾದಿ ಹಿಡಿದು** : ಇಂದಿರಾ ಕೃಷ್ಣಪ್ಪ ರೂ. ೧೧೫

•

೧೬೯. **ಡಾ. ಪ್ರಕಾಶ ಗ. ಖಾಡೆ** : ಗುರುರಾಜ ಲೂತಿ
ಅನಿಕೇತನ ಪ್ರಕಾಶನ, ಬಾಗಲಕೋಟೆ ರೂ. ೧೦

•

ಶ್ರೀ ಕುಮಾರೇಶ್ವರ ಗ್ರಂಥಮಾಲೆ : ಜಮಖಂಡಿ

೧೭೦. **ವಚನದಿಂಚರ** : ಅಭಿನವ ಚೆನ್ನಬಸವ ಸ್ವಾಮಿಗಳು ರೂ. ೫೦

೧೭೧. **ದುಬಾರಿ ದುಬಾಯಿ** : ಅಭಿನವ ಚೆನ್ನಬಸವ ಸ್ವಾಮಿಗಳು ರೂ. ೫೦

•

ಲಿಂಗಾಯತ ಅಧ್ಯಯನ ಸಂಸ್ಥೆ : ಗದಗ

೧೭೨. **ಕರವೀರಪ್ಪ ಅಂಗಡಿ** : ರಶ್ಮಿ ಸುರೇಶ ರೂ. ೨೦

೧೭೩. **ಡಾ. ಎಂ. ಎಸ್. ಲಠ್ಠೆ** : ವೀರಣ್ಣ ದಂಡೆ ರೂ. ೨೦

೧೭೪. **ಜಸ್ಟೀಸ್ ಟಿ. ಎನ್. ಮಲ್ಲಪ್ಪ** : ಕೆ. ಎಂ. ರೇವಣ್ಣ ರೂ. ೨೦

೧೭೫. ಎಸ್. ಬಿ. ಶಾಪೇಟಿ : ಜಿ. ಎಂ. ಹೆಗಡೆ ರೂ. ೨೦

೧೭೬. ಗಳಂಗಳಪ್ಪ ಪಾಟೀಲ : ಜಯಶ್ರೀ ದಂಡೆ ರೂ. ೨೦

೧೭೭. ಡಾ. ಬಿ. ಕೆ. ಖಡಬಡಿ : ಜಿ. ಕೆ. ಹಿರೇಮಠ ರೂ. ೨೦

೧೭೮. ಬಿ. ಎಂ. ಸಾಣಿಕೊಪ್ಪ : ಬಸವರಾಜ ಜಗಜಂಪಿ ರೂ. ೨೦

೧೭೯. ಗಂಗಪ್ಪ ವಾಲಿ : ಮಲ್ಲಿಕಾರ್ಜುನ ಸಿದ್ಧಣ್ಣನವರ ರೂ. ೨೦

೧೮೦. ರುದ್ರಪ್ಪ ಕೋರಿವಾಲೆ : ರಾಜಶೇಖರ ಇಚ್ಚಂಗಿ ರೂ. ೨೦

೧೮೧. ಪದ್ಮಾವತಿ ಅಂಗಡಿ : ಉಜ್ವಲಾ ಹಿರೇಮಠ ರೂ. ೨೦

•

೧೮೨. ನನ್ನ ಶಬ್ದ ನಿನ್ನಲಿ ಬಂದು (ಕಾವ್ಯ) : ಕೆ. ಪಿ. ಮೃತ್ಯುಂಜಯ
ಲಡಾಯಿ ಪ್ರಕಾಶನ, ಗದಗ ರೂ. ೧೦೦

•

ಸಹನಾ ಪ್ರಕಾಶನ : ಕಲಬುರ್ಗಿ -೩

೧೮೩. ಪುಸ್ತಕಗಳು ಜಗತ್ತನ್ನು ಆಳುತ್ತಿವೆ : ಎಚ್. ಎಸ್. ಬೇನಾಳ ರೂ. ೫೦

೧೮೪. ಹಿಂದುಳಿದ ವರ್ಗಗಳಿಗೆ ಅಂಬೇಡ್ಕರ್ ಕೊಡುಗೆ :
ಎಚ್. ಎಸ್. ಬೇನಾಳ ರೂ. ೬೦

೧೮೫. ಅಂಬೇಡ್ಕರ್ – ದಲಿತ ಚಳುವಳಿ : ಎಚ್. ಎಸ್. ಬೇನಾಳ ರೂ. ೭೦

೧೮೬. ಅಂಬೇಡ್ಕರ್ ಹೋರಾಟ ಯಾರ್‍ಯಾರಿಗಾಗಿ: ಎಚ್.ಎಸ್.ಬೇನಾಳ ರೂ. ೧೦೦

•

೧೮೭. ಸಂಕ್ರಮಣ ಸುವರ್ಣ ಸಂಪುಟ–೨ : ಸಂ. ಚಂದ್ರಶೇಖರ ಪಾಟೀಲ
ಸಂಕ್ರಮಣ ಪ್ರಕಾಶನ, ಬೆಂಗಳೂರು-೭೮ ರೂ. ೪೫೦

•

೧೮೮. ನನ್ನ ಮಟ್ಟಿಗೆ (ಕಾವ್ಯ) : ಬಿ. ಆರ್. ಲಕ್ಷ್ಮಣ ರಾವ್
ಅಂಕಿತ ಪ್ರಕಾಶನ, ಬೆಂಗಳೂರು ರೂ. ೯೫

೧೮೯. ಇತಿಹಾಸದ ಸತ್ಯ ಕತೆಗಳ ಸುತ್ತ (೧) : ರಾಜಶೇಖರ ಮಠಪತಿ
ಕಣ್ವ ಪ್ರಕಾಶನ, ಬೆಂಗಳೂರು ರೂ. ೮೦

೧೯೦. ದಕ್ಷಿಣದ ಸಂತ ಕವಿಗಳು : ಕೆ. ಬಿ. ಬ್ಯಾಳಿ
ತಾಯಿ ಪ್ರಕಾಶನ, ಕುಕನೂರು ರೂ. ೧೨೦

೧೯೧. ಕಳವಳ ಕಳಕಳಿ : ಮಂಜುನಾಥ ಡೊಳ್ಳಿನ
ಹೊನ್ನಂಬರಿ ಪ್ರಕಾಶನ, ಕೊಪ್ಪಳ ರೂ. ೧೦೦

೧೯೨. **ನದಿಯ ನೂರು ಕಾಲು (ಕಾವ್ಯ) :** ಮಂಜುನಾಥ ಬಮ್ಮನಕಟ್ಟಿ
ಧನ್ಯಾ ಪಬ್ಲಿಕೇಷನ್, ಗದಗ. ರೂ. ೭೫

•

೧೯೩. **ಮತ್ತೆ ಬಂತು ಶ್ರಾವಣ (ಕಾವ್ಯ) :** ಸಂ. ವಿಕ್ರಮ ವಿಸಾಜಿ
ಕ್ರೈಸ್ತ ಯೂನಿವರ್ಸಿಟಿ ಕನ್ನಡ ಸಂಘ. ಬೆಂಗಳೂರು-೨೬ ರೂ. ೨೦೦

೧೯೪. **ಅಮ್ಮ ಅಂದ್ರೆ ಅಷ್ಟಿಷ್ಟಲ್ಲ (ಕಾವ್ಯ) :** ವಿಜಯಕಾಂತ ಪಾಟೀಲ
ಸಂಸ್ಕೃತಿ ಪ್ರಕಾಶನ, ಬಳ್ಳಾರಿ. ರೂ. ೬೦

೧೯೫. **ಭಾರತದ ಬೇಸಾಯಗಾರರೆಲ್ಲ ಬೌದ್ಧರು :** ಕೆ. ಎಸ್. ಭಗವಾನ್
ಮಹಿಮ ಪ್ರಕಾಶನ, ಮೈಸೂರು - ೨೩ ರೂ. ೧೦೦

೧೯೬. **ಮೂಲ ತಾನದ ನಾಗಬ್ರಹ್ಮ ಮತ್ತು ಪರಿವಾರ ದೈವಗಳ ಪಾಡ್ದನ :**
ಇಂದಿರಾ ಹೆಗಡೆ
ಕರ್ನಾಟಕ ಜಾನಪದ ವಿ. ವಿ., ಗೊಟಗೋಳಿ, ಹಾವೇರಿ ರೂ. ೧೫೦

೧೯೭. **ಬಾನಿಗೊಂದು ಎಲ್ಲೆ ಎಲ್ಲಿದೆ :** ಅನು : ಭಾರತಿ ಮೋಹನ ಕೋಟಿ
ಬೆರಗು ಪ್ರಕಾಶನ, ಕೊಪ್ಪಳ ರೂ. ೧೨೦

೧೯೮. **ಗುಲಾಬಿ ಮುಳ್ಳು (ಕಾವ್ಯ) :** ರಾಜೇಂದ್ರ ಬುರಡಿ ಕಟ್ಟಿ
ಅಮೃತ ಪ್ರಕಾಶನ, ಕೊಪ್ಪಳ. ರೂ. ೬೦

೧೯೯. **ಸಮಾಜವಾದ ವಾದ-ವಿವಾದ :** ಬಾಪು ಹೆದ್ದೂರ ಶೆಟ್ಟಿ
ಅನ್ವೇಷಣೆ ಪ್ರಕಾಶನ, ಬೆಂಗಳೂರು - ೬೧ ರೂ. ೨೦೦

೨೦೦. **ಮನುಷ್ಯನ ಹುಡುಕಾಟದಲ್ಲಿ:** (ಎಸ್. ಎಸ್.ಹಿರೇಮಠ ಸಂಸ್ಮರಣ ಗ್ರಂಥ)
ಸಂ. ಎಚ್. ಶೇಷಗಿರಿ ರಾವ್,
ಮಲ್ಲಿಗೆ ಪ್ರಕಾಶನ, ಬೆಂಗಳೂರು ರೂ. ೧೫೦

೨೦೧. **ನೆನಪಿನ ಚಿತ್ತಾರ :** ಎಂ. ಎಸ್. ಭಾಸ್ಕರ
ಚತುರ್ಮುಖ ಪ್ರಕಾಶನ, ಬೆಂಗಳೂರು ರೂ. ೭೦

೨೦೨. **ಬುದ್ಧಿ ದೀಪದ ಬೆಳಕು :** ಮಲ್ಲಿಕಾರ್ಜುನ ಮಹಾಮನೆ
ಬಹುರೂಪಿ ಪ್ರಕಾಶನ, ಬೆಂಗಳೂರು ರೂ. ೧೬೦

•

ಲಡಾಯಿ ಪ್ರಕಾಶನ : ಗದಗ

೨೦೩. **ಲೋಹಿಯಾ : ವ್ಯಕ್ತಿ ಮತ್ತು ವಿಚಾರ :**
ಬಾಪು ಹೆದ್ದೂರ ಶೆಟ್ಟಿ ರೂ. ೨೦೦

೨೦೪. **ಬೇಯುವ ಉಸಿರಿನ ಗುರುತು (ಸಣ್ಣಕತೆ) :**
ಎ.ಆರ್. ಪಂಪಣ್ಣ ರೂ. ೯೦

೨೦೫. **ದಲಿತ ಸಮಾಜ : ಸವಾಲುಗಳು:**
ಜಿ.ಅರ್ಯ / ಆರ್.ಪಿ.ಹೆಗಡೆ ರೂ. ೮೦

೨೦೬. **ದಲಿತ ಸಾಹಿತ್ಯದ ಸೌಂದರ್ಯ ಶಾಸ್ತ್ರ :**
ಓಂ.ಪ್ರ. ವಾಲ್ಮೀಕಿ / ಆರ್.ಪಿ.ಹಗಡೆ ರೂ. ೨೦

•

೨೦೭. **ನೀರಗ್ರಾಹಿ – ದಲಿತ ಮಹಾಪ್ರಜ್ಞೆ:** ಸಂ. ದು ಸರಸ್ವತಿ
ಕವಿ ಪ್ರಕಾಶನ, ಕವಲಕ್ಕಿ (ಉ. ಕ.) ರೂ. ೪೦೦

೨೦೮. **ಪಂಪನ ಆದಿ ಪುರಾಣ :** ತಿಳಿಗನ್ನಡ ಅವತರಣ - ವೆಂಕಟೇಶ ಮೂರ್ತಿ
ಅಭಿನವ ಪ್ರಕಾಶನ, ಬೆಂಗಳೂರು - ೪೦ ರೂ. ೨೦೦

೨೦೯. **ಬಣ್ಣದ ಹಕ್ಕಿ (ಮಕ್ಕಳ ಕಾವ್ಯ) :** ಕೊತ್ತಲ ಮಹಾದೇವಪ್ಪ
ಜಯಶ್ರೀ ಜಯ ಪ್ರಕಾಶನ, ಲಕ್ಷ್ಮೇಶ್ವರ ರೂ. ೫೦

೨೧೦. **ಊರ ಸುಟ್ಟರೂ ಹನುಮಪ್ಪ ಹೊರಗ (ನಾಟಕ) :** ಹನುಮಂತ ಹಾಲಿಗೇರಿ
ಸಹಜ ಪ್ರಕಾಶನ, ಬಾಗಲಕೋಟೆ ರೂ. ೧೧೦

೨೧೧. **ಹೊರವಲಯದ ಗಾಳಿ (ಕಾವ್ಯ) :** ಬಿ. ಎ. ಸನದಿ
ಸುಂದರ ಪುಸ್ತಕ ಪ್ರಕಾಶನ, ಧಾರವಾಡ ರೂ. ೭೦

•

ರಾಜಮಾರ್ಗ ಸಾಹಿತ್ಯ ಸಂಸ್ಕೃತಿ : ಬೆಂಗಳೂರು - ೫೬

೨೧೨. **ತೆಲಸಂಗದ ತೇರು :** ಮೀರಾಸಾಹೇಬ್ ಎಂ. ಮುಲ್ಲಾ ರೂ. ೧೦೦

೨೧೩. **ಬಿತ್ತಿದಂತೆ ಬೆಳೆ :** ಯೋಗೇಶ ಮಾಸ್ಟರ್ ರೂ. ೨೦೦

೨೧೪. **ಬೆಳೆಯುವ ಪೈರು :** ಯೋಗೇಶ ಮಾಸ್ಟರ್ ರೂ. ೧೫೦

•

ನವ ಕರ್ನಾಟಕ ಪ್ರಕಾಶನ : ಬೆಂಗಳೂರು - ೧

೨೧೫. **ಸಮಗ್ರ ನಿರೀಶ್ವರ ವಾದ :** ಬೇಡೆಕರ / ಪ್ರೋಕಳೆ ರೂ. ೧೬೫

೨೧೬. **ಕೋಮು ಸಾಮರಸ್ಯ (ಕಾವ್ಯ) :** ಸಂ. ಕಾವೆಂಶ್ರೀ ರೂ. ೧೫೦

೨೧೭. **ಮನುಷ್ಯ ಜಾತಿ ತಾನೊಂದೆ ವಲಂ:** ಸಂ. ಕಾವೆಂಶ್ರೀ ರೂ. ೧೦೦

೨೧೮. **ಮಹಿಳೆ ಮತ್ತು ಮೌಢ್ಯ :** ವಸುಂಧರಾ ಭೂಪತಿ ರೂ. ೭೫

೨೧೯. **ಮೇಲ್ಜಾತಿಯ ಹಿಂದೂ ಮಹಿಳೆ :** ಪಂಡಿತಾ ರಮಾಬಾಯಿ/ಶಂಕರ ರೂ. ೬೦

೨೨೦. **ನಂಬಿಕೆ ಮೂಢ ನಂಬಿಕೆ, ವೈಜ್ಞಾನಿಕ ಮನೋವೃತ್ತಿ :** ಅ.ರ.ಪಾಷ ರೂ. ೧೨೫

೨೨೧. **ಹಿಂದು ಸವರ್ಣ ದಲಿತ ಸಂಘರ್ಷ :** ಲಿಂಬಾಳೆ / ಪ್ರಮೀಳಾ ರೂ. ೧೨೦

ವಿಷ್ಣು ನಾಯ್ಕ ಮೊ: ೯೪೪೮೧ ೪೫೩೭೦	ಪರಿಮಳ, ಅಂಬಾರಕೊಡ್ಲ ಅಂಕೋಲಾ (ಉ. ಕ.) ೫೮೧೩೧೪
ಡಾ. ಪ್ರಕಾಶ ಗ. ಖಾಡೆ ಮೊ: ೯೮೪೫೫ ೦೦೮೯೦	ಎಸ್-೧೩೫, ಸೆಕ್ಟರ್ ೬೩, ಸರಸ್ವತಿ ಬಡಾವಣೆ ನವನಗರ, ಬಾಗಲಕೋಟ ೫೮೭ ೧೦೩
ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಮೊ: ೯೪೪೮೬ ೩೦೬೩೭	ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ ಧಾರವಾಡ ೫೮೦೦೦೪
ಡಾ. ಜಿ. ಎಸ್. ಆಮೂರ ಮೊ: ೦೮೩೬ ೨೭೪೪೮೫೩	ಜಾನಕಿ, ನವೋದಯನಗರ ಧಾರವಾಡ ೫೮೦೦೦೩
ಕುಪ್ಪಳ್ಳಿ ಎಂ. ಬೈರಪ್ಪ ಮೊ: ೯೭೪೧೪ ೩೬೭೨೩	ಸಂಶೋಧಕ, ಕುವೆಂಪು ಕ. ಅ. ಸಂಸ್ಥೆ ಮಾನಸಗಂಗೋತ್ರಿ, ಮೈಸೂರು-೫೭೦೦೦೬
ಡಾ. ಬಿ. ಟಿ. ದೇಸಾಯಿ ಮೊ: ೯೧-೯೮೪೯೫ ೬೬೦೩೩	# ೧೫೭, ಶ್ರೀಸಾಯಿ ರೆಸಿಡೆನ್ಸಿ, ವಿವೇಕಾನಂದಪುರಂ ಸಿಕಂದರಾಬಾದ - ೫೦೦೦೯೪ (ಆಂ. ಪ್ರ)
ಡಾ. ಎಚ್. ಶಶಿಕಲಾ ಮೊ: ೯೪೮೧೮ ೧೦೨೫೭	ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿ. ವಿ., ಬೆಂಗಳೂರು-೫೬೦೦೫೬
ಡಾ. ವಾಸುದೇವ ಶೆಟ್ಟಿ ಮೊ: ೯೪೮೦೧ ೪೪೪೪೩	# ೮೯, ಕ್ರಾಸ್ ೩, ವೆಂಕಟೇಶ್ವರ ನಗರ ಜಕ್ಕೂರು ಅಂಚೆ, ಬೆಂಗಳೂರು ೫೬೦೦೬೪
ಡಾ. ರಾಜಶೇಖರ ಮಠಪತಿ (ರಾಗಂ) ಮೊ: ೯೫೩೫೦ ೨೨೭೦೦	ಸಮನ್ವಯಾಧಿಕಾರಿ, ಯು.ಜಿ.ಸಿ. ಕಾಲೇಜು ಶಿಕ್ಷಣ ಇಲಾಖೆ, ಎಂ. ಎಸ್. ಬಿಲ್ಡಿಂಗ್ ಬೆಂಗಳೂರು ೫೬೦೦೦೧
ದೊಡ್ಡಣ್ಣ ಬಜಂತ್ರಿ ಮೊ: ೯೪೪೯೨ ೭೯೮೭೨	# ೧೬, ಸುದೀವಿ, ಬಿ.ಎಲ್.ಡಿ.ಇ. ಟೀಚರ್ಸ್ ಕಾಲನಿ ವಿಜಯಪುರ ೫೮೬ ೧೦೩
ಡಾ. ಮುತ್ತು ರಾಜು ಮೊ: ೦೯೮೪೫೫೭೭೯೬೫೦	ಕನ್ನಡ ಅಧ್ಯಾಪಕರು, ಜವಾಹರ ನವೋದಯ ವಿದ್ಯಾಲಯ ಕಾನೀವಾಡ, ಶಿವನಿಜಿಲ್ಲೆ (ಮ. ಪ್ರ.) ೪೮೦೯೯೦
ಕರುಣಾಕರ ಎನ್. ಶೆಟ್ಟಿ ಮೊ: ೯೪೪೯೦ ೪೬೬೩೮	# ೬೦೨, ಆದಿನಾಥ ಸಿ.ಎಚ್ಎಸ್., ರಾಮಚಂದ್ರನಗರ ೧, ವಾಗಲೆ ಎಸ್ಟೇಟ್ ಠಾಣೆ (ಪ) ೪೦೦೬೦೪ (ಮಹಾರಾಷ್ಟ್ರ)

50th YEAR
OF PUBLICATION

ಸಂಕ್ರಮಣ

Mar. - Apr.
2015

SANKRAMANA : PERIODICAL
REGD. WITH THE REGISTRAR OF NEWSPAPERS FOR INDI
VIDE RNI No. 29730/76
EDITOR: CHANDRASHEKHAR PATIL
Vol. 50 : No. 02 March - April 2015

ವಿಷ್ಣು ನಾಯ್ಕ

ಪ್ರಕಾಶ ಗ. ಖಾಡೆ

ಸಿದ್ಧಲಿಂಗ ಪಟ್ಟಣಶೆಟ್ಟಿ

ಜಿ. ಎಸ್. ಆಮೂರ

ಕುಪ್ನಳ್ಳಿ ಎಂ. ಬೈರಪ್ಪ

ಬಿ. ಟಿ. ದೇಸಾಯಿ

ವಾಸುದೇವ ಶೆಟ್ಟಿ

ಎಚ್. ಶಶಿಕಲಾ

ರಾಜಶೇಖರ ಮಠಪತಿ (ರಾಗಂ)

ದೊಡ್ಡಣ್ಣ ಬಜಂತ್ರಿ

ಮುತ್ತು ರಾಜು

ಕರುಣಾಕರ ಎನ್. ಶೆಟ್ಟಿ

ಚಂಪಾ

SANKRAMANA PRAKASHANA
2nd Main, Jyothi Layout, Yelachenahalli
J. P. Nagar Post, Bangalore–560 078
✆080-2632 33 44, Mob.: 94490-69344